# ಅರ್ಥ –1, ಜನವರಿ




ಇಂದು ಭಾರತದ ಆರ್ಥಿಕತೆ ಸಂಕಷ್ಟದಲ್ಲಿದೆ. ನೋಡಲು ಮನಸ್ಸಿದ್ದವರಿಗೆ ಢಾಳಾಗಿ ಕಾಣುತ್ತಿದೆ. ಅದು ದಿನದಿಂದ ದಿನಕ್ಕೆ ವಿಕೋಪಕ್ಕೆ ಹೋಗುತ್ತಿದೆ. ಜೊತೆಗೆ ಇಂದು ಭಾರತದ ಒಟ್ಟಾರೆ ವಾತಾವರಣವೂ ಹಾಳಾಗುತ್ತಿದೆ. ಹಿಂಸೆ, ದ್ವೇಷ, ಒಡಕು ಒಂದೇ ಸಮ ಹರಡುತ್ತಿದೆ. ಪರಸ್ಪರ ವಿಶ್ವಾಸ ನಾಶವಾಗುತ್ತಿದೆ. ಜಾತಿ, ಧರ್ಮದ ಕಾರಣ–ಕ್ಕೆ ಒಬ್ಬರನ್ನೊಬ್ಬರು ದ್ವೇಷಿಸುತ್ತಿದ್ದೇವೆ. ಭಿನ್ನಾಭಿಪ್ರಾಯಗಳನ್ನು ಸಹಿಸಿಕೊಳ್ಳುವುದಕ್ಕೆ ಸಾಧ್ಯವಾಗದ ಸ್ಥಿತಿಯಲ್ಲಿದ್ದೇವೆ. ಚರ್ಚೆ, ಸಂವಾದದ ಬದಲು ಹಿಂಸೆ, ಪ್ರತಿಕಾರದ ದಾರಿ ಹಿಡಿದಿದ್ದೇವೆ. ಇದು ನಮ್ಮ ಆರ್ಥಿಕ ಸ್ಥಿತಿಯನ್ನು ಇನ್ನಷ್ಟು ಹದಗೆಡಿಸುತ್ತಿದೆ. ಮನಸ್ಸು ಒಡೆಯುವುದು ಓಟಿನ ರಾಜಕೀಯದ ದೃಷ್ಟಿಯಿಂದ ಒಳ್ಳೆಯದಿರಬಹುದು. ಆದರೆ ನೈತಿಕವಾಗಿ, ಆರ್ಥಿಕವಾಗಿ, ದೇಶದ ಒಳಿತಿನ ದೃಷ್ಟಿಯಿಂದ ಕೆಟ್ಟದ್ದು. ನಮ್ಮ ಹಿರಿಯರು ಬಯಸಿದ್ದ ಪ್ರೀತಿಯ, ಸುಭದ್ರ ದೇಶದ ಕನಸು ಆದರ್ಶ ನಮ್ಮದಾಗಬೇಕು. ಅದಿಲ್ಲದೆ ಆರ್ಥಿಕತೆಯು ಸುಧಾರಿಸುವುದಿಲ್ಲ. ಇನ್ನಷ್ಟು ಹಾಳಾಗುತ್ತದೆ. ಇದು ಇಂದು ಬಹುತೇಕ ಅರ್ಥಿಕತಜ್ಞರೂ ಆಡುತ್ತಿರುವ ಮಾತು.

ಇಂದು ನಮ್ಮನ್ನು ಕಾಡುತ್ತಿರುವ ಆರ್ಥಿಕತೆಯ ಸಮಸ್ಯೆಯನ್ನು ಕುರಿತು ಗಂಭೀರವಾಗಿ ಚಿಂತಿಸಬೇಕು. ಉದ್ಯೋಗ, ಆಹಾರ, ಆರೋಗ್ಯ, ಶಿಕ್ಷಣ ಎಲ್ಲರಿಗೂ ದಕ್ಕಬೇಕು.

ಈ ಹಿನ್ನಲೆಯಲ್ಲಿ ಹಲವು ತಜ್ಞರು ತಮ್ಮ ಅಭಿಪ್ರಾಯಗಳನ್ನು ಹಂಚಿಕೊಳ್ಳುತ್ತಿದ್ದಾರೆ. ಅವನ್ನು ಕೇಳಿಸಿಕೊಳ್ಳೋಣ ಅನ್ನುವ ಉದ್ದೇಶದಿಂದ ಕೆಲವನ್ನು ಅನುವಾದಿಸಿ, ಸಂಗ್ರಹಿಸಿ ಆಗಾಗ ನಿಮ್ಮ ಮುಂದೆ ಇಡುತ್ತಿದ್ದೇವೆ. ಇದೊಂದು ನಿಯತಕಾಲಿಕವಲ್ಲ. ಆದರೂ ಎರಡು ತಿಂಗಳಿಗೊಮ್ಮೆ ಅಂದುಕೊಂಡಿದ್ದೇವೆ. ಇಲ್ಲಿ ಇರುವ ಲೇಖನಗಳಲ್ಲಿ ಕೆಲವು ಈಗಾಗಲೇ ಹಲವು ಪತ್ರಿಕೆಯಲ್ಲಿ ಪ್ರಕಟವಾಗಿವೆ. ಎಲ್ಲವೂ ಹೊಸದಾಗೇ ಇರಬೇಕೆನ್ನುವ ಅಭಿಪ್ರಾಯ ನಮ್ಮದಲ್ಲ. ಒಂದೆಡೆ ಇದ್ದರೆ ಚರ್ಚೆಗೆ, ಓದಿಗೆ ಅನುಕೂಲ ಅಂತ ಹೀಗೆ ಮಾಡುತ್ತಿದ್ದೇವೆ. ನಿಮ್ಮ ಅಭಿಪ್ರಾಯ ತಿಳಿಸಿ, ನಿಮ್ಮ ಗಮನಕ್ಕೆ ಬಂದ ಒಳ್ಳೆಯ ಲೇಖನಗಳನ್ನು ನಮ್ಮ ಗಮನಕ್ಕೂ ತನ್ನಿ. ನಿಮ್ಮ ಗೆಳೆಯರೊಂದಿಗೂ ಹಂಚಿಕೊಳ್ಳಿ. ಇದು ಪಿಡಿಎಫ್ ರೂಪದಲ್ಲಿ ನಿಮಗೆ ಕಳುಹಿಸುತ್ತೇನೆ.
ಇಲ್ಲಿಯ ಲೇಖನಗಳನ್ನು ಸದ್ಬಳಕೆ ಮಾಡಿಕೊಳ್ಳುವುದಕ್ಕೆ ನಮ್ಮ ಅಭ್ಯಂತರವಿಲ್ಲ. ಗಮನಕ್ಕೆ ತಂದರೆ ಸಂತೋಷವಾಗುತ್ತದೆ

**ಟಿ ಎಸ್ ವೇಣುಗೋಪಾಲ್**
statsvenugopal@gmail.com

# ನೋಡಲು ಇಷ್ಟಪಡದೇ ಇರುವರಿಗಿಂತ ದೊಡ್ಡ ಕುರುಡರಿಲ್ಲ

**ಪ್ರೋಣಬ್ ಸೇನ್**

ಭಾರತದ ಆರ್ಥಿಕತೆಯನ್ನು ಕುರಿತಂತೆ ಸೆಪ್ಟೆಂಬರ್ 22 2019ರಂದು ಪ್ರಧಾನಮಂತ್ರಿಯವರು ಅಮೇರಿಕೆಯಲ್ಲಿ ಹೌಡಿ ಮೋದಿ ಕಾರ್ಯಕ್ರಮದಲ್ಲಿ "ಎಲ್ಲವೂ ಸೊಗಸಾಗಿದೆ" ಎಂದು ಘೋಷಿಸಿದರು. ಈ ಮಾತು ಭಾರತದ ಆರ್ಥಿಕತೆಯನ್ನು ಕುರಿತಂತೆ ಸರ್ಕಾರದ ನಿಲುವನ್ನು ನಿಖರವಾಗಿ ಪ್ರತಿ–ಧ್ವನಿಸುತ್ತದೆ. ಸರ್ಕಾರದ ವಿವಿಧ ಅಧಿಕಾರಿಗಳು ಇದೇ ಅಂಶವನ್ನು ಇನ್ನಷ್ಟು ಸವಿಸ್ತಾರವಾಗಿ ವಿವರಿಸುತ್ತಾ ಭಾರತದ ಆರ್ಥಿಕತೆಯನ್ನು ಕುರಿತಂತೆ ಸರ್ಕಾರದ ಅಧಿಕೃತ ನಿಲುವನ್ನು ರೂಪಿಸಿದ್ದಾರೆ. ಸರ್ಕಾರದ ಈ ಕಥನದ ವಿವರಗಳು ಈಗ ಎಲ್ಲರಿಗೂ ಸ್ಪಷ್ಟವಾಗಿದೆ. ಮತ್ತೆ ನೆನಪಿಗೆ ತಂದುಕೊಳ್ಳುವುದಕ್ಕೆ ನೆರವಾಗಲಿ ಅಂತ ಮತ್ತೆ ಇಲ್ಲಿ ಸಂಕ್ಷಿಪ್ತವಾಗಿ ಹೇಳುತ್ತಿದ್ದೇನೆ. ಕೆಲವು ಪ್ರಮುಖ ಅಂಶಗಳನ್ನು ಹೀಗೆ ಪಟ್ಟಿಮಾಡಬಹುದು:

1. ಭಾರತದ ಆರ್ಥಿಕತೆಯಲ್ಲಿ ಸಧ್ಯಕ್ಕೆ ಸ್ವಲ್ಪ ಹಿನ್ನೆಡೆ ಕಾಣುತ್ತಿದೆ. ಆದರೆ ಅದು ಹಿಂಜರಿತ ಅಲ್ಲ. ಜಗತ್ತಿನಲ್ಲಿ ಭಾರತ ಅತ್ಯಂತ ವೇಗವಾಗಿ ಬೆಳೆಯುತ್ತಿರುವ ಆರ್ಥಿಕತೆ.
2. ಬೆಳವಣಿಗೆಯ ಇಳಿಕೆ ಕೇವಲ ಆವರ್ತನಿಯವಾದದ್ದು (ಸೈಕ್ಲಿಕಲ್), ಒಮ್ಮೆ ಹೂಡಿಕೆ ಸುಧಾರಿಸಿದರೆ ಅದು ತನ್ನಷ್ಟಕ್ಕೆ ಸರಿಹೋಗುತ್ತದೆ.
3. ಕೃಷಿ ಬೆಲೆ ಕಡಿಮೆಯಾಗುತ್ತಿರುವುದು ನಿಜ, ಆದರೆ ಅದಕ್ಕೆ ರೈತರು ನಮಗೆ ಬಳಸುವುದಕ್ಕೆ ಬೇಕಾದಕ್ಕಿಂತ ಹೆಚ್ಚು ಬೆಳೆಯುತ್ತಿರುವುದು ಕಾರಣ.
4. ನಗದು ಅಮಾನ್ಯೀಕರಣ ಹಾಗೂ ಜಿಎಸ್‌ಟಿಯಿಂದ ಆರ್ಥಿಕತೆಯ ಎಲ್ಲವೂ ಕಾನೂನಿನ ಚೌಕಟ್ಟಿನೊಳಗೆ ಬಂದಿದೆ. ತೆರಿಗೆದಾರರ ಸಂಖ್ಯೆಯೂ ಹೆಚ್ಚಾಗಿದೆ.
5. ಹಣಕಾಸು ಕ್ಷೇತ್ರ ಸ್ವಲ್ಪ ತೊಂದರೆಯಲ್ಲಿದೆ. ಅದಕ್ಕೆ ಯುಪಿಎ ಸರ್ಕಾರ ಕಾರಣ. ಅವರು ನಿರ್ಲಕ್ಷ್ಯದಿಂದ ಸಾಲಕೊಟ್ಟಿದ್ದರಿಂದ ಈ ಸ್ಥಿತಿ ಬಂದಿದೆ. ಆದ–ರೆ ಬಂಡವಾಳದ ಮರುಹೂಡಿಕೆಯ ಪ್ರಕ್ರಿಯೆಯಿಂದ ನಮ್ಮ ಆರ್ಥಿಕತೆ ಮತ್ತೆ ಪುಟಿದೇಳುತ್ತದೆ.
6. ವಿದೇಶಿಯರು ಭಾರತದಲ್ಲಿ ಹಣವನ್ನು ದೊಡ್ಡ ಪ್ರಮಾಣದಲ್ಲಿ ಹೂಡುತ್ತಿದ್ದಾರೆ. ಅದು ವಿದೇಶಿ ಸಾಂಸ್ಥಿಕ ಹೂಡಿಕೆ ಎಫ್‌ಐಐ ಮತ್ತು ವಿದೇಶಿ ನೇರ ಹೂಡಿಕೆ ಹರಿವನ್ನು ನೋಡಿದರೆ ಸ್ಪಷ್ಟವಾಗುತ್ತದೆ
7. ನಮ್ಮ ಆರ್ಥಿಕ ಮೂಲಭೂತ ಸೂಚಿಗಳು ಬಲವಾಗಿಯೇ ಇವೆ:

1. ಹಣದುಬ್ಬರ ನಿಯಂತ್ರಣದಲ್ಲಿದೆ
2. ಚಾಲ್ತಿ ಅಕೌಂಟ್ ಬ್ಯಾಲೆನ್ಸ್ ನಿಯಂತ್ರಣದಲ್ಲಿದೆ
3. ಕೇಂದ್ರದ ವಿತ್ತೀಯ ಕೊರತೆ ನಿಯಂತ್ರಣದಲ್ಲಿದೆ
4. ಸ್ಟಾಕ್ ಮಾರುಕಟ್ಟೆ ಅರಳುತ್ತಿದೆ

ಹೀಗೆ ಪಟ್ಟಿಯನ್ನು ಬೆಳೆಸುತ್ತಾ ಹೋಗಬಹುದು. ಮೊದಲಿಗೆ ಇಷ್ಟು ಸಾಕು ಅನ್ನಿಸುತ್ತದೆ. ಇದಕ್ಕೆ ವ್ಯತಿರಿಕ್ತವಾಗಿ ಭಾರತದ ಅರ್ಥಶಾಸ್ತ್ರಜ್ಞರ ಸಮುದಾಯವು ಬಹುಪಾಲು ಒಪ್ಪಿಕೊಂಡಿರುವ ನಿಲುವ ಇದೆ. ಅದನ್ನು ಒಟ್ಟಾರೆಯಾಗಿ ಹೀಗೆ ಪಟ್ಟಿಮಾಡಬಹುದು:

1. ಭಾರತದ ಬೆಳವಣಿಗೆಯ ಕಥೆ ಛಿದ್ರವಾಗಿದೆ. ನಮ್ಮ ನೆರೆಹೊರೆಯ ಎಷ್ಟೋ ದೇಶಗಳ (ಉದಾಹರಣೆಗೆ ವಿಯೆಟ್ನಾಂ ಮತ್ತು ಬಂಗ್ಲಾದ್ಯೇಶ) ಸ್ಥಿತಿ ನಮಗಿಂತ ಉತ್ತಮವಾಗಿದೆ.
2. ಆರ್ಥಿಕತೆಯ ಹಿನ್ನಡೆ ಪ್ರಮುಖವಾಗಿ ರಾಚನಿಕವಾದದ್ದು. ಸರ್ಕಾರ ಬೇಡಿಕೆಯನ್ನು ಪನರ್ ಚೇತನಗೊಳಿಸುವುದಕ್ಕೆ ಸೂಕ್ತ ಕ್ರಮ ತೆಗೆದುಕೊಳಬೇಕು. ಅದು ತನ್ನಷ್ಟಕ್ಕೆ ಸರಿಹೋಗುವ ಸೈಕ್ಲಿಕಲ್ ಸಮಸ್ಯೆ ಅಲ್ಲ.
3. ಗ್ರಾಮೀಣ ಪರಿಸ್ಥಿತಿ ಗಂಭೀರವಾಗಿದೆ. ಮತ್ತು ಸ್ಪಷ್ಟವಾಗಿ ಕಾಣಿಸುತ್ತಿದೆ. ರೈತರು ಪದೇ ಪದೇ ಚಳುವಳಿ ಮಾಡುತ್ತಿದ್ದಾರೆ. ಗ್ರಾಮೀಣ ಕೃಷಿಯೇತರ ಉದ್ಯೋಗ ಕೂಡ ಕಡಿಮೆಯಾಗುತ್ತಿದೆ.
4. 2017–18ರಲ್ಲಿ ನಿರುದ್ಯೋಗ ಶೇಕಡ 6.1ರಷ್ಟು ಇದೆ. ಅದು ಕಳೆದ 40ವರ್ಷಗಳಲ್ಲೇ ಅತಿ ಹೆಚ್ಚು. ಯುವಕರ (15–29 ವಯಸ್ಸಿನ) ನಿರುದ್ಯೋಗ ಸುಮಾರಾಗಿ ಶೇಕಡ 20ರಷ್ಟಿದೆ. ನೈಜ ಕೂಲಿ ಕಳೆದ ಮೂರುವರ್ಷಗಳಲ್ಲಿ ಕುಸಿದಿದೆ.
5. ಜನರು ತಮ್ಮ ಬಳಕೆಗಾಗಿ ಮಾಡುತ್ತಿರುವ ತಲಾ ಖರ್ಚು ಮೊಟ್ಟಮೊದಲ ಬಾರಿಗೆ 2017–18ರಲ್ಲಿ ಕಡಿಮೆಯಾಗಿದೆ. ಹಿಂದೆಂದೂ ಹೀಗಾಗಿರಲಿಲ್ಲ. ಆಹಾರದ ಬಳಕೆಯಲ್ಲೂ ಇಳಿಕೆಯನ್ನು ಕಾಣಬಹುದು.
6. ಹಣಕಾಸಿನ ಕ್ಷೇತ್ರ ತೀವ್ರವಾಗಿ ಬಳಲಿದೆ. ಲಿಕ್ವಿಡಿಟಿಯನ್ನು ಹೆಚ್ಚಿಸುವುದ–ರಿಂದಾಗಲಿ ಅಥವಾ ಮರುಹೂರಣದಿಂದಾಗಲಿ ಪರಿಸ್ಥಿತಿಯನ್ನು ಸುಧಾರಿಸಲು ಸಧ್ಯದ ಸ್ಥಿತಿಯಲ್ಲಿ ಸಾಧ್ಯವಿಲ್ಲ.

ಈ ಎರಡೂ ಸಂಪೂರ್ಣ ವಿಭಿನ್ನ ಕಥನಗಳು. ಸಂಪೂರ್ಣ ಭಿನ್ನವಾದ ಈ ನಿಲುವುಗಳನ್ನು ಹೇಗೆ ಅರ್ಥಮಾಡಿಕೊಳ್ಳುವುದು? ಸರ್ಕಾರ ಅರ್ಥಶಾಸ್ತ್ರಜ್ಞರ ಕಥ–ನವನ್ನು ಅಲ್ಲಗೆಳೆಯುತ್ತಿದೆ. ಅದಕ್ಕಾಗಿ ಸರ್ಕಾರ ಅರ್ಥಶಾಸ್ತ್ರಜ್ಞರು ಬಳಸುತ್ತಿರುವ ಅಂಕಿ ಅಂಶಗಳನ್ನು ಹತ್ತಿಕ್ಕುವ ಪ್ರಯತ್ನ ಮಾಡುತ್ತಿದೆ. ವಿಶೇಷವಾಗಿ ಉದ್ಯೋಗ ಮತ್ತು ಬಳಕೆಗೆ ಸಂಬಂಧಿಸಿದ ಅಂಕಿ ಅಂಶಗಳು ಸರ್ಕಾರದ ಕೋಪಕ್ಕೆ ಗು–ರಿಯಾಗಿವೆ. ಆದರೆ ಅದೃಷ್ಟವಶಾತ್ ಸಂಖ್ಯಾಶಾಸ್ತ್ರೀಯ ವ್ಯವಸ್ಥೆಯೊಳಗಿನ ಕೆಲವು ಶಕ್ತಿಗಳೇ ಅವುಗಳಲ್ಲಿ ಕೆಲವು ಅಂಶಗಳನ್ನು ಬಹಿರಂಗಗೊಳಿಸಿವೆ. ಹಾಗಾಗಿ ನಮಗೆ ಅರ್ಥಶಾಸ್ತ್ರಜ್ಞರಿಗೆ, ಸಾರ್ವಜನಿಕರಿಗೆ ಒಂದಿಷ್ಟು ಅಂಕಿಅಂಶಗಳು ಸಿಕ್ಕಿವೆ. ಈಗ ಸರ್ಕಾರ ಅಂಕಿ ಅಂಶದ ಮೂಲವನ್ನು ಪ್ರಶ್ನಿಸುತ್ತಿದೆ. ಮತ್ತು ಅದರ ಗುಣಮಟ್ಟವನ್ನು ದೂಷಿಸುತ್ತಿದೆ. ಆದರೆ ತಮಾಷೆ ಅಂದರೆ ಈ ಅಂಕಿಅಂಶಗಳು ಸ್ವತಃ ಸರ್ಕಾರದ್ದೆ. ಅಷ್ಟೇ ಅಲ್ಲ ಸರ್ಕಾರ ಈ ಅಂಕಿಅಂಶಗಳ ಮೌಲ್ಯವನ್ನು ಅಲ್ಲಗೆಳೆಯುವ ಉದ್ದೇಶದಿಂದ ನೇಮಕಮಾಡಿಕೊಂಡ ಪರಿಣತರೇ ಅಂಕಿ–ಅಂಶಗಳ ಸತ್ಯತೆಯನ್ನು ಅಲ್ಲಗೆಳೆಯುವುದಕ್ಕೆ ಬಲವಾಗಿ ವಿರೋಧಿಸಿದ್ದಾರೆ. ಇದನ್ನು ಹೊರತುಪಡಿಸಿ ಸರ್ಕಾರದ ಉಳಿದ ಭಿನ್ನಾಭಿಪ್ರಾಯಗಳು ಕೇವಲ "ವ್ಯಾಖ್ಯಾನ"ದಲ್ಲಿ ಇರುವ ವ್ಯತ್ಯಾಸಗಳು.

ಈಗ ಅವನ್ನು ಗಮನಿಸೋಣ.

ದೇಶದ ಬೃಹತ್ ಆರ್ಥಿಕ ಅಂಶಗಳು ಚೆನ್ನಾಗಿಯೇ ಇದೆ. ಅದರಲ್ಲಿ ಸಮಸ್ಯೆಗಳೇನೂ ಇಲ್ಲ ಅಂತ ಸರ್ಕಾರ ಹೇಳುತ್ತಿದೆ. ಇದು ಮೇಲ್ನೋಟಕ್ಕೆ ಸರಿ ಅಂತಲೇ ಅನ್ನಿಸುತ್ತದೆ. ಸ್ವಲ್ಪ ಆಳಕ್ಕೆ ಕೆದಕಿ ನೋಡಿದರೆ ಸರ್ಕಾರ ಹೇಳುವ ಅಂಶಗಳು ಸಾಮರ್ಥ್ಯಕ್ಕಿಂತ ಹೆಚ್ಚಾಗಿ ದೌರ್ಭಲ್ಯವಾಗಿಯೇ ತೋರುತ್ತದೆ.

ಹಣದುಬ್ಬರ ಕಡಿಮೆ ಇದೆ ಮತ್ತು ಅದು ಇಳಿಯುತ್ತಿದೆ ಅನ್ನುವುದು ಒಂದು ಅಂತಹ ವಾದ. ಇದು ನಿಜ. ಇದಕ್ಕೆ ಕಾರಣವನ್ನು ಗಮನಿಸಿದರೆ ಪ್ರಾರಂಭದಲ್ಲಿ ಆಹಾರದ ಬೆಲೆ ಕಡಿಮೆ ಇತ್ತು, ಅವುಗಳ ಹಣದುಬ್ಬರದ ದರ ಋಣಾತ್ಮಕವಾಗಿಯೂ ಇತ್ತು. ಹೀಗೆ ಆಹಾರ ಪದಾರ್ಥಗಳ ಬೆಲೆ ಕಡಿಮೆ ಆಗಿರುವುದೇ ಇಂದಿನ ಗ್ರಾಮೀಣ ಆರ್ಥಿಕ ಬಿಕ್ಕಟ್ಟಿಗೆ ನಿಜವಾದ ಕಾರಣ (ಬೆಲೆ ಕಡಿಮೆ ಇರುವುದರಿಂದ ಅವರ ವರಮಾನ ಕಡಿಮೆಯಾಗಿದೆ. ಅದರಿಂದ ಅವರ ಕೊಳ್ಳುವ ಶಕ್ತಿ ಕಡಿಮೆಯಾಗಿದೆ: ಅನುವಾದಕ.) ಇದನ್ನು ಸರ್ಕಾರವೂ ಒಪ್ಪುತ್ತದೆ.

ಜೊತೆಗೆ ಆಹಾರ ಪದಾರ್ಥಗಳ ಬೆಲೆ ಕಡಿಮೆ ಇರುವುದಕ್ಕೆ ಕಾರಣ ಸರ್ಕಾರ ಹೇಳುವಂತೆ ಬೇಕಾದ್ದಕ್ಕಿಂತ ರೈತರು ಹೆಚ್ಚು ಬೆಳೆಯುತ್ತಿದ್ದಾರೆ ಅನ್ನುವುದು

ಖಂಡಿತಾ ಕಾರಣವಲ್ಲ. ದೇಶದಲ್ಲಿ ಒಟ್ಟಾರೆ ಲಭ್ಯ ಇರವು ಆಹಾರದ ಪ್ರಮಾಣವನ್ನು ಗಣನಗೆಗೆ ತೆಗದುಕೊಂಡರೆ ಭಾರತ ಜಗತ್ತಿನಲ್ಲಿ 162ನೇ ಸ್ಥಾನದಲ್ಲಿದೆ. ಇದನ್ನು ಜಾಗತಿಕ ಆಹಾರ ಕಾರ್ಯಕ್ರಮದ ವರದಿಯಲ್ಲಿ ನೋಡಬಹುದು.

ಸರಳವಾದ ಸತ್ಯ ಅಂದರೆ ಬಡವರಿಗೆ ತಮಗೆ ಬೇಕಾದ ಆಹಾರವನ್ನು ಕೊಳ್ಳುವುದಕ್ಕೆ ಆಗುತ್ತಿಲ್ಲ. ಅಷ್ಟೇ ಅಲ್ಲ ಇತ್ತೀಚಿನ ವರ್ಷಗಳಲ್ಲಿ ಅವರ ಪರಿಸ್ಥಿತಿ ಇನ್ನಷ್ಟು ಹದಗೆಟ್ಟಿದೆ. ಇತ್ತೀಚೆಗೆ ಆಹಾರೇತರ ವಸ್ತುಗಳ ಬೆಲೆಯೂ ಕಡಿಮೆಯಾಗುತ್ತಿದೆ. ಅದರರ್ಥ ಅವುಗಳ ಉತ್ಪಾದಕತ್ವ ಹೆಚ್ಚಿದೆ ಅಂತ ಅಲ್ಲ. ಅವುಗಳಿಗಿರುವ ಬೇಡಿಕೆ ಕುಸಿದಿದೆ. ಹಾಗಾಗಿ ಅವುಗಳ ಬೆಲೆ ಕಡಿಮೆಯಾಗಿದೆ. ಆರ್‌ಬಿಐ ಗಮನಿಸಿರುವಂತೆ 2019ರಲ್ಲಿ ಭಾರತದ ಕೈಗಾರಿಕೆಗಳ ಬಳಕೆಯ ಸಾಮರ್ಥ್ಯ ಶೇಕಡ 68ಕ್ಕೆ ಕುಸಿದಿದೆ. ಇದು ಹಿಂದೆಂದೂ ಹೀಗಾಗಿರಲಿಲ್ಲ. ಭಾರತೀಯ ಕೈಗಾರಿಕೆಯ ದೊಡ್ಡ ಹಿಂಡೇ ಹಿಂಜರಿಕೆಯ ಹಾದಿಯಲ್ಲಿದೆ.

ಚಾಲ್ತಿ ಲೆಕ್ಕದ ಕೊರತೆಯು ಇದೇ ಕಥೆಯನ್ನು ಹೇಳುತ್ತದೆ. ನಿಜ ಹೇಳಬೇಕೆಂದರೆ ಅದು ಇಳಿಯುತ್ತಿದೆ. ನಮ್ಮ ರಫ್ತು ಹೆಚ್ಚುತ್ತಿದೆ ಅಂತ ಅಲ್ಲ. ಕಳೆದ ಆರು ವರ್ಷಗಳಿಂದ ರಫ್ತು ಅಷ್ಟೇ ಇದೆ. ಇನ್ನೂ ದುರಂತ ಅಂದರೆ ಕಳೆದ ಮೂರು ತಿಂಗಳಿನಲ್ಲಿ ನಿಜವಾಗಿ ಇಳಿದಿದೆ. ಆದರೆ ಆಮದು ಅದಕ್ಕಿಂತ ವೇಗವಾಗಿ ಇಳಿದಿದೆ. ಕಡಿಮೆಯಾದ ಆಮದಿನ ಜಾಗವನ್ನು ಸ್ಥಳೀಯ ಉತ್ಪಾಧನೆ ಆಕ್ರಮಿಸಿಕೊಂಡಿದ್ದರೆ ಒಳ್ಳೆಯದಿತ್ತು. ಆದರೆ ಕೈಗಾರಿಕ ಉತ್ಪನ್ನಕ್ಕೆ ಸಂಬಂಧಿಸಿದ ಅಂಕಿ ಅಂಶ ಗಮನಿಸಿದರೆ ಹೀಗೆ ಆಗಿಲ್ಲ ಅನ್ನುವುದು ತಿಳಿಯುತ್ತದೆ. ತೀರ್ಮಾನ ಸ್ಪಷ್ಟ. ದೇಶಿಯ ಬೇಡಿಕೆಯಲ್ಲಿ ಕೊರತೆಯಾಗುತ್ತಿದೆ ಅನ್ನುವುದಕ್ಕೆ ಇದು ಮತ್ತೊಂದು ಸೂಚಿ ಅಷ್ಟೆ.

ವಿತ್ತೀಯ ಕೊರತೆ ಜಿಡಿಪಿಯ ಶೇಕಡ 3.5ರಷ್ಟು ಇದೆ ಅಂತ ಸರ್ಕಾರ ಹೇಳುತ್ತಿದೆ. ಇದು ನಿಜವಾಗಿಯೂ ಕಡಿಮೆಯೆ. ಆದರೆ ದುರಾದೃಷ್ಟ ಅಂದರೆ ಅದನ್ನು ಒಪ್ಪಿಕೊಳ್ಳುವುದು ಕಷ್ಟ. ಸಿಎಜಿ– ಕಂಟ್ರೋಲರ್ ಅಂಡ್ ಅಕೌಂಟ್ ಜೆನರಲ್ ಆಫ್ ಇಂಡಿಯಾ ಅವರ ವರದಿ "ನಿಜ"ವಾದರೆ, 2017–18ರ ನಿಜವಾದ ವಿತ್ತೀಯ ಕೊರತೆ ಶೇಕಡ 3.5 ಅಲ್ಲ. ಅದು ನಿಜವಾಗಿ ಶೇಕಡ 5.8. ನಂತರದ ವರ್ಷಗಳ ವಿಷಯದಲ್ಲೂ ಇದೇ ಸತ್ಯ ಅನ್ನಿಸುತ್ತದೆ. ಹಾಗಾದರೆ ಏನಾಗುತ್ತಿದೆ? ಸರಳವಾಗಿ ಹೇಳಬೇಕೆಂದರೆ ಸರ್ಕಾರ ತನ್ನ ಬಿಲ್ಲುಗಳನ್ನು ಪಾವತಿಸುತ್ತಿಲ್ಲ. ಸರ್ಕಾರದ ಲೆಕ್ಕವನ್ನು ನಗದಿನ ಅದಾರದ ಮೇಲೆ ಲೆಕ್ಕ ಹಾಕುವುದ–ರಿಂದ, ಬಿಲ್ಲು ಪಾವತಿಯಾಗಿಲ್ಲ ಅಂದರೆ ಸರ್ಕಾರ ವೆಚ್ಚ ಮಾಡಿಲ್ಲ ಅಂತಲೇ ಭಾವಿಸಲಾಗುತ್ತದೆ. ಅಂದರೆ ಅದರ ವೆಚ್ಚದ ಬಾಬ್ತು ಕಡಿಮೆಯಾಗುತ್ತದೆ. ಸರ್ಕಾರ ಹಾಗೂ ಆಯವ್ಯಯದ ಸಂಖ್ಯೆಗಳ ದೃಷ್ಟಿಯಿಂದ ಇದು ಸರಿ, ಆದ–ರೆ ಹಣ ಪಡೆಯಬೇಕಾದವರ ಕಥೆ ಏನು? ರಾಜ್ಯಗಳು, ಸಾರ್ವಜನಿಕ ಕ್ಷೇತ್ರದ ಉದ್ದಿಮೆಗಳು, ಪೂರೈಕೆ ದಾರರು, ವ್ಯಾಪಾರಿಗಳು, ಸಬ್ಸಿಡಿ ಸಿಗಬೇಕಾದವರು ಮೊದಲಾದವರ ಕಥೆ? ಅವರ ಬಜೆಟ್ ಚಿಂದಿಯಾಗುತ್ತದೆ. ಕೇಂದ್ರ ಸರ್ಕಾರ ತನ್ನ ಸ್ವಂತ ಲೆಕ್ಕದ ಕೊರತೆಯನ್ನು ಉಳಿದವರ ಬ್ಯಾಲೆನ್ಸ್ ಷೀಟಿಗೆ ವರ್ಗಾಯಿಸಿದೆ. ಈ ಉಳಿದವರಿಗೆ ತಮಗೆ ಬಿದ್ದ ಕೊರತೆಗೆ ಹಣ ಹೊಂದಿಸಿಕೊಳ್ಳುವುದು ಕೇಂದ್ರ ಸರ್ಕಾರಕ್ಕಿಂತ ಕಷ್ಟ.

ಹಾಗಾದರೆ ಸ್ಟಾಕ್ ಮಾರುಕಟ್ಟೆ ಏರುತ್ತಿದೆಯಲ್ಲ? ಅದು ನಮ್ಮ ಕೈಗಾರಿಕೆಯ ಮೂಲಭೂತ ಸಾಮರ್ಥ್ಯವನ್ನು ಬಿಂಬಿಸುತ್ತಿಲ್ಲವೇ? ಇಲ್ಲ. ಸ್ಟಾಕ್ ಮಾರುಕಟ್ಟೆಯಲ್ಲಿ ಬರುವುದು ಕೇವಲ 4000 ಪಟ್ಟಿಮಾಡಿದ ಕಂಪೆನಿಗಳು  ಮಾತ್ರ. ಆದರೆ ಕಾರ್ಪೊರೇಟ್ ವ್ಯವಹಾರದ ಮಂತ್ರಾಲಯದಲ್ಲಿ 1.3 ಮಿಲಿಯನ್ ಸಕ್ರಿಯವಾದ ಕಂಪೆನಿಗಳು ನೊಂದಾಯಿತವಾಗಿದೆ. ಹಾಗೆಯೇ 60 ಮಿಲಿಯನ್ನಿಗೂ ಹೆಚ್ಚು ನೊಂದಾಯಿತವಾಗಿ ಕೃಷಿಯೇತರ ಉದ್ದಿಮೆಗಳಿವೆ. ಹಾಗಾಗಿ ದೊಡ್ಡ ದೊಡ್ಡ ಕಾರ್ಪೊರೇಟುಗಳು ಸುಸ್ಥಿತಿಯಲ್ಲೇ ಇರಬಹುದು. ಆದರೆ ಉಳಿದ ಉದ್ದಿಮೆಗಳು ಅಷ್ಟೇ ತೀವ್ರವಾದ ಸಂಕಷ್ಟದಲ್ಲಿರಬಹುದು. ಎರಡನೆಯದಾಗಿ ಭಾರತೀಯ ಸ್ಟಾಕ್ ಮಾರುಕಟ್ಟೆಯಲ್ಲಿ ಎಫ್‌ಐಐ, ಸಂಬಂಧಪಟ್ಟ ಕಂಪೆನಿಗಳ ಸಾಪೇಕ್ಷವಾದ ಸಾಧನೆಯನ್ನು ನೋಡಿ ಏನೂ ಹಣ ಹೂಡುತ್ತಿಲ್ಲ. ಬದಲಾಗಿ ಅವುಗಳ ಜೊತೆಯ ಜಾಗತಿಕ ಕಾರ್ಪೊರೇಟ್ ಸಾಪೇಕ್ಷವಾದ ಸಾಧನೆಯನ್ನು ಆಧರಿಸಿ ಹಣ ಹೂಡುತ್ತವೆ.

ಅಂತಿಮವಾಗಿ ಕಳೆದ ಸುಮಾರು ಒಂದು ವರ್ಷದಲ್ಲಿ ಆರ್‌ಬಿಐ ಆರ್ಥಿಕತೆಗೆ ಅಪಾರ ಪ್ರಮಾಣದ ದ್ರವ್ಯತೆಯನ್ನು ತುಂಬಿದೆ. ತೀವ್ರವಾದ ಮುಕ್ತ ಮಾರುಕಟ್ಟೆಯ ಕಾರ್ಯಾಚರಣೆಯ ಮೂಲಕ ಹಣ ಹೂಡಿದೆ. ಆದರೆ ಇದರಲ್ಲಿ ಬಹುಪಾಲು ಹಣ ಸಟ್ಟಾ ವ್ಯಾಪಾರದಲ್ಲಿ ಬಳಕೆಯಾಗಿವೆ. ಬ್ಯಾಂಕುಗಳಿಗೆ ಹಾಗೂ ಬ್ಯಾಂಕೇತರ ವಿತ್ತೀಯ ಕಂಪೆನಿಗಳಿಗೆ ಹೂಡಿಕೆಗೆ ಹಣಕಾಸು ಕೊಡುವುದಕ್ಕೆ ಹಣ ಸಿಕ್ಕಿಲ್ಲ. ಸ್ಟಾಕ್ ಮಾರುಕಟ್ಟೆಯಲ್ಲಿ ಹೂಡುವುದು ಸ್ಥಿರವಾದ ಹೂಡಿಕೆಯಲ್ಲ. ಕೇವಲ ಒಡೆದುಹೋಗುವ ಗುಳ್ಳೆಗಳಷ್ಟೇ ಆಗಬಹುದು. ಅದನ್ನು ನೋಡಿ ಕಾರ್ಪೊರೇಟ್ ಭಾರತದ ಸಾಮರ್ಥ್ಯವನ್ನು ಅಳೆಯುವುದಕ್ಕೆ ಸಾಧ್ಯವಿಲ್ಲ.

ಇದು ಕೇವಲ ಸಾರ್ವಜನಿಕರ ಮುಂದೆ ತೋರಿಸಿಕೊಳ್ಳುವುದಕ್ಕಾಗಿ ಸರ್ಕಾರ ತೆಗೆದುಕೊಂಡಿರುವ ನಿಲುವಾಗಿದ್ದರೆ ಪರವಾಗಿರಲಿಲ್ಲ. ಅಂತಹ ಸಮಸ್ಯೆ ಇರಲಿಲ್ಲ. ಆದರೆ ಸರ್ಕಾರ ಈ ನಿಲುವನ್ನು ಆಧರಿಸಿಯೇ ಆರ್ಥಿಕ ಹಿನ್ನಡೆಗೆ ನೀತಿಯನ್ನು ರೂಪಿಸಿಕೊಳ್ಳುತ್ತಿದೆ. ಮತ್ತೊಂದು ನಿಲುವನ್ನು ಪರಿಗಣನೆಗೆ ತೆಗೆದುಕೊಂಡೇ ಇಲ್ಲ. ಹಾಗಾಗಿ ಅವುಗಳ ಕ್ರಮಗಳೆಲ್ಲಾ ಕಾರ್ಪೊರೇಟ್ ತೆರಿಗೆ ಕಡಿತ, ಬಡ್ಡಿದರದ ಕಡಿತ, ದ್ರವ್ಯತೆಯ ಹೆಚ್ಚಳ ಇತ್ಯಾದಿ ಕ್ರಮಗಳನ್ನು ತೆಗೆದುಕೊಳ್ಳುತ್ತಿದೆ. ಮತ್ತು ಈ ಮೂಲಕ ಮರುಹೂಡಿಕೆಯನ್ನು ಹೆಚ್ಚಿಸುವ ಕಡೆಯೇ ತನ್ನೆಲ್ಲ ಲಕ್ಷ್ಯವನ್ನು ಕೇಂದ್ರಿಕರಿಸಿದೆ. ಬಳಕೆದಾರರ ಬೇಡಿಕೆ ಹೆಚ್ಚಬೇಕು. ಇಲ್ಲದೇ ಹೋದರೆ ಹೂಡಿಕೆ ಸುಧಾರಿಸುವುದಿಲ್ಲ ಅನ್ನುವ ಅಂಶವನ್ನು ಸಂಪೂರ್ಣವಾಗಿ ಕಡೆಗಣಿಸಿದೆ.



# ಭಾರತದ ಆರ್ಥಿಕ ಸ್ಥಿತಿ-ಸಮಸ್ಯೆ, ಕಾರಣ ಮತ್ತು ಪರಿಹಾರ

## ಅರವಿಂದ್ ಸುಬ್ರಮಣ್ಯಂ, ಜಾಷ್ ಫೆಲ್ಡ್‌ಮನ್

ಭಾರತದ ಆರ್ಥಿಕತೆಯ ಸ್ಥಿತಿ ಚೆನ್ನಾಗಿಲ್ಲ, ಬಿಕ್ಕಟ್ಟು ತೀವ್ರವಾಗುತ್ತಿದೆ ಎಂದು ಬಹುಪಾಲು ಅರ್ಥಶಾಸ್ತ್ರಜ್ಞರು ಹೇಳುತ್ತಿದ್ದಾರೆ. ಹಲವು ವಿಷಯಗಳಿಗೆ ಸಂಬಂಧಿಸಿದಂತೆ ಅರ್ಥಶಾಸ್ತ್ರಜ್ಞರಲ್ಲಿ ಸ್ವಲ್ಪಮಟ್ಟಿನ ಒಮ್ಮತವೂ ಇದೆ. ಸರ್ಕಾರದ ಕ್ರಮಗಳ ಬಗ್ಗೆ ನಿರಾಸೆಯೂ ವ್ಯಕ್ತವಾಗುತ್ತಿದೆ. ದೇಶದ ಉಳಿವಿನ ದೃಷ್ಟಿಯಿಂದ ಈ ಬಗ್ಗೆ ಹೆಚ್ಚು ಗಂಭೀರವಾಗಿ ಚಿಂತಿಸಬೇಕಾಗಿದೆ. ಸಂಬಂಧಪಟ್ಟವರು ಕಾರ್ಯೋನ್ಮುಖರಾಗುವಂತೆ ಒತ್ತಡವೂ ಬೇಕಾಗುತ್ತದೆ. ಎಲ್ಲವೂ ಕೈಮೀರಿ ಹೋಗದೆ ಇರುವಾಗಲೇ ಕ್ರಮ ತೆಗೆದುಕೊಳ್ಳುವಂತಾಗಲಿ. ಸರ್ಕಾರಕ್ಕೆ ಪ್ರಮುಖ ಆರ್ಥಿಕ ಸಲಹೆಗಾರರಾಗಿ ಕೆಲಸ ಮಾಡಿದ್ದ ಅರವಿಂದ್ ಸುಬ್ರಮಣ್ಯಂ ಭಾರತದ ಆರ್ಥಿಕತೆಯ ಬಗ್ಗೆ ಇತ್ತೀಚೆಗೆ ಜಾಷ್ ಫೆಲ್ಡ್‌ಮನ್ ಜೊತೆ ಸೇರಿಕೊಂಡು ಒಂದು ಸಂಶೋಧನಾ ಲೇಖನವನ್ನು ಪ್ರಕಟಿಸಿದ್ದಾರೆ. ಈಗ ಆಕ್ಸ್‌ಫರ್ಡಿನಲ್ಲಿ ಪಾಠಮಾಡುತ್ತಿರುವ ಅವರು ಭಾರತದ ಪ್ರಸ್ತುತ ಆರ್ಥಿಕ ಪರಿಸ್ಥಿತಿಯ ಗಂಭೀರತೆ, ಅದಕ್ಕೆ ಕಾರಣಗಳು ಮತ್ತು ಪರಿಹಾರಗಳನ್ನು ಚರ್ಚಿಸಿದ್ದಾರೆ. ತೀವ್ರ ಭಿನ್ನಾಭಿಪ್ರಾಯವೂ ಸಾಧ್ಯ. ಆದರೆ ನಿರ್ಲಕ್ಷಿಸುವುದು ತರವಲ್ಲ. ಚರ್ಚಿಸಬೇಕು ಅನ್ನುವ ಕಾರಣಕ್ಕೆ ಅವರ ಪ್ರಮುಖ ಚಿಂತನೆಗಳನ್ನು ಸಂಗ್ರಹವಾಗಿ ನೀಡಲಾಗಿದೆ. ಮುಂದೆ ವಿವರವಾಗಿ ಇಂತಹ ಪ್ರಮುಖ ಲೇಖನಗಳನ್ನು ನೀಡಲಾಗುತ್ತದೆ.

ಅವರ ವಾದ ತೀರಾ ಸರಳವಾಗಿ, ನೇರವಾಗಿದೆ. ನಮ್ಮ ಆರ್ಥಿಕತೆಯಲ್ಲಿ ಇಂದು ಕಾಣುತ್ತಿರುವುದು ಸಾಧಾರಣವಾದ ಮಾಮೂಲಿಯಾದ ಆರ್ಥಿಕ ನಿಧಾನವಲ್ಲ. ತುಂಬಾ ಗಂಭೀರವಾದದ್ದು. ಕಳೆದ ಮೂವತ್ತು ವರ್ಷಗಳಲ್ಲಿ ಎಂದೂ ಹೀಗೆ ಆಗಿರಲಿಲ್ಲ. ಅದು ಐಸಿಯು (ತೀವ್ರ ನಿಗಾ ಘಟಕದ) ಕಡೆ ಹೋಗುತ್ತಿದೆ ಎನ್ನುತ್ತಿದ್ದಾರೆ. ಮೊದಲಿಗೆ ಅವರು ಭಾರತದ ಆರ್ಥಿಕ ಪರಿಸ್ಥಿತಿಯನ್ನು ಹೇಗೆ ವಿವರಿಸುತ್ತಾರೆ ಅನ್ನುವುದನ್ನು ಅರ್ಥಮಾಡಿಕೊಳ್ಳೋಣ.

### ಭಾರತದ ಆರ್ಥಿಕತೆಯ ಸಧ್ಯದ ಸ್ಥಿತಿ:

1. ಭಾರತದಲ್ಲಿ ಬೆಳವಣಿಗೆಯ ದರ ಅಂದರೆ ಜಿಡಿಪಿ ಕುಸಿಯುತ್ತಿದೆ. ಕೆಲದಿನಗಳ ಹಿಂದೆ ಶೇಕಡ 8ರಷ್ಟು ಇದ್ದುದು ಈಗ ಶೇಕಡ 4.5ಕ್ಕೆ ಕುಸಿದಿದೆ. ಸಧ್ಯದ ಪರಿಸ್ಥಿತಿಯಲ್ಲಿ ಇದೇ ಕಡಿಮೆ. ಆದರೆ ಈ ಜಿಡಿಪಿ ಸಂಖ್ಯೆಯನ್ನು ಕುರಿತಂತೆಯೂ ಅವರು ತಮ್ಮ ಹಿಂದಿನ ಲೇಖನದಲ್ಲಿ ಅನುಮಾನ ವ್ಯಕ್ತಪಡಿಸಿದ್ದರು. ಯಾಕೆಂದರೆ ಬಳಕೆಯ ದರ, ಕಂದಾಯ ಸಂಗ್ರಹಣೆ ಇತ್ಯಾದಿ ಉಳಿದ ಸೂಚಿಗಳನ್ನು ಗಮನಿಸಿದರೆ ದೇಶದ ಅರ್ಥವ್ಯವಸ್ಥೆ ಈ ಪ್ರಮಾಣದಲ್ಲಿ ಬೆಳೆಯುತ್ತಿದೆ ಎಂದು ನಂಬುವುದಕ್ಕೆ ಸಾಧ್ಯವಿಲ್ಲ ಎಂದು ಅಭಿಪ್ರಾಯಪಡುತ್ತಾರೆ. 2000–2002ರಲ್ಲಿ ಜಿಡಿಪಿ ಇಷ್ಟೇ ಇತ್ತು ಆದರೆ ಉಳಿದ ಸೂಚಿಗಳು ಉತ್ತಮವಾಗಿದ್ದವು. 1991–92ರಲ್ಲಿ ಆರ್ಥಿಕ ಪರಿಸ್ಥಿತಿ ಹೀಗೆ ಇತ್ತು ಆದರೆ ಆಗ ಜಿಡಿಪಿ ದರ ಕೇವಲ ಶೇಕಡ 1.1ರಷ್ಟಿತ್ತು. ಹಾಗಾಗಿ ಈಗಿನ ಜಿಡಿಪಿ ಲೆಕ್ಕಾಚಾರದ ಬಗ್ಗೆ ಅನುಮಾನ ಬರುತ್ತದೆ. ಆ ಅನುಮಾನ ನಿಜವಾದರೆ ಆರ್ಥಿಕ ಪರಿಸ್ಥಿತಿ ಇನ್ನೂ ನಿರಾಶದಾಯಕವಾಗಿ ಇದ್ದಿರಲೇಬೇಕು. ಒಂದೆರಡು ಆರ್ಥಿಕ ಸೂಚಿಗಳನ್ನು ಗಮನಿಸೋಣ.
2. ಇಂದು ಭಾರತದ ರಫ್ತು ಕಳೆದ 30ವರ್ಷಗಳಲ್ಲೇ ಅತ್ಯಂತ ಕಡಿಮೆ ಮಟ್ಟದಲ್ಲಿದೆ. 2007–8ರಲ್ಲಿ ಅನಿಲೇತರ ರಫ್ತು ಶೇಕಡ 8ರಷ್ಟು ಇದ್ದದ್ದು ಈಗ ಶೇಕಡ –1 ಆಗಿದೆ.
3. ಹಾಗೆಯೇ ಬಂಡವಾಳ ಸರಕು ಕೈಗಾರಿಕೆಗಳು ಶೇಕಡ –10ರಷ್ಟಾಗಿದೆ. ಅಂದರೆ ಬೆಳವಣಿಗೆ ಋಣಾತ್ಮಕವಾಗಿದೆ. ಬಳಕೆದಾರರ ಸರಕುಗಳ ಅಂದರೆ ಜನ ಬಳಸುವ ಸರಕುಗಳ ಉತ್ಪಾದನೆಯೂ 2017–18ರಲ್ಲಿ ಶೇಕಡ 5ರಷ್ಟು ಇದ್ದುದು ಈಗ ಶೇಕಡ 1ಕ್ಕೆ ಕುಸಿದಿದೆ.
4. ವಿದ್ಯುತ್ ಉತ್ಪಾದನೆ ಕಳೆದ ಮೂವತ್ತು ವರ್ಷಗಳಲ್ಲೇ ಅತ್ಯಂತ ಕಡಿಮೆಯಾಗಿದೆ. ಈಗ ಅದು ಶೇಕಡ 1.8ರಷ್ಟು ಇದೆ.

ಈ ಎಲ್ಲಾ ಸೂಚಿಗಳೂ ಋಣಾತ್ಮಕವಾಗಿದೆ. ಇಲ್ಲವೇ ತುಂಬಾ ಅಪಾಯಕಾರಿ ಮಟ್ಟದಲ್ಲಿದೆ. ಹಾಗಾಗಿಯೇ ಅರವಿಂದನ್ ಹೇಳುವುದು ಇದು ಇನ್ನೊಂದು ತಾತ್ಕಾಲಿಕ ಹಿನ್ನಡೆ ಅಲ್ಲ. ಭಾರತದ ವಿಶೇಷವಾದ ಸ್ಲೋಡೌನ್. 1991ಕ್ಕೆ ಹೋಲಿಸಿದರೆ ಆಗಿನಂತೆ ಬಿಓಪಿ ಬಿಕ್ಕಟ್ಟು, ಹಣದುಬ್ಬರ, ವಿದೇಶಿ ವಿನಮಯದ ಕೊರತೆ, ವಿದೇಶಿ ಸಾಲದ ಹೊರೆ ಇವೆಲ್ಲಾ ಈಗಿಲ್ಲ. ಆದರೆ ಆರ್ಥಿಕತೆಯ ನೈಜ ಕ್ಷೇತ್ರಗಳಾದ ಬೆಳವಣಿಗೆ, ಹೂಡಿಕೆ, ಆಮದು, ರಫ್ತು, ಇವೆಲ್ಲವೂ ಕುಸಿದಿವೆ. ಇವೆಲ್ಲಾ ಉದ್ಯೋಗ, ಸರ್ಕಾರದ ಸಾಮಾಜಿಕ ಕಾರ್ಯಕ್ರಮಗಳು ಇತ್ಯಾದಿಗಳ ಮೇಲೆ ಪರಿಣಾಮ ಬೀರುತ್ತವೆ.

### ತೆರಿಗೆ ಸಂಗ್ರಹಣೆಯಲ್ಲೂ ಸಿಕ್ಕಾಪಟ್ಟೆ ಕುಸಿತ ಕಾಣುತ್ತಿದೆ.

ಪ್ರತ್ಯಕ್ಷ ತೆರಿಗೆ ಅಂದರೆ ವೈಯಕ್ತಿಕ ವರಮಾನ ತೆರಿಗೆ ಮತ್ತು ಕಾರ್ಪೊರೇಟ್ ತೆರಿಗೆ ಬೆಳವಣಿಗೆ 2017–18ರಲ್ಲಿ ಶೇಕಡ 16ರಷ್ಟು ಇದ್ದುದು, 18–19ರಲ್ಲಿ ಶೇಕಡ 10ರಷ್ಟು ಆಗಿತ್ತು. ಈಗ ಅದು ಸೊನ್ನೆಯಾಗಿದೆ (ಹಣದುಬ್ಬರವನ್ನು ಪರಿಗಣನೆಗೆ ತೆಗೆದುಕೊಳ್ಳಲಾಗಿದೆ.) ಇದೇ ಪ್ರವೃತ್ತಿಯನ್ನು ಪರೋಕ್ಷ ತೆರಿಗೆ ಅಂದರೆ ಜಿಎಸ್‌ಟಿಯಲ್ಲೂ ನೋಡಬಹುದು. ಇವೆಲ್ಲಾ ದೇಶದ ಆರ್ಥಿಕ ಹಿಂಜರಿಕೆಯ ಹಿನ್ನಡೆಯ ಫಲ. ಹಾಗಾಗಿ ಒಂದೆಡೆ ಆರ್ಥಿಕ ಹಿನ್ನಡೆಯಾದರೆ ಇನ್ನೊಂದೆಡೆ ಬಂಡವಾಳದ ಕೊರತೆ ಸರ್ಕಾರವನ್ನು ಕಾಡುತ್ತಿದೆ.

ಈ ಪರಿಸ್ಥಿತಿಗೆ ಕಾರಣಗಳೇನು?

1. ನಮ್ಮ ಮುಂದಿರುವ ಈ ಆರ್ಥಿಕ ಹಿನ್ನಡೆಗೆ ಮುಖ್ಯವಾಗಿ ದೇಶದ ಹಣಕಾಸು ವ್ಯವಸ್ಥೆ ಮುರಿದುಬಿದ್ದಿರುವುದು ಕಾರಣ. ರಫ್ತು, ಹೂಡಿಕೆ ಇತ್ಯಾದಿಗಳು ಕುಸಿಯುತ್ತಿರುವುದು ದೀರ್ಘ ಕಾಲೀನ ಕಾರಣಗಳು. ಹಾಗೆಯೇ ಕೃಷಿಯಲ್ಲಿ ಕುಸಿತ, ನಗದು ಅಮಾನ್ಯೀಕರಣ ಇತ್ಯಾದಿ ಅಲ್ಪಕಾಲೀನ ಕಾರಣಗಳೂ ಸೇರಿಕೊಂಡಿವೆ. ಇವೆರಡನ್ನು ಹಣಕಾಸು ವ್ಯವಸ್ಥೆಯಲ್ಲಿ ಒಂದನ್ನೊಂದು ಸೇರಿಕೊಂಡಿವೆ. ಆದರೆ ಸಧ್ಯದ ಆರ್ಥಿಕ ಹಿನ್ನಡೆಗೆ ಅರವಿಂದನ್ ಅವರ ದೃಷ್ಟಿಯಲ್ಲಿ ಮುಖ್ಯವಾಗಿ ಕಾರಣವಾಗಿರುವುದು ಜೋಡಿ ಬ್ಯಾಲೆನ್ಸ್ ಷೀಟ್ ಸಮಸ್ಯೆ. ಇದು ಎರಡು ಅಲೆಗಳಲ್ಲಿ ನಮ್ಮ ಆರ್ಥಿಕತೆಯನ್ನು ಕಾಡಿದೆ.
2. ಈಗ ಮೊದಲ ಜೋಡಿ ಬ್ಯಾಲೆನ್ಸ್ ಷೀಟ್ ಸಮಸ್ಯೆಯನ್ನು ಗಮನಿಸೋಣ. ಆಗ ಸಾರ್ವಜನಿಕ ಬ್ಯಾಂಕುಗಳು ಮೂಲಸೌಕರ್ಯ (ಇನ್ಫ್ರಾಸ್ಟ್ರಕ್ಚರ್) ಒದಗಿಸುವ ಕಾರ್ಪೊರೇಟ್ ಕಂಪೆನಿಗಳಿಗೆ ಧಾರಾಳವಾಗಿ ಸಾಲನೀಡಿದ್ದವು. ಆ ಸಂದರ್ಭದಲ್ಲಿ ಆರ್ಥಿಕ ಪರಿಸ್ಥಿತಿ ಏರಿಕೆಯಲ್ಲಿತ್ತು. ನಂತರ ಬೆಳವಣಿಗೆ ನಿಧಾನವಾಗತೊಡಗಿತು. ಆ ಕಂಪೆನಿಗಳ ಸ್ಥಿತಿಯೂ ಹದಗೆಡುತ್ತಾ ಹೋಯಿತು. ಅವುಗಳು ಸಾಲವನ್ನು ತೀರಿಸುವ ಸ್ಥಿತಿಯಲ್ಲಿ ಇರಲಿಲ್ಲ. ಅವುಗಳ ಆಯವ್ಯಯ ಖಾತೆಯ ಸ್ಥಿತಿಯು ಕೆಟ್ಟಿತು. ಪರಿಣಾಮವಾಗಿ ಬ್ಯಾಂಕುಗಳ ಬ್ಯಾಲೆನ್ಸ್ ಷೀಟ್ ಸ್ಥಿತಿಯೂ ಹಾಳಾಯಿತು.

ಈಗಿನದ್ದು ಎರಡನೆಯ ಹಣಕಾಸು ವ್ಯವಸ್ಥೆಯ ಬಿಕ್ಕಟ್ಟು. ಇದು ಬ್ಯಾಂಕೇತರ ಹಣಕಾಸು ಸಂಸ್ಥೆಗಳ (ಎನ್‌ಬಿಎಫ್‌ಸಿ) ಮೂಲದಿಂದ ಹುಟ್ಟಿಕೊಂಡ ಸಮಸ್ಯೆ. ಈ




ಸಂಸ್ಥೆಗಳು ಕೂಡ ಬ್ಯಾಂಕಿನ ಹಾಗೆ ಸಾಲಕೊಡುತ್ತವೆ. ಆದರೆ ಠೇವಣಿದಾರರಿಂದ ಠೇವಣಿ ಸಂಗ್ರಹಿಸುವುದಿಲ್ಲ. ಈ ಕಂಪೆನಿಗಳು ರಿಯಲ್ ಎಸ್ಟೇಟ್ ಕಂಪೆನಿಗಳಿಗೆ ಅಂದರೆ ರಸ್ತೆಗಳನ್ನು, ಸೇತುವೆಗಳನ್ನು, ವಿಮಾನ ನಿಲ್ದಾಣಗಳನ್ನು, ಕಟ್ಟುವ ಕಂಪೆನಿಗಳಿಗೆ ಧಾರಾಳವಾಗಿ ಸಾಲ ನೀಡಿದವು. ಇಂತಹ ಸಾಲದ ಪ್ರಮಾಣ ಪ್ರತಿ ವರ್ಷ ಶೇಕಡ 20ರಷ್ಟು ಬೆಳೆಯುತ್ತಿತ್ತು. ಆದರೆ ಈಗ ಆರ್ಥಿಕ ಹಿನ್ನಡೆಯಿಂದಾಗಿ ರಿಯಲ್ ಎಸ್ಟೇಟ್ ಕಂಪೆನಿಗಳು ಸಂಕಟಕ್ಕೆ ಸಿಕ್ಕಿವೆ. ಅವುಗಳು ಸಾಲ ಮರುಪಾವತಿ ಮಾಡುವ ಸ್ಥಿತಿಯಲ್ಲಿಲ್ಲ. ಪರಿಣಾಮವಾಗಿ ಬ್ಯಾಂಕೇತರ ಹಣಕಾಸು ಸಂಸ್ಥೆಗಳು ಇಕ್ಕಟ್ಟಿಗೆ ಸಿಕ್ಕಿಬಿದ್ದವು. ಒಂದು ಕಡೆ ರಿಯಲ್ ಎಸ್ಟೇಟ್ ಕಂಪೆನಿಗಳ ಆಯವ್ಯಯ ಪರಿಸ್ಥಿತಿ ಹದಗೆಟ್ಟಿತು. ಅದರ ಪರಿಣಾಮವಾಗಿ ಬ್ಯಾಂಕೇತರ ಸಂಸ್ಥೆಗಳ ಸ್ಥಿತಿ ಹದಗೆಟ್ಟಿತು. ಇದು ಎರಡನೆಯ ಜೋಡಿ ಬ್ಯಾಲೆನ್ಸ್ ಷೀಟ್ ಸಮಸ್ಯೆ.

ಸಮಸ್ಯೆಯ ಭೀಕರತೆಯನ್ನು ಅರ್ಥಮಾಡಿಕೊಳ್ಳುವುದಕ್ಕೆ ಗೃಹನಿರ್ಮಾಣದ ಉದಾಹರಣೆಯನ್ನು ತೆಗೆದುಕೊಳ್ಳೋಣ. 2019ರಲ್ಲಿ ಇದು ಮೇಲಿನ 8 ದೊಡ್ಡ ನಗರಗಳಲ್ಲಿ ಒಟ್ಟು 10 ಲಕ್ಷಕೋಟಿ ಮೌಲ್ಯದ ಮನೆಗಳು ನಿರ್ಮಾಣವಾದರೆ ಅದರಲ್ಲಿ ಕೇವಲ 2ಲಕ್ಷಕೋಟಿಯಷ್ಟು ಮೌಲ್ಯದ ಮನೆಗಳು ಮಾತ್ರ ಮಾರಾಟವಾದವು. ಉಳಿದ 8 ಲಕ್ಷಕೋಟಿಯಷ್ಟು ಮೌಲ್ಯದ ಮನೆಗಳು ಮಾರಾಟವಾಗದೇ ಹಾಗೇ ಉಳಿದವು. ಕೆಲ ವರ್ಷಗಳಿಂದ ಪ್ರತಿವರ್ಷ ಹೀಗೆ ನಡೆದುಕೊಂಡು ಬಂದಿದೆ. ಸಹಜವಾಗಿಯೇ ಗೃಹ ಸಾಲದ ಪ್ರಮಾಣ ಕಡಿಮೆಯಾಗಿದೆ. 2018–19ರಲ್ಲಿ 22 ಲಕ್ಷಕೋಟಿ ಇದ್ದದ್ದು ಈಗ 2019–20ರಲ್ಲಿ ಅದು 1 ಲಕ್ಷ ಕೋಟಿಗೆ ಕುಸಿದಿದೆ. ಈ ದುರಂತಕ್ಕೆ ಐಎಲ್‌ಎಫ್‌ಎಸ್ ಕಂಪೆನಿ ಒಂದು ಪ್ರಚೋದನೆ. 90,000 ಕೋಟಿ ರೂಪಾಯಿ ಮೌಲ್ಯದ ಬಿಕ್ಕಟ್ಟು ಸೂಚನೆಯೇ ಇಲ್ಲದೇ ಅಪ್ಪಳಿಸಿತು. ಎಲ್ಲರ ದೃಷ್ಟಿಯೂ ಹಣಕಾಸು ಕ್ಷೇತ್ರದ ಕಡೆ ತಿರುಗಿತು. ಈ ಸಂಸ್ಥೆಗಳು ಗೃಹ ನಿರ್ಮಾಣಕ್ಕೆ ಹೇರಳವಾಗಿ ಸಾಲ ನೀಡಿದ್ದವು. ಅದು ಲಾಭದಾಯಕ ವ್ಯವಹಾರವಲ್ಲ. ಬಾಳಿಕೆಯ ವ್ಯವಹಾರವೂ ಅಲ್ಲ. ಬ್ಯಾಂಕುಗಳು ಎನ್‌ಬಿಎಫ್‌ಸಿಗಳಿಗೆ ಕೊಡುತ್ತಿದ್ದ ಹಣವನ್ನು ಹಿಂತೆಗೆದುಕೊಂಡರು. ಬ್ಯಾಂಕುಗಳು ಹಾಗೂ ಎನ್‌ಬಿಎಫ್‌ಸಿಗಳು ಈ ಕ್ಷೇತ್ರಗಳಿಗೆ ಕೊಡುತ್ತಿದ್ದ ಹಣವನ್ನು ನಿಲ್ಲಿಸಿಬಿಟ್ಟರು. ಇದು ಈಗಿನ ಸಾಲದ ಕೊರತೆಗೆ ಕಾರಣ. ಸಾಲ ಅನ್ನೋದು ಸಧ್ಯದ ಅರ್ಥಿಕತೆಯನ್ನು ಚಾಲನೆಯಲ್ಲಿಟ್ಟಿರುವುದು. ಅದೇ ಇಲ್ಲದೇ ಹೋದರೆ ಆರ್ಥಿಕತೆ ಸೋಲುತ್ತದೆ. ಇದು ಸಮಸ್ಯೆಯನ್ನು ಮತ್ತಷ್ಟು ಉಲ್ಬಣಗೊಳಿಸುತ್ತದೆ.

## ಗಳಿಸುತ್ತಿರುವುದಕ್ಕಿಂತ ತೆರುತ್ತಿರುವುದೇ ಹೆಚ್ಚು

ಈ ಸಮಸ್ಯೆಗೆ ಇನ್ನೊಂದು ಭೀಕರವಾದ ಅಂಶವೂ ಸೇರಿಕೊಂಡಿದೆ. ಕಂಪೆನಿಗಳಿಗೆ ಬರುತ್ತಿರುವ ವರಮಾನಕ್ಕಿಂತ ಅವು ತೆರುತ್ತಿರುವ ಬಡ್ಡಿಯ ಪ್ರಮಾಣವೇ ಹೆಚ್ಚಿದೆ. ಸಾಲದ ಮೇಲೆ ಅವರು ತೆರುತ್ತಿರುವ ಬಡ್ಡಿ ಶೇಕಡ 10.5ರಷ್ಟು. ಅವರ ನಿರೀಕ್ಷಿತ ಗಳಿಕೆ ಶೇಕಡ 6.1ರಷ್ಟು. ಅಂದರೆ ಶೇಕಡ 4.4ರಷ್ಟು ಕೊರತೆ ಬೀಳುತ್ತದೆ. ಸಾಮಾನ್ಯವಾಗಿ ಕಾರ್ಪೋರೇಟ್‌ಗಳ ಗಳಿಕೆಯನ್ನು ಜಿಡಿಪಿಯ ಆಧಾರದ ಮೇಲೆ ಅರ್ಥಮಾಡಿಕೊಳ್ಳಲಾಗುತ್ತದೆ. ಆರ್ಥಿಕತೆ ತುಂಬಾ ಉತ್ಕೃಷ್ಟವಾಗಿದ್ದಾಗ ಬೆಳವಣಿಗೆ ದರ ಶೇಕಡ 15–20 ಹೀಗೆ ಇರುತ್ತಿತ್ತು. ಆಗ ಬಡ್ಡಿ ದರ 12–13 ಇರುತ್ತಿತ್ತು. ಹಾಗಾಗಿ ಲಾಭ ಅಂತ ಇರುತ್ತಿತ್ತು. ಈಗ ಅದು ನೆಗೆಟಿವ್ ಆಗಿದೆ. ಹಾಗಾಗಿ ಪರಿಸ್ಥಿತಿ ಮತ್ತಷ್ಟು ಬಿಗಡಾಯಿಸುವ ಸಾಧ್ಯತೆಯೇ ಹೆಚ್ಚು. ಕಾರ್ಪೋರೇಟ್‌ಗಳ ಮೇಲೂ ಒತ್ತಡ ಹೆಚ್ಚಾಗಿದೆ. ಸರ್ಕಾರದ ಸ್ಥಿತಿಯೂ ಬಿಗಡಾಯಿಸಿದೆ. ಯಾಕೆಂದರೆ ಇದು ಸರ್ಕಾರದ ಮೇಲೂ ಪರಿಣಾಮ ಬೀರುತ್ತದೆ.

## ಹಾಗಾದರೆ ಪರಿಹಾರ ಏನು?

ಮೊದಲಿಗೆ ಏನು ಮಾಡಬಾರದು ಅನ್ನುವುದಕ್ಕೆ ಇವರ ಸಲಹೆಯನ್ನು ಗಮನಿಸೋಣ.

1. ಬಜೆಟ್ ಕೊರತೆಯನ್ನು ಹೆಚ್ಚಿಸಬಾರದು. ಈಗ ಸರ್ಕಾರ ಹೇಳುವಂತೆ ಅದು ಶೇಕಡ 3.5 ಅಲ್ಲ. ಅದಕ್ಕಿಂತ ಕನಿಷ್ಠ ಶೇಕಡ 2 ಹೆಚ್ಚಿದೆ. ಯಾಕೆಂದರೆ ಆಹಾರದ ಸಬ್ಸಿಡಿ, ಕೆಲವು ಮೂಲಭೂತ ಸೌಕರ್ಯಕ್ಕೆ ಸಂಬಂಧಿಸಿದ ಖರ್ಚು ಇವೆಲ್ಲಾ ಬಜೆಟ್ಟಿನಲ್ಲಿ ಬಂದಿಲ್ಲ. ಹಾಗಾಗಿ ಈಗ ಇರುವ ಬಜೆಟ್ ಕೊರತೆಯೇ ಹೆಚ್ಚು ಇನ್ನೂ ಹೆಚ್ಚಿಸಿ ಅದು ಎರಡು ಅಂಕೆ ಮುಟ್ಟುವುದಕ್ಕೆ ಬಿಡಬಾರದು. ಆಗ ಸಾಲದ ಹಣಕಾಸು ಸ್ಥಿತಿ ಮತ್ತಷ್ಟು ಬಿಗಡಾಯಿಸುತ್ತದೆ.
2. ಎರಡನೆಯದಾಗಿ, ವರಮಾನ ತೆರಿಗೆಯ ಪ್ರಮಾಣವನ್ನು ಇಳಿಸಬಾರದು. ತೆರಿಗೆ ಇಳಿದರೆ ಅವರ ಬಳಕೆ ಹೆಚ್ಚುತ್ತದೆ ಅನ್ನುವ ವಾದ ಸರಿಯಿಲ್ಲ. ವರಮಾನ ತೆರಿಗೆ ಕೊಡುತ್ತಿರುವವರು ಮೇಲಿನ ಸಾಪೇಕ್ಷವಾಗಿ ಶ್ರೀಮಂತ ಶೇಕಡ 4 ಜನ. ಅವರಿಂದ ಬಳಕೆ ಹೆಚ್ಚುವುದಿಲ್ಲ. ಹಣ ಇಲ್ಲದವರಿಗೆ ಹಣ ನೀಡಬೇಕು. ಅದಕ್ಕೆ ನೇರವಾಗಿ ಅವರಿಗೆ ಹಣವನ್ನು ವರ್ಗಾಯಿಸಬೇಕು. ಪ್ರಧಾನ ಮಂತ್ರಿ ಕಿಸಾನ್ ಯೋಜನೆಯಂತಹ ಯೋಜನೆಗಳನ್ನು ಹೆಚ್ಚು ಪರಿಣಾಮಕಾರಿಯಾಗಿ

ಮಾಡಬೇಕು. ಇದು ಹೆಚ್ಚು ಪರಿಣಾಮಕಾರಿಯಾದ ಹಾಗೂ ನ್ಯಾಯಯುತವಾದ ಕ್ರಮವಾಗುತ್ತದೆ.

3. ಜಿಎಸ್‌ಟಿ ದರವನ್ನು ಹೆಚ್ಚಿಸಬಾರದು. ಈಗ ಜಿಎಸ್‌ಟಿ ಸಂಗ್ರಹ ಕಡಿಮೆಯಾಗುತ್ತಿರುವುದರಿಂದ ಅದರ ಮೇಲೆ ಒತ್ತಡ ಹೆಚ್ಚಿದೆ. ಆದರೆ ಅದನ್ನು ಹೆಚ್ಚಿಸುವುದಕ್ಕೆ ಇದು ಸಕಾಲವಲ್ಲ. ಆರ್ಥಿಕತೆ ನಿಧಾನವಾಗುತ್ತಿರುವ ಇಂದಿನ ಪರಿಸ್ಥಿತಿಯಲ್ಲಿ ತೆರಿಗೆಯನ್ನು ಹೆಚ್ಚಿಸಬಾರದು. ಜನರ ಬಳಕೆಯ ಸಾಮರ್ಥ್ಯ ಹೆಚ್ಚಬೇಕು ಅಂತ ಹೇಳುತ್ತಲೇ ಜಿಎಸ್‌ಟಿ ಹೆಚ್ಚಿಸುವುದು ವಿಪರ್ಯಾಸ.

## ಈಗ ಏನು ಮಾಡಬೇಕು?

ಈ ನಿಟ್ಟಿನಲ್ಲಿ ಅರವಿಂದನ್ ಕೆಲವು ಸಲಹೆಗಳನ್ನು ನೀಡುತ್ತಾರೆ.

1. ಭಾರತದ ಆರ್ಥಿಕ ಪರಿಸ್ಥಿತಿಗೆ ಸಂಬಂಧಿಸಿದಂತೆ ಇರುವ ಅಂಕಿ ಅಂಶಗಳಿಗೆ ಸಂಬಂಧಿಸಿದ ಸಮಸ್ಯೆಯನ್ನು ಸರಿಮಾಡಬೇಕು. ಸರಿಯಾದ ಅಂಕಿ ಅಂಶಗಳು ನಮಗೆ ಅವಶ್ಯಕ. ಇದರಿಂದ ದೇಶದ ಬಗ್ಗೆ ನಂಬಿಕೆ ಹೆಚ್ಚುತ್ತದೆ. ಅಷ್ಟೇ ಅಲ್ಲ ಸೂಕ್ತ ನೀತಿಗಳನ್ನು ರೂಪಿಸುವುದಕ್ಕೂ, ಕ್ರಮ ತೆಗೆದುಕೊಳ್ಳುವುದಕ್ಕೂ ಸರಿಯಾದ ಅಂಕಿ ಅವಶ್ಯಕ. ಆರ್ಥಿಕತೆ ಅನ್ನುವುದು ತುಂಬಾ ಸಂಕೀರ್ಣವಾದ ಕಾರು ಇದ್ದಂತೆ. ಸ್ಪಿಡೋಮೀಟರ್ ಸರಿಯಾಗಿ ಕೆಲಸಮಾಡುತ್ತಿಲ್ಲ, ಟ್ಯಾಂಕಿನಲ್ಲಿ ಪೆಟ್ರೋಲ್ ಇದೆಯೋ ಇಲ್ಲವೋ ಗೊತ್ತಿಲ್ಲ. ಈ ಪರಿಸ್ಥಿತಿಯಲ್ಲಿ ಆರ್ಥಿಕತೆಯನ್ನು ನಡೆಸುವುದು ಸುಲಭವಲ್ಲ.

2. ಹಣಕಾಸು ವ್ಯವಸ್ಥೆಯನ್ನು ಸುಸ್ಥಿತಿಗೆ ತರಬೇಕು. ಅದಕ್ಕಾಗಿ,

1. ತೀರಿಸಲಾಗಿದ ಸಾಲ ಎಷ್ಟಿದೆ ಅನ್ನೋದು ತಿಳಿಯಬೇಕು. ಅದಕ್ಕಾಗಿ ಒಂದು ಸ್ವತಂತ್ರ ಸಂಸ್ಥೆಯಿಂದ ಲೆಕ್ಕಾಚಾರ ಮಾಡಿಸಬೇಕು. ಮರುಪಾವತಿಸಲಾಗದ ಸಾಲ ಕೇವಲ ಎನ್‌ಬಿಎಫ್‌ಸಿ ಸಮಸ್ಯೆ ಮಾತ್ರವಲ್ಲ. ಅವುಗಳಿಗೆ ಬ್ಯಾಂಕುಗಳು ಸಾಲ ನೀಡಿವೆ. ಬ್ಯಾಂಕುಗಳ ವಾಸ್ತವ ಸ್ಥಿತಿ ಏನು ಅನ್ನುವುದೂ ಗೊತ್ತಾಗಬೇಕು.

2. ದಿವಾಳಿ ಕಾಯಿದೆಯನ್ನು ಬಲಪಡಿಸಬೇಕು

3. ತೀರಿಸಲಾಗದ ಸಾಲದ ಜವಾಬ್ದಾರಿಯನ್ನು ನಿರ್ವಹಿಸುವುದಕ್ಕೆ ಪ್ರತ್ಯೇಕವಾಗಿ ಬ್ಯಾಡ್ ಬ್ಯಾಂಕನ್ನು ಪ್ರಾರಂಭಿಸಬೇಕು. ಅದು ಎಲ್ಲಾ ಬ್ಯಾಂಕುಗಳ ಲೆಕ್ಕದಿಂದ ಕೆಟ್ಟ ಸಾಲದ ಲೆಕ್ಕವನ್ನು ತನ್ನ ಲೆಕ್ಕಕ್ಕೆ ತೆಗೆದುಕೊಳ್ಳುತ್ತದೆ. ಅದನ್ನು ಹೇಗೆ ವಸೂಲು ಮಾಡುವುದು, ಅಥವಾ ಅದಕ್ಕೆ ಏನು ಮಾಡಬೇಕು ಅನ್ನುವುದನ್ನು ಕುರಿತು ಅದು ನಿರ್ಧಾರ ತೆಗೆದುಕೊಳ್ಳುತ್ತದೆ.

4. ಎನ್‌ಬಿಎಫ್‌ಸಿ ಕುರಿತಂತೆ ಹೆಚ್ಚು ನಿಗಾ ವಹಿಸಬೇಕು.

5. ಸರ್ಕಾರಿ ಕ್ಷೇತ್ರದ ಬ್ಯಾಂಕುಗಳ ಪ್ರಮಾಣವನ್ನು ಕಡಿಮೆ ಮಾಡಬೇಕು. ಇದಕ್ಕಾಗಿ ಕೆಲವು ಬ್ಯಾಂಕುಗಳನ್ನು ಖಾಸಗೀಕರಣಗೊಳಿಸಬೇಕು, ಹೆಚ್ಚು ಖಾಸಗೀ ಬ್ಯಾಂಕುಗಳಿಗೆ ಅವಕಾಶ ಕಲ್ಪಿಸಬೇಕು.

6. ಮತ್ತೆ ಬ್ಯಾಂಕುಗಳಲ್ಲಿ ಇದೇ ಪರಿಸ್ಥಿತಿ ಮರುಕಳಿಸಬಾರದು. ಅದಕ್ಕಾಗಿ ಸುಧಾರಣೆಯನ್ನು ಅಳವಡಿಸಿಕೊಂಡ ಬ್ಯಾಂಕುಗಳಿಗೆ ಮಾತ್ರ ಸರ್ಕಾರ ನೆರವು ನೀಡಬೇಕು.

3. ಕೃಷಿ ಕ್ಷೇತ್ರದ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಬೇಕು. ಕೃಷಿ ಉತ್ಪನ್ನಗಳ ಬೆಲೆ ಕಡಿಮೆಯಾಗುತ್ತಿರುವುದರಿಂದ ರೈತರ ವರಮಾನ ಕಮ್ಮಿಯಾಗುತ್ತಿದೆ. ರೈತರ ಸ್ಥಿತಿಯನ್ನು ಸುಧಾರಿಸುವುದಕ್ಕೆ,

1. ರೈತರಿಗೆ ನೇರವಾಗಿ ಹಣವನ್ನು ವರ್ಗಾವಣೆ ಮಾಡಬೇಕು. ರಸಗೊಬ್ಬರದ ಕಂಪೆನಿಗಳು, ವಿದ್ಯುತ್ ಕಂಪೆನಿಗಳ ಮೂಲಕ ಸಬ್ಸಿಡಿ ನೀಡಬಾರದು. ಯಾಕೆಂದರೆ ಆ ಕ್ರಮದಿಂದ ಇವರೆಗೆ ರೈತರ ವರಮಾನ ಹೆಚ್ಚಿಲ್ಲ. ಒಟ್ಟಾರೆ ಉದ್ದೇಶ ಕೃಷಿ ಉತ್ಪಾದಕತ್ವನ್ನು ಹೆಚ್ಚಿಸುವುದಾಗಬೇಕು.

2. ಕೃಷಿ ಉತ್ಪನ್ನಗಳಿಗೆ ಒಂದು ಅಖಿಲ ಭಾರತ ಮಾರುಕಟ್ಟೆಯನ್ನು ಸೃಷ್ಟಿಸಬೇಕು

3. ಕೃಷಿ ವ್ಯಾಪಾರ ನಿಯಮಗಳನ್ನು ಪದೇ ಪದೇ ಬದಲಿಸುತ್ತಾ ಹೋಗಬಾರದು. ಬೆಲೆ ಕಡಿಮೆ ಆದಾಗ ತೆರಿಗೆ ಹಾಕುವುದು, ಹೆಚ್ಚಾದಾಗ ಆಮದು ರಫ್ತು ನಿಯಂತ್ರಣ ಮಾಡುವುದು, ಹೀಗೆ ಮಾಡುತ್ತಾ ಹೋದರೆ ರೈತರಿಗೆ ನೀತಿಗಳನ್ನು ಕುರಿತಂತೆ ಒಂದು ಅನಿಶ್ಚಿತತೆ ಕಾಡುತ್ತಿರುತ್ತದೆ. ಅವರಿಗೆ ಕೊನೆಗೂ ಯಾವ ಬೆಲೆ ಸಿಗುತ್ತದೆ ಅನ್ನುವುದು ತಿಳಿದಿರುವುದಿಲ್ಲ.

4. ನೀರಿನ ಉಳಿತಾಯಕ್ಕೆ ಉತ್ತೇಜನ ನೀಡಬೇಕು.

5. ಕೊನೆಯದಾಗಿ ಅವರು ಹೊಸ ಕುಲಾಂತರಿ ತಳಿಗಳಿಗೆ ಅವಕಾಶ ಮಾಡಿಕೊಡಬೇಕು ಅನ್ನುತ್ತಾರೆ. ಅವರು ಅದಕ್ಕೆ ಗುಜರಾತಿ ಹತ್ತಿ, ಚೀನಾ, ಬ್ರೆಜಿಲ್ ಇವುಗಳನ್ನು ಉದಾಹರಣೆಯಾಗಿ ಕೊಡುತ್ತಾರೆ. ಇದು ಹೆಚ್ಚು ವಿವಾದಾತ್ಮಕವಾದ ಸಲಹೆ.

ಒಟ್ಟಿನಲ್ಲಿ ಅವರೇ ಹೇಳುವಂತೆ ಪರಿಸ್ಥಿತಿ ತುಂಬಾ ಗಂಭೀರವಾಗಿದೆ. ತುಂಬಾ ದೊಡ್ಡ ನಿರೀಕ್ಷೆಯನ್ನು ಇಟ್ಟುಕೊಳ್ಳಬಾರದು. ಆದರೆ ಆರ್ಥಿಕತೆಗೆ ತನ್ನಷ್ಟಕ್ಕೆ ಸರಿಪಡಿಸಿಕೊಳ್ಳುವ ಸಾಮರ್ಥ್ಯವೂ ಸ್ವಲ್ಪಮಟ್ಟಿಗೆ ಇದೆ. ಸ್ವಲ್ಪ ಒಳ್ಳೆಯದು ಆಗಬಹುದು. ಆದರೆ ದೊಡ್ಡ ನಿರೀಕ್ಷೆ ಇಟ್ಟುಕೊಳ್ಳಬಾರದು. ಒಳ್ಳೆಯ ದಿನಗಳು ಬರುತ್ತದೆ. ಆದರೆ ಅದಕ್ಕೆ ಮುಂಚೆ ಪರಿಸ್ಥಿತಿ ಇನ್ನಷ್ಟು ಹದಗೆಡುತ್ತದೆ ಎಂಬ ಎಚ್ಚರಿಕೆಯನ್ನೂ ನೀಡಿದ್ದಾರೆ.

ಇದರಲ್ಲಿ ಹೊಸದೇನೂ ಇಲ್ಲ ಅನ್ನೋದು ಸರಿ. ಆದರೆ ಈ ಅಧ್ಯಯನ ಮತ್ತೆ ನಮ್ಮನ್ನು ಆರ್ಥಿಕತೆಯ ಕಡೆಗೆ ಗಮನ ಹರಿಸಲು ಒತ್ತಾಯಿಸುತ್ತದೆ. ಉಳಿದೆಲ್ಲವೂ ಕಾಯಬಹುದು. ಆದರೆ ಆರ್ಥಿಕ ಸ್ಥಿತಿಯನ್ನು ಭದ್ರಪಡಿಸಿಕೊಳ್ಳುವುದು ಜರೂರಾಗಿ ಆಗಬೇಕು. ಯಾಕೋ ಯಾರೂ ಅದನ್ನು ಗಂಭೀರವಾಗಿ ತೆಗೆದುಕೊಂಡಿಲ್ಲ.



# ಭಾರತ ಎಂಬ ಕಲ್ಪನೆಯನ್ನು ರಕ್ಷಿಸೋಣ

## ಕೌಶಿಕ್ ಬಸು ಮತ್ತು ನಿರ್ವಿಕಾರ್ ಸಿಂಗ್

ಕೇಡಿನ ಕಾರ್ಮೋಡ ಭಾರತವನ್ನು ಆವರಿಸಿಕೊಂಡಿದೆ. ವಿಭಜನೆ ಹಾಗೂ ದ್ವೇಷದ ನೆರಳು ಕವಿದುಕೊಂಡಿದೆ. ನಾಗರಿಕ ಸಮಾಜವನ್ನೇ ಆತಂಕಕ್ಕೆ ಒಡ್ಡಿದೆ. ಆರ್ಥಿಕ ಪ್ರಗತಿಯನ್ನು ಸ್ಥಗಿತಗೊಳಿಸುವ ಅಥವಾ ಹಿಂದಕ್ಕೆ ಒಯ್ಯುವ ಗಾಬರಿ ಕಾಡುತ್ತಿದೆ. ಒಂದು ದೊಡ್ಡ ಪ್ರಪಾತದ ಕಡೆಗೆ ಹೋಗುತ್ತಿದ್ದೇವೆ. ಮತ್ತೆ ಹಿಂತಿರುಗಿ ಬರಲಾಗದೆ ಇರಬಹುದು. ಈ ಅಪಾಯದ ಎಲ್ಲಾ ಸೂಚನೆಗಳು ಇವೆ.

ಹೊಸ ದಶಕ ಪ್ರಾರಂಭವಾಗುತ್ತಿದ್ದಂತೆ ನಾವಿಬ್ಬರೂ ಒಟ್ಟಿಗೆ ಬರೆಯಲು ನಿರ್ಧರಿಸಿದೆವು. ಆದರೆ ಈಗ ನಾವು  ಯಾವುದೋ ಆರ್ಥಿಕ ಸಿದ್ಧಾಂತವನ್ನು ಕುರಿತಾಗಲಿ ಅಥವಾ ತಕ್ಷಣದ ಯಾವುದೋ ನೀತಿಯ ಸವಾಲನ್ನಾಗಲಿ ಕುರಿತು ಬರೆಯುತ್ತಿಲ್ಲ.  ದೇಶದ ಸಮಾಜಿಕ ಹಾಗೂ ರಾಜಕೀಯ ಭವಿಷ್ಯದ ಬಗ್ಗೆ ಬರೆಯಲು ನಿರ್ಧರಿಸಿದ್ದೇವೆ. ಅದು ನಮ್ಮ ಅಸ್ತಿತ್ವಕ್ಕೇ ಸವಾಲಾಗಿದೆ. ನಾವಿಬ್ಬರು ಪರಸ್ಪರ ಒಬ್ಬರನ್ನೊಬ್ಬರು ಹಲವು ದಶಕಗಳಿಂದ ಬಲ್ಲೆವು. ಇಬ್ಬರೂ ಭಾರತದಲ್ಲೇ ಬೆಳೆದವರು. ನಿಜ ನಾವು ಬೆಳೆದ ಭಾರತ ಪರಿಪೂರ್ಣವಾಗಿರಲಿಲ್ಲ. ಆದರೆ ಅದಕ್ಕೆ ಸಹಬಾಳ್ವೆಯ ಕನಸಿತ್ತು. ಆ ಕನಸು ನಮ್ಮಲ್ಲಿ ಭರವಸೆಯನ್ನು ಮೂಡಿಸಿತ್ತು. ನಾವಿಬ್ಬರೂ ವಿಭಿನ್ನ ಹಿನ್ನಲೆಯಿಂದ ಬಂದವರು. ನಮ್ಮಲ್ಲಿ ಒಬ್ಬರು ಬಂಗಾಳಿ, ಇನ್ನೊಬ್ಬರು ಪಂಜಾಬಿ. ಒಬ್ಬರು ಹಿಂದು ಇನ್ನೊಬ್ಬರು ಸಿಕ್. ಮಾನವರ ಕ್ಷೇಮ, ಸಹಾನುಭೂತಿ, ಸಹಿಷ್ಣುತೆ ಮತ್ತು ಕರುಣೆ ಈ ನಂಬಿಕೆಗಳನ್ನು ಕುರಿತ ಶ್ರದ್ಧೆ ನಮ್ಮಿಬ್ಬರನ್ನು ಒಟ್ಟಿಗೆ ತಂದಿದೆ. ಧರ್ಮ, ಲಿಂಗ ಮತ್ತು ಜಾತಿಯನ್ನು ಮೀರಿಕೊಂಡು ಎಲ್ಲಾ ಮನುಷ್ಯರನ್ನು ಸಮಾನವಾಗಿ ಕಾಣುವುದಕ್ಕೆ ಸಾಧ್ಯವಾಗಬೇಕು. ಕಷ್ಟದಲ್ಲಿದ್ದವರಿಗೆ ನೆರವಾಗಬೇಕು ಎಂಬ ಭಾವನೆ ನಮ್ಮನ್ನು ಬೆಸೆದಿದೆ. ನೈತಿಕವಾಗಿ ಯಾವುದು ಸರಿ ಅನ್ನುವ ತೀರ್ಮಾನ ತೆಗೆದುಕೊಳ್ಳುವಾಗ, ನಿರ್ಧರಿಸುತ್ತಿರುವ ವ್ಯಕ್ತಿ ಯಾರು ಎನ್ನುವುದಾಗಲಿ ಅಥವಾ ಆ ವ್ಯಕ್ತಿಯ ಧರ್ಮ, ಜಾತಿ ಯಾವುದು ಎನ್ನುವುದಾಗಲಿ ಮುಖ್ಯವಾಗಬಾರದು. ಇಂತಹದೇ ತತ್ತ್ವಗಳನ್ನು ಜ್ಞಾನೋದಯ ಕಾಲದ ದಾರ್ಶನಿಕ ಜಾನ್ ರಾಲ್ಸ್ ತನ್ನ ಬರಹಗಳಲ್ಲಿ ಕಾಣಬಹುದು. ಅವುಗಳಿಗೆ ಅವನೂ ಈ ತತ್ತ್ವಗಳಿಗೆ ಮಹತ್ತ್ವ ನೀಡಿದ್ದಾನೆ. ಇವು ಅಷ್ಟು ಪುರಾತನವಾದ ತತ್ತ್ವಗಳು. ಭಾರತದ ದಾರ್ಶನಿಕರು ಮತ್ತು ಧಾರ್ಮಿಕ ಚಿಂತಕರಲ್ಲೂ ಇದೇ ಚಿಂತನೆಗಳನ್ನು ಕಾಣಬಹುದು. ಈ ಚಿಂತನೆಗಳೇ ಭಾರತವೆಂಬ ಕಲ್ಪನೆಯ ಆಧಾರಸ್ತಂಭ ಆಗಿವೆ.

### ಬಹುತ್ವ ಸಂಸ್ಕೃತಿಯ ಭಾರತ

ಗುರುನಾನಕ್ ಅವರ ತತ್ತ್ವನ್ನು ಅರ್ಥಮಾಡಿಕೊಳ್ಳುವುದಕ್ಕೆ ಇದು ಸಕಾಲ. ಗುರು ಅರ್ಜನ್ ಬರೆಯುತ್ತಾರೆ "ಯಾರೂ ನನ್ನ ಶತ್ರುವಲ್ಲ.  ಯಾರೂ ನನಗೆ ಅಪರಿಚಿತರಲ್ಲ. ನಾನು ಎಲ್ಲರೊಂದಿಗೂ ಇದ್ದೇನೆ." ಗುರು ಗೋವಿಂದ ಸಿಂಗ್ ಒತ್ತಿ ಹೇಳುತ್ತಾರೆ "ಎಲ್ಲ ಮನುಷ್ಯರನ್ನು ಒಂದೇ ಎಂದು ಕಾಣು." ರಬೀಂದ್ರನಾಥ್ ಠಾಕೂರರು ಹೇಳುತ್ತಾರೆ "ಆರ್ಯರೇ ಬನ್ನಿ, ಆರ್ಯೇತರರೇ ಬನ್ನಿ, ಹಿಂದುಗಳೇ, ಮುಸ್ಲಿಮರೇ ಇಂದು ಬನ್ನಿ, ಇಂಗ್ಲೀಷರೇ ಬನ್ನಿ, ಕ್ರಿಶ್ಚಿಯನ್ನರೇ ಬನ್ನಿ, ಬ್ರಾಹ್ಮಣರೇ ಬನ್ನಿ, ನಿಮ್ಮ ಮನಸ್ಸುಗಳನ್ನು ಶುದ್ಧ ಮಾಡಿಕೊಳ್ಳಿ, ಎಲ್ಲರೂ ಪರಸ್ಪರ ಕೈಜೋಡಿಸಿ."

ಇಂತಹ ಮೂಲಭೂತ ನಂಬಿಕೆಗಳು ಭಾರತದಲ್ಲಿ ನಾಶವಾಗುತ್ತಿರುವುದು ನಮ್ಮನ್ನಿಂದು ಕಾಡುತ್ತಿದೆ. 1947ರ ಆಗಸ್ಟ್ ತಿಂಗಳ ಮಧ್ಯ ರಾತ್ರಿಯ ಸ್ವಾತಂತ್ರ್ಯದ ಆ ದಿನಗಳಿಂದ ಭಾರತದ ಚರಿತ್ರೆ ಪ್ರಕ್ಷುಬ್ಧ ಸ್ಥಿತಿಯನ್ನು ಕಂಡಿದೆ. ನಾವು ನಾಚಿಕೆಯಿಂದ ತಲೆತಗ್ಗಿಸಬೇಕಾದ ಹಲವು ದುರ್ಘಟನೆಗಳು ನಡೆದುಹೋಗಿವೆ. ಎರಡನೆಯ ಮಹಾಯುದ್ಧದ ಮುಗಿದ ನಂತರ ಹಲವು ಹೊಸ ರಾಷ್ಟ್ರಗಳು ಹುಟ್ಟಿಕೊಂಡವು. ಜನ ಮತ್ತು ರಾಷ್ಟ್ರಗಳು ವಸಾಹತುಶಾಹಿಯ ಬಂಧನಗಳನ್ನು ಕಳಚಿಕೊಂಡು ಸ್ವಾತಂತ್ರ್ಯವನ್ನು ಘೋಷಿಸಿಕೊಂಡಿದ್ದಾರೆ. ಈ ರಾಷ್ಟ್ರಗಳು ಆದರ್ಶವನ್ನು ಇಟ್ಟುಕೊಂಡು ಹುಟ್ಟಿಕೊಂಡವು. ಪ್ರಜಾಸತ್ತೆ ಮತ್ತು ಸಮಾನತೆಯನ್ನು ಆತುಕೊಂಡವು. ಆದರೆ ಈ ದೇಶದ ಆದರ್ಶಗಳನ್ನು ಒಂದೊಂದಾಗಿ ಮಿಲಿಟರಿ ದಂಗೆ ಮತ್ತು ಧಾರ್ಮಿಕ ದಾಳಿಗಳು ಛಿದ್ರಗೊಳಿಸಿದವು. ಆದರೆ ಭಾರತ ಮಾತ್ರ ಪ್ರಜಾಸತ್ತೆಗೆ, ವಾಕ್ ಸ್ವತಂತ್ರಕ್ಕೆ, ಧರ್ಮನಿರಪೇಕ್ಷತೆಗೆ ಬದ್ಧವಾಗಿ ಭರವಸೆಯ ದೀವಿಗೆಯಾಗಿ ನಿಂತುಕೊಂಡಿತ್ತು. 1990ರಿಂದ ಆರ್ಥಿಕ ಪ್ರಗತಿಯೂ  ವೇಗವಾಗಿ ಆಗುತ್ತಿತ್ತು.

ಇಂದು ಹಲವು ಸವಾಲುಗಳು ನಮ್ಮನ್ನು ಕಾಡುತ್ತಿವೆ. ಬಡತನ ಮತ್ತು ತಾರತಮ್ಯ ಕಾಡುತ್ತಿದೆ. ಭ್ರಷ್ಟಾಚಾರವಿದೆ. ಪರಿಸರದ ಸವಾಲು ಬೆಳೆಯುತ್ತಿದೆ. ಮಾಲಿನ್ಯವನ್ನು ನಿಯಂತ್ರಿಸದಿದ್ದರೆ, ಅದು ಮುಂದಿನ ತಲೆಮಾರಿನ ಗ್ರಹಣ ಶಕ್ತಿಯನ್ನೇ ಹಾಳುಮಾಡುತ್ತದೆ. ಇವೆಲ್ಲವನ್ನು ನಾವು ತುರ್ತಾಗಿ ಎದುರಿಸಬೇಕಾಗಿದೆ. 1990ರ ಆರ್ಥಿಕ ಪ್ರಗತಿ ನಮ್ಮಲ್ಲಿ ಭರವಸೆಯನ್ನು ಮೂಡಿಸಿತ್ತು. ನಾವು ಈ ಎಲ್ಲಾ ಸವಾಲುಗಳನ್ನು ನೇರವಾಗಿ ಎದುರಿಸಬಲ್ಲೆವು ಎನ್ನುವ ಭರವಸೆಯನ್ನು ಉಂಟುಮಾಡಿತ್ತು. ಆದರೆ ಇಂದು ಪ್ರಚಾರಮಾಡುತ್ತಿರುವ ವಿಭಜನೆಯ ಮನಸ್ಸು ದೊಡ್ಡ ಹಿನ್ನಡೆಯನ್ನು ತಂದಿದೆ. ಇದು ನಮ್ಮ ದೇಶದಲ್ಲಿದ್ದ ನಂಬಿಕೆ ಮತ್ತು ಸಹಕಾರದ ಭಾವನೆಯನ್ನು ಘಾಸಿಗೊಳಿಸಿದೆ. ಉದಾಹರಣೆಗೆ ಉತ್ತರಪ್ರದೇಶದಲ್ಲಿ "ಪ್ರತೀಕಾರಕ್ಕೆ" ಸರ್ಕಾರದ ಯಂತ್ರವನ್ನು ಬಳಸಿರುವುದು, ವಿರೋಧದ ಧ್ವನಿಯನ್ನು ಹತ್ತಿಕ್ಕುತ್ತಿರುವುದು ನೈತಿಕವಾಗಿ ಸ್ವೀಕಾರಾರ್ಹವಲ್ಲ. ಇದರಿಂದ ಜಾಗತಿಕವಾಗಿ ಭಾರತದ ಸ್ಥಾನಮಾನಕ್ಕೆ ಧಕ್ಕೆಯಾಗಿದೆ.

### ನಂಬಿಕೆ ಆರ್ಥಿಕತೆಯನ್ನು ಉತ್ತಮಗೊಳಿಸುತ್ತದೆ

ಸಾಮಾಜಿಕ ನಂಬಿಕೆ ಮತ್ತು ನಾನು ನನ್ನದು ಎಂಬ ಬಾಂಧವ್ಯ ಆರ್ಥಿಕತೆಯನ್ನು ಸುಧಾರಿಸುತ್ತದೆ, ಆರ್ಥಿಕ ಪ್ರಗತಿಯೂ ಸಾಧ್ಯವಾಗುತ್ತದೆ. ಇದರ ಮಹತ್ವ ಯಾರಿಗೂ ಅರ್ಥವಾಗಿಲ್ಲ. ಇದಕ್ಕೆ ಹೇರಳವಾದ ಪುರಾವೆಗಳಿದ್ದರೂ ಇದು ಯಾರಿಗೂ ಮನವರಿಕೆಯಾಗಿಲ್ಲ. ಯಾನ್ ಅಲ್ಗಾನ್ ಮತ್ತು ಪಿಯರಿ ಕಾಹುಕ್ 'ವಿಶ್ವಾಸ ಹೆಚ್ಚಾದಂತೆ ರಾಷ್ಟ್ರೀಯ ವರಮಾನವೂ ಅತ್ಯಂತ ತ್ವರಿತವಾಗಿ ಹೆಚ್ಚುತ್ತದೆ' ಎಂದು ಬಲವಾದ ಸಂಖ್ಯಾಶಾಸ್ತ್ರೀಯ ವಿಶ್ಲೇಷಣೆಗಳನ್ನು ಬಳಸಿಕೊಂಡು ತೋರಿಸಿದ್ದಾರೆ. ಸ್ವೀಡನ್ನಿನಲ್ಲಿ ಸಾಧ್ಯವಾಗಿರುವ ವಿಶ್ವಾಸದ ಮಟ್ಟವನ್ನು ಆಫ್ರಿಕಾದಲ್ಲಿ ಸಾಧಿಸುವುದಕ್ಕೆ ಸಾಧ್ಯವಾದರೆ, ಅಲ್ಲಿ ಈಗಿರುವುದಕ್ಕಿಂತ ಆರುಪಟ್ಟು ತಲಾ ವರಮಾನ ಹೆಚ್ಚುತ್ತದೆ ಎಂದು ಅವರ ಅಧ್ಯಯನ ತೋರಿಸುತ್ತದೆ. ಕೆಲಸಗಾರರಲ್ಲಿ ವಿಶ್ವಾಸ ಮೂಡಿಸಿದರೆ ಮತ್ತು ಕಂಪೆನಿ ತಮಗೂ ಸೇರಿದ್ದು ಅನ್ನುವ ಭಾವನೆ ಅವರಲ್ಲಿ ಮೂಡಿದರೆ ಅವರ ಉತ್ಪಾದಕತ್ವ ಶೇಕಡ 56ರಷ್ಟು ಹೆಚ್ಚುತ್ತದೆ, ಶೆಕಡ 50ರಷ್ಟು ಗೈರುಹಾಜರಿಯ ಸಾಧ್ಯತೆಗಳು ಕಡಿಮೆಯಾಗುತ್ತದೆ. ಖಾಯಿಲೆ ರಜಗಳು ಶೇಕಡ 75ರಷ್ಟು ಕಡಿಮೆಯಾಗುತ್ತದೆ ಎಂದು ಹಾರ್ವರ್ಡ್ ಬಿಸಿನೆಸ್ ರಿವ್ಯೂ ಪ್ರಕಟಿಸಿರುವ ಒಂದು ಅಧ್ಯಯನ ತೋರಿಸಿದೆ. "10,000 ಜನರಿರುವ ಕಂಪೆನಿಯಲ್ಲಿ ಇದರಿಂದ 52ಮಿಲಿಯನ್ ಪೌಂಡಿಗೂ ಹೆಚ್ಚು ವಾರ್ಷಿಕ ಉಳಿತಾಯ ಆಗುತ್ತದೆ" ಇದನ್ನು ಒಂದು ದೇಶಕ್ಕೆ ಹಿಗ್ಗಿಸಿ ಲೆಕ್ಕ ಹಾಕಿಕೊಂಡು ನೋಡಿದರೆ ಈ ತಮ್ಮದು, ತಮಗೆ ಸೇರಿದ್ದು ಎಂಬ ಭಾವನೆಯ ಪ್ರಾಮುಖ್ಯ ಅರ್ಥವಾಗುತ್ತದೆ.

2019ರ ಸಂಕ್ಷೋಭೆಗೂ ಮೊದಲೇ ಭಾರತದ ಆರ್ಥಿಕತೆಯ ಹಿನ್ನಡೆ ಪ್ರಾರಂಭವಾಗಿತ್ತು. ಕೈಗಾರಿಕೆ, ಕೃಷಿ, ರಫ್ತು ಇವುಗಳ ಬೆಳವಣಿಗೆಯ ವೇಗ ಕಳೆದ ದಶಕಕ್ಕಿಂತ ಕಡಿಮೆಯಾಗಿತ್ತು. ಈಗ ನಮ್ಮ ಮೂಲಭೂತ ನೈತಿಕ ನಂಬಿಕೆಗಳು




ಅಪಾಯದಲ್ಲಿವೆ. ದ್ವೇಷ ಮತ್ತು ವಿಭಜನೆಯನ್ನು ಪ್ರಚೋದಿಸುತ್ತಿರುವುದರಿಂದ ಭಾರತದ ಆರ್ಥಿಕತೆ ಮತ್ತಷ್ಟು ಕುಸಿಯುತ್ತದೆ. ನಾವೀಗ ಕಡಿದಾದ ಇಳಿಜಾರಿನಲ್ಲಿ ಕೆಳಕ್ಕೆ ಜಾರುತ್ತಿದ್ದೇವೆ.

## ಪಕ್ಷಪಾತವನ್ನು ತಿರಸ್ಕರಿಸೋಣ

ನಾವು ಈ ಹೊತ್ತಿನಲ್ಲಿ ಒಂದು ಕ್ಷಣ ನಿಂತು ನಾವು ವ್ಯಕ್ತಿಗಳಾಗಿ ಏನು ಮಾಡಬೇಕು ಎಂದು ಕೇಳಿಕೊಳ್ಳಬೇಕು. ನಾವು ಈ ಲೇಖನದಲ್ಲಿ ಪ್ರತ್ಯೇಕತಾ ಸಿದ್ಧಾಂತಗಳ ವಿರುದ್ಧ ಹೋರಾಡುತ್ತಿರುವ ಯುವ ವಿದ್ಯಾರ್ಥಿಗಳು, ವಿಜ್ಞಾನಿಗಳು, ಹಿಂದುಗಳು, ಸಿಖ್ಖರು, ಕ್ರಿಶ್ಚಿಯನ್ನರು ಮತ್ತು ಮುಸ್ಲಿಮರಲ್ಲಿ ಮಾತ್ರ ಮನವಿ ಮಾಡಿಕೊಳ್ಳುತ್ತಿಲ್ಲ. ನಾವು ಹಿಂಸೆಯನ್ನು ಪ್ರಚೋದಿಸುವವರನ್ನೂ ಕೇಳಿಕೊಳ್ಳುತ್ತಿದ್ದೇವೆ. ನಿಮ್ಮ ಹೃದಯವನ್ನು ಹೊಕ್ಕು ನೋಡಿಕೊಳ್ಳಿ, ಹಿಂಸೆಯನ್ನು ಬಿಡಿ. ಲಾಟಿ ಬೀಸುತ್ತಾ ಹೋದರೆ ಪೋಲಿಸರು ಮತ್ತು ಸರ್ಕಾರಿ ಅಧಿಕಾರಿಗಳನ್ನು ಜನ ನಂಬುವುದಿಲ್ಲ, ಅವರ ಮಾತನ್ನು ಕೇಳುವುದಿಲ್ಲ. ಅವರು ಇಂದು ಒಂದು ನೈತಿಕ ಘನತೆಯನ್ನು ಕಾಪಾಡಿಕೊಳ್ಳಬೇಕು.

ನಮ್ಮ ಕ್ಯಾಂಪಸ್ಸಿನಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಇದು ಅರ್ಥವಾಗುತ್ತದೆ ಅನ್ನುವುದು ನಮ್ಮಲ್ಲಿ ಭರವಸೆ ಮೂಡಿಸುತ್ತದೆ. ಯಾವುದೇ ರಾಜಕೀಯ ಪಕ್ಷಗಳಿಗೂ ಸೇರದ ವಿಜ್ಞಾನಿಗಳು, ಪ್ರಮುಖ ಚಿಂತಕರು ಮಾತನಾಡಲು ಪ್ರಾರಂಭಿಸಿರುವುದು ನಮ್ಮಲ್ಲಿ ಭರವಸೆಯನ್ನು ಮೂಡಿಸುತ್ತದೆ. ಇತರ ಧಾರ್ಮಿಕ ಗುಂಪುಗಳ ವಿರುದ್ಧ ಪಕ್ಷಪಾತ ಧೋರಣೆ ಅನುಸರಿಸದ ಸಿಖ್ಖರು, ಎಲ್ಲಾ ಅಲ್ಪಸಂಖ್ಯಾತರನ್ನು ರಕ್ಷಿಸಲು ಮುಸ್ಲಿಮರು ಮತ್ತು ಕ್ರಿಶ್ಚಿಯನ್ನರ ಜೊತೆಗೆ ನಿಂತಿರುವ ಹಿಂದುಗಳು, ಪ್ರಜಾಪ್ರಭುತ್ವ ಮತ್ತು ಧರ್ಮನಿರಪೇಕ್ಷೆಗೆ ಭಾರತದ ಬದ್ಧತೆಯನ್ನು ಎತ್ತಿಹಿಡಿದ ಜನರು ನಮ್ಮಲ್ಲಿ ವಿಶ್ವಾಸ ಮೂಡಿಸುತ್ತಿದ್ದಾರೆ.

ನಾವು ಒಟ್ಟಾಗಿ ನಿಂತು, ಪ್ರಪಾತದಿಂದ ಹೊರಗೆ ಬಂದುಬಿಟ್ಟರೆ ನಮ್ಮೆಲ್ಲಾ ಸಮಸ್ಯೆಗಳು ಮಾಯವಾಗುತ್ತವೆ ಅಂತಲ್ಲ. ಭಾರತದ್ದು ಕೆಳ ಮಧ್ಯಮ ವರಮಾನದ ಆರ್ಥಿಕತೆ. ಅನ್ಯಾಯ, ಅಸಮಾನತೆ, ನೋವು ಇವೆಲ್ಲಾ ತಕ್ಷಣದಲ್ಲಿ ಇಲ್ಲವಾಗಿಬಿಡುವುದಿಲ್ಲ. ಆದರೂ ದೇಶದಲ್ಲಿ ಇಂದು ಬೋಧಿಸುತ್ತಿರುವ ಪಕ್ಷಪಾತವನ್ನು ಸಂಪೂರ್ಣವಾಗಿ ನಿರಾಕರಿಸಲು ಸಂಕಲ್ಪಿಸಿ, ಅನಂತರ ನಮ್ಮ ಮುಂದಿರುವ ಹಲವು ಸವಾಲುಗಳನ್ನು ಎದುರಿಸಲು ಪ್ರಯತ್ನಿಸಿದರೆ ಆಗ ಏನಾದರೂ ಮಾಡಬಹುದು. ಆಗ ಮಾತ್ರ ಪ್ರಪಾತದಿಂದ ಹೊರಬಂದು, ಕೇವಲ ನಮಗೆ ಮಾತ್ರವಲ್ಲ ಇಡಿ ಜಗತ್ತಿಗೆ ಮಾದರಿಯಾಗಬಲ್ಲ ಸಮಾಜವನ್ನು ಮತ್ತು ಒಂದು ಆರ್ಥಿಕತೆಯನ್ನು ಕಟ್ಟುವ ನಿರೀಕ್ಷೆಯನ್ನು ಇಟ್ಟುಕೊಳ್ಳಬಹುದು.

# ಒಂದು ಹೊಸ ರಾಷ್ಟ್ರೀಯ ಚಳುವಳಿ ಬೇಕಾಗಿದೆ

**ಅಬಿಜಿತ್ ಬ್ಯಾನರ್ಜಿ**

ನಾವ್ಯಾರೂ ಕೋತಿ ಮನುಷ್ಯನಾಗುವುದನ್ನು ನೋಡಿಲ್ಲ. ಆದರೆ ಮನುಷ್ಯರು ಮಂಗಗಳಾಗುವುದನ್ನು ಆಗೀಗ ನೋಡುತ್ತಿರುತ್ತೇವೆ. ತಾನು ಕಂಡೇ ಇಲ್ಲದ್ದನ್ನು, ಯಾರೂ ಯಾವುತ್ತೂ ಕಾಣದ್ದನ್ನು ಕಲ್ಪಿಸಿಕೊಳ್ಳುವ ವಿಶಿಷ್ಟ ಸಾಮರ್ಥ್ಯ ಮನುಷ್ಯನಿಗೆ ಮಾತ್ರ ಸಾಧ್ಯ. ಚಿಂಪಾಂಜಿಗಳಿಗೆ ಕೆಲವು ಗುರುತುಗಳನ್ನು ಗ್ರಹಿಸಿಕೊಳ್ಳಲಿಕ್ಕೆ ಸಾಧ್ಯವಾಗಬಹುದು, ಕೆಲವು ಪದಗಳನ್ನೂ ಕಲಿಯಬಹುದು. ಆದರೆ ಯಾವುದೇ ಚಿಂಪಾಂಜಿಗೂ ಗಣೇಶನನ್ನೋ ಅಥವಾ ಒಂದು ಯುನಿಕಾರ್ನನನ್ನೋ ಕಲ್ಪಿಸಿಕೊಳ್ಳುವುದಕ್ಕೆ ಸಾಧ್ಯವೇ ಇಲ್ಲ. ಇತ್ತೀಚಿನ ದಿನಗಳಲ್ಲಿ ಮನುಷ್ಯನ ಈ ಗುಣವನ್ನು ಅಲ್ಲಗೆಳೆಯುವ ಬಲಪಂಥೀಯ ಜನಪ್ರಿಯ ರಾಜಕೀಯ ಜಗತ್ತಿನ ಎಲ್ಲೆಡೆ ಬೆಳೆಯುತ್ತಿದೆ. “ದಲಿತರು ಅಂದರೆ ಮಲ ತೆಗೆಯುವವರು. ಅವರು ಸತ್ತ ಪ್ರಾಣಿಗಳನ್ನು, ಮನುಷ್ಯರ ಕಕ್ಕಸ್ಸನ್ನು ಮುಟ್ಟುವ ಜನ. ಅವರ ಕೈಯಲ್ಲಿ ಕೈಯಲ್ಲಿ ನೀರೇ ಕುಡಿಯುವುದಿಲ್ಲ. ಇನ್ನು ಅವರಿಗೆ ಮಗಳನ್ನು ಕೊಡುವುದೆ?” ಹಾಗೆ “ಮುಸಲ್ಮಾನರು ಕಡುಕರು, ಬಾಂಬು ಹಾಕಿ ಮುಗ್ಧ ಜನರನ್ನು ಕೊಲ್ಲೋ ಜನ. ಹಿಂಸೆ ಅವರ ಭಾಗವಾಗಿಬಿಟ್ಟಿದೆ.” ಹಾಗೆ ಹೇಳುತ್ತಾರೆ “ಕರಿಯರು ಅಂದ್ರೆ ಡ್ರಗ್ಸ್ ಮಾರೋರು ಅಂತ ಯಾರಿಗೆ ತಾನೆ ಗೊತ್ತಿಲ್ಲ. ಕ್ರಿಮಿನಲ್ಲುಗಳು. ಜೈಲು ತುಂಬಾ ಅವರೇ ತುಂಬಿಕೊಂಡಿದ್ದಾರೆ. ಅವರು ನಮಗೆ ಸಮಾನರಾಗೋದಕ್ಕೆ ಹೇಗೆ ಸಾಧ್ಯ?”

ದಲಿತರೇನು ಮಲ ತೆಗೆಯಬೇಕು ಅಂತ ಬಯಸಿಕೊಂಡು ತೆಗೆಯುತ್ತಿಲ್ಲ. ಹಾಗೆಯೇ ನೀಗ್ರೋಗಳು ತಮ್ಮದು ಗುಲಾಮಗಿರಿಯ ಹಾಗೂ ಅನ್ಯಾಯದ ಚರಿತ್ರೆ ಆಗಿರಲಿ ಅಂತ ಬಯಸಿರಲಿಲ್ಲ. ಕೊಲ್ಲೋದು ರಾಜಕೀಯ ಪ್ರತಿರೋಧದ ಒಂದು ರೂಪ. ಇಂದು ಮುಸ್ಲಿಂ ಭಯೋತ್ಪಾದಕತೆ ಆ ಹಿಂಸೆಯ ಪರಂಪರೆಯನ್ನು ಮುಂದುವರಿಸಿಕೊಂಡು ಹೋಗುತ್ತಿದೆ. ಸಾಮಾನ್ಯವಾಗಿ ಇಂತಹ ಹಿಂಸೆಯಲ್ಲಿ ಮುಗ್ಧರೆ ಸಾಯುತ್ತಿದ್ದರು. ಹಲವು ಬಂಗಾಲಿಗಳು ಮತ್ತು ಮಹಾರಾಷ್ಟ್ರದ (ಹಿಂದುತ್ವದ ಪ್ರಬಲ ಪ್ರತಿಪಾದಕ ವಿನಾಯಕ ದಾಮೋದರ್ ಸಾವಕರ್ ಸೇರಿದಂತೆ) ಹಿಂದುಗಳು  ಇದನ್ನು ಬ್ರಿಟೀಷರ ವಿರುದ್ಧ ಬಳಸಿದ್ದರು. ಯಹೂದಿ ಮಿಲಿಟರಿ ಮಂದಿ ಬ್ರಿಟೀಷರ ವಿರುದ್ಧ ಬಳಸಿದ್ದರು. ಆಗ ಅದು ಪ್ಯಾಲೆಸ್ಟೈನ್ ಆಗಿತ್ತು. ಐರಿಷ್ ಕ್ಯಾಥೊಲಿಕ್ಸರು ಇತ್ತೀಚಿನ ಕೆಲವು ವರ್ಷಗಳವರೆಗೆ ತಮ್ಮ ಇಂಗ್ಲಿಷ್ ದನಿಗಳ ವಿರುದ್ಧ ಬಳಸಿದ್ದರು. ಈಗ ಆ ಚರಿತ್ರೆ  ಹೆಚ್ಚು ಕಮ್ಮಿ ಕಾಣೆಯಾಗಿದೆ. 2001ರ ನಂತರ ಮುಸ್ಲಿಮರು ಮಾತ್ರ ಭಯೋತ್ಪಾದಕರಾಗಿದ್ದಾರೆ. ಇದೇ ರೀತಿಯ ಪದಶಃ ವಿವರಣೆ ಕೊಡೊ ಪ್ರವೃತ್ತಿ ಭೂಮಿ ಚಪ್ಪಟೆಯಾಗಿದೆ ಎಂಬ ಚಳುವಳಿಗೂ ಸ್ಫೂರ್ತಿ ನೀಡಿದೆ. ಅಮೇರಿಕೆಯಲ್ಲಿ ಟ್ರಂಪ್ ಬೆಂಬಲಿಗರಲ್ಲಿ ಇದು ತುಂಬಾ ಜನಪ್ರಿಯವಾಗಿದೆ: “ನನಗೆ ಭೂಮಿ ಚಪ್ಪಟೆಯಾಗಿ ಕಾಣುತ್ತಿದೆ. ಅಷ್ಟೇ ಅಲ್ಲ ಬೈಬಲಿನಲ್ಲೂ ಹಾಗೆ ಹೇಳಿದೆ.” ಜೊತೆಗೆ ಪಾಪ ಡಾರ್ವಿನನ್ನು ಕೂಡ ಬೈಬಲ್ ಗೆಳೆಯರು, ಹಾಗೂ ನಮ್ಮ ಹಿಂದಿ ವಲಯದವರು ಟೀಕಿಸುತ್ತಿದ್ದಾರೆ. ಡಾರ್ವಿನ್ ಹೇಳೋದು ಅವರ ಧರ್ಮಗ್ರಂಥಗಳಿಗೆ ಅನುಗುಣವಾಗಿ ಇಲ್ಲವಂತೆ. ಇಂತಹ ನಿಲುವುಗಳನ್ನು ಸಮಾಜದ ಮೇಲ್ ಸ್ತರದದವರ ವಿಜ್ಞಾನ ಹಾಗೂ ಸಮಾಜವಿಜ್ಞಾನದ ಆಚರಣೆಗಳಿಗೆ ತಲಸಮುದಾಯದ ಸವಾಲು ಅಂತ ಭಾವಿಸುವ ಅಪಾಯ ಇದೆ. ಆದರೆ ಅದು ತಪ್ಪು. ಮತ್ತು ಅಂತಿಮವಾಗಿ ಅವರನ್ನು ಒಲೈಕೆ ಮಾಡಿದಂತೆ ಆಗುತ್ತದೆ. ರಸ್ತೆಯಲ್ಲಿನ ಹೆಂಗಸು ವಿಜ್ಞಾನದ ಸತ್ಯ ಅದರಷ್ಟಕ್ಕೆ ಕಾಣಬೇಕು ಅಂತ ಕೇಳುವುದಿಲ್ಲ. ಅವಳು ನಮ್ಮ ನಾಯಕರಷ್ಟೇ ಅಥವಾ ಅವರಿಗಿಂತ ಹೆಚ್ಚು ಅಮೂರ್ತ ಕಲ್ಪನೆಗಳನ್ನು ಗ್ರಹಿಸಿಕೊಳ್ಳಬಲ್ಲಳು. ಯಾಕೆಂದರೆ ಅವಳನ್ನು ಸಿನಿಸಿಸಂ ಅಷ್ಟೊಂದು ಕಾಡುವುದಿಲ್ಲ. ಅವಳು ದಿನ ಮೈಕ್ರೋವೇವ್ ಬಳಸುತ್ತಾಳೆ. ಬೆಂಕಿಯಿಲ್ಲದೆ ಶಾಖವನ್ನು ಅದು ಹೇಗೆ ಸೃಷ್ಟಿಸುತ್ತದೆ ಎಂದು ಪ್ರಶ್ನೆ ಕೇಳೊಲ್ಲ. ಅವಳಿಗೆ ಅಷ್ಟು ಜಾಣತನ ಇದೆ. ವಿಜ್ಞಾನದ ಕೆಲಸ ಮಾಡುವ ಎಷ್ಟೋ ವಿಷಯಗಳು ನಮ್ಮ ಕಣ್ಣಿಗೆ ಕಾಣುವುದಿಲ್ಲ ಅನ್ನೊದು ಅವಳಿಗೆ ಗೊತ್ತು. ವಿಕಾಸ ತನ್ನ ಮುಂದೆ ನಡೆಯಬೇಕು ಅಂತ ಅವಳು ಕೇಳುವುದಿಲ್ಲ.

ನಮ್ಮಲ್ಲಿ ಹೆಚ್ಚಿನವರಿಗೆ ಮುಸ್ಲಿಮರನ್ನು ದ್ವೇಷಿಸುವುದಕ್ಕೆ ಆಗಲಿ, ದಲಿತರನ್ನು ಕೀಳಾಗಿ ಕಾಣುವುದಕ್ಕೆ ಆಗಲಿ ಪ್ರತ್ಯಕ್ಷ ಅನುಭವ ಕಾರಣ ಅಲ್ಲ ಅನ್ನೋದು ಸತ್ಯ. ನಮ್ಮ ದಿನನಿತ್ಯದ ಅನುಭವ ಅಂದರೆ ಮುಸ್ಲಿಮರು ನಮ್ಮ ನೆರೆಹೊರೆಯ ಇತರರಿಗಿಂತ ಭಿನ್ನವೇನಲ್ಲ. ಆದರೆ ಸಮಸ್ಯೆ ಅಂದರೆ ಈಗ ನಮ್ಮ ಅಕ್ಕಪಕ್ಕದಲ್ಲಿ ಮುಸ್ಲಿಮರು ವಾಸಿಸುತ್ತಿಲ್ಲ. ಗಾಬರಿ ಮೂಡಿಸಿ ಅವರಷ್ಟಕ್ಕೆ ಅದೃಶ್ಯರಾಗುವಂತೆ ಮಾಡಿದ್ದೇವೆ. ಅವರು ನಮಗೆ ಕಾಣಿಸುವುದು ವೃತ್ತಪುತ್ರಿಕೆಯ ಪುಟಗಳಲ್ಲಿ ಅಥವಾ ಮಾಂಸದ ಅಂಗಡಿಗಳಲ್ಲಿ. ಅದು ನಮ್ಮ ಪೂರ್ವಾಗ್ರಹವನ್ನು ಮತ್ತಷ್ಟು ಬಲಗೊಳಿಸುತ್ತದೆ.

ಇನ್ನು ಕೆಳಜಾತಿಯ ಅಳಿಯನ ವಿಷಯಕ್ಕೆ ಬಂದರೆ, ಅವನ ಮೋಹಕ ಗುಣ, ಐಹಿಕ ಜಗತ್ತಿನ ಯಶಸ್ಸು ಅವರಿಗೂ ವಿರೋಧಿಸುವುದಕ್ಕೆ ಕಷ್ಟ ಆಗುತ್ತದೆ. ಅದಕ್ಕೆ ಅವನು ‘ಅಪಾಯಕಾರಿ’ಯಾಗಿ ಕಾಣುತ್ತಾನೆ. ಹಾಗಾಗಿಯೇ ಕಾಪ್ ಪಂಚಾಯತಿಗಳು ಸೇರಿ ಅವರನ್ನು ಹೆದರಿಸಿಬೆದರಿಸಬೇಕಾಗಿದೆ.

ಈ ಸಂಕುಚಿತ ಮನಸ್ಸು ಮತ್ತು ಪೂರ್ವಾಗ್ರಹದ ಕಥೆಗಳಲ್ಲಿ ಆರ್ಗಾನಿಕ್ ಆದದ್ದು ಅಥವಾ ಸತ್ಯ ಅನ್ನುವಂತಹದ್ದು ಏನೂ ಇಲ್ಲ. ಇಲ್ಲೊಂದಿಷ್ಟು ಕೊಂಕು, ಅಲ್ಲೊಂದಿಷ್ಟು ಅರ್ಧ ಸತ್ಯ ಸೇರಿಕೊಂಡು ಜಾಗರೂಕತೆಯಿಂದ ಇವೆಲ್ಲವನ್ನು ಕಟ್ಟಲಾಗಿದೆ. ಇಂದು ಪದ್ಮವಾತಿ, ನಾಳೆ ಅಯೋಧ್ಯ ಇವೆಲ್ಲಾ ನಿರಂತರವಾಗಿ ಯುದ್ಧವೊಂದು ನಡೆಯುತ್ತಿದೆ. ತಮಗೆ ಅದರಲ್ಲಿ ಅಪಜಯವಾಗಬಹುದು ಅನ್ನುವ ಭಾವನೆಯನ್ನು ಜನರಲ್ಲಿ ಮೂಡಿಸುವ ಮೂಲಕ ಉರಿಯ ಆರದ ಹಾಗೇ ನೋಡಿಕೊಳ್ಳುತ್ತಿವೆ. ಬೇರೆ ಏನೂ ವಿಷಯ ಇಲ್ಲದೇ ಹೋದಾಗ ವಿಕಾಸದ ವಿಷಯವನ್ನು ಯಾಕೆ ಪ್ರಯತ್ನಿಸಬಾರದು? ಯಾರಾದೂ ಈ ಯುದ್ಧಲ್ಲಿ ತೊಡಗಿಕೊಳ್ಳಬಹುದು. ಹೀಗೆ ನಾವೆಲ್ಲಾ ಕೋತಿಗಳಾಗುತ್ತಿರುವುದು. ನಿಜವಾಗಿ ಆತಂಕಕಾರಿ ವಿಷಯ ಅಂದರೆ ಈ ಕುರಿತು ಏನೂ ಮಾಡದೇ ಇರುವುದು. ನನ್ನದೇ ವಿಷಯಕ್ಕೆ ಬಂದರೆ ಕೈ ಹಿಸುಕಿಕೊಂಡು ಒಳ್ಳೆಯ ಶಿಕ್ಷಣ ಬೇಕು ಅಂತ ಮಾತನಾಡುತ್ತೇನೆ. ನಿಜ ಹೇಳಬೇಕೆಂದರೆ ಆಶೋಕ ವಿಶ್ವ ವಿದ್ಯಾನಿಲಯದಲ್ಲಿ ಮತ್ತು ಅಹಮದಾಬಾದ್ ವಿಶ್ವವಿದ್ಯಾನಿಲಯದಲ್ಲಿ ಒಳ್ಳೆ ಕೆಲಸಗಳು ಆಗುತ್ತಿವೆ. ಭಾರತಕ್ಕೆ ಒಂದು ಉದಾರವಾದಿ ಶಿಕ್ಷಣದ ಅದ್ಭುತವಾದ ಕೆಲಸ ಅಲ್ಲಿ ನಡೆಯುತ್ತಿದೆ. ಹಾಗೆಯೇ ಚೆನ್ನೈನಲ್ಲಿನ ಇನ್ಸ್ಟಿಟ್ಯೂಟ್ ಫಾರ್ ಫೈನಾನ್ಸಿಯಲ್ ಮ್ಯಾನೇಜ್‌ಮೆಂಟ್ ಅಂಡ್ ರೀಸರ್ಚ್ ಅಂತಹ ಸಂಸ್ಥೆಗಳಲ್ಲೂ ಒಳ್ಳೆ ಕೆಲಸ ಆಗುತ್ತಿದೆ. ಆದರೆ ತುಂಬಾ ಕಡಿಮೆ. ತುಂಬಾ ಸಮಯ ಉಳಿದಿಲ್ಲ. ನಮ್ಮ ದೇಶವನ್ನು ಉಳಿಸಲು, ಅಥವಾ ನಮ್ಮಲ್ಲಿ ಅನೇಕರು ಇದೆ ಅಂದುಕೊಂಡಿದ್ದ ದೇಶವನ್ನು ಉಳಿಸಲು ಒಂದು ಚಳುವಳಿಯನ್ನು ಮಾಡಬೇಕಾಗಿದೆ. ಮುಕ್ತತತೆಯ, ಕುತೂಹಲದ, ಸಂವಾದದದ, ಅಮೂರ್ತತೆಯ, ಔದಾರ್ಯತೆ, ಗಾಂಭಿರ್ಯದ ನಮ್ಮ ಸಂಪ್ರದಾಯಗಳನ್ನು ವಿಜ್ರಂಭಿಸಲು ಒಂದು ಚಳುವಳಿಯನ್ನು ಹುಟ್ಟುಹಾಕಬೇಕಾಗಿದೆ. ಧಾರ್ಮಿಕ ಜನರ, ನಿರೀಶ್ವರವಾದಿಗಳು, ಭಾವುಕತೆಯ ಹಾಗೆಯೇ ವಿಚಾರವಂತಿಕೆಯ ಮತ್ತು ಭಾರತದ್ದೇ ಆದ ಎರಡರ ವಿಶಿಷ್ಟ ಮಿಶ್ರಣದ ಚಳುವಳಿ. ಒಂದು ಹೊಸ ರಾಷ್ಟ್ರೀಯ ಚಳುವಳಿ.

# ಭಾರತದ ಆರ್ಥಿಕ ಬೇನೆಯ ಹಿಂದಿನ ಕಾರಣ

## ಮನಮೋಹನ್ ಸಿಂಗ್

**ಮಾಜಿ ಪ್ರಧಾನಿ, ಆರ್ಥಿತ ತಜ್ಞ, ಮನಮೋಹನ್ ಸಿಂಗ್ ಭಾರತದ ಆರ್ಥಿಕ ಸ್ಥಿತಿಯ ಬಗ್ಗೆ ಕಳವಳ ವ್ಯಕ್ತಪಡಿಸಿದ್ದಾರೆ. ಇಂದು ಕಾಡುತ್ತಿರುವ ಬಿಕ್ಕಟ್ಟಿನ ನಿಜವಾದ ಕಾರಣವನ್ನು ಗುರುತಿಸುವ ಪ್ರಯತ್ನ ಮಾಡದ್ದಾರೆ. ನಾವು ಸಕಾಲದಲ್ಲಿ ಎಚ್ಚೆತ್ತುಕೊಳ್ಳದೇ ಹೋದರೆ, ಈಗಿರುವ ಅವಕಾಶವನ್ನು  ಬಳಸಿಕೊಳ್ಳದೇ ಹೋದರೆ ಆರ್ಥಿಕ ಸ್ಥಗಿತತೆಯನ್ನು ಎದುರಿಸಬೇಕಾಗಬಹುದು ಎಂಬ ಎಚ್ಚರಿಕೆಯನ್ನು ನೀಡಿದ್ದಾರೆ. ಮತ್ತು ವಿತ್ತೀಯ ಕ್ರಮಗಳನ್ನು ತೆಗೆದುಕೊಳ್ಳಬೇಕಾದ ಅನಿವಾರ್ಯತೆಯನ್ನು ಸೂಚಿಸಿದ್ದಾರೆ. ಇನ್ನೂ ನಾವು ಮಾನಿಟರಿ ಪಾಲಿಸಿಗಳ ಬಗ್ಗೆ ಮಾತನಾಡುತ್ತಲೊ, ಅಥವಾ ಎಲ್ಲವೂ ಚೆನ್ನಾಗಿದೆ ಎಂದೂ ಹೇಳಿಕೊಂಡೇ ಕಾಲ ತಳ್ಳಿದರೆ ದುರಂತ ದೂರವಿಲ್ಲ.**

ಭಾರತದ ಆರ್ಥಿಕತೆಯ ಸ್ಥಿತಿ ತುಂಬಾ ಆತಂಕಕಾರಿಯಾಗಿದೆ. ನಾನು ಇದನ್ನು ಒಬ್ಬ ವಿರೋಧ ರಾಜಕೀಯ ಪಕ್ಷದ ಸದಸ್ಯನಾಗಿ ಹೇಳುತ್ತಿಲ್ಲ. ಈ ದೇಶದ ಪ್ರಜೆಯಾಗಿ, ಅರ್ಥಶಾಸ್ತ್ರದ ವಿದ್ಯಾರ್ಥಿಯಾಗಿ ಹೇಳುತ್ತಿದ್ದೇನೆ. ಈ ವೇಳೆಗೆ ಎಲ್ಲರಿಗೂ ವಾಸ್ತವ ಸ್ಥಿತಿ ಸ್ಪಷ್ಟವಾಗಿದೆ. ನಾಮಿನಲ್ ಜಿಡಿಪಿ ಬೆಳವಣಿಗೆಯ ದರ 15 ವರ್ಷಗಳಲ್ಲೇ ಕನಿಷ್ಠ ಮಟ್ಟಕ್ಕೆ ಕುಸಿದಿದೆ. ನಿರುದ್ಯೋಗ ದರ 45 ವರ್ಷಗಳಲ್ಲೇ ಗರಿಷ್ಠ ಮಟ್ಟ ತಲುಪಿದೆ. ಗ್ರಾಹಕರ ಬಳಕೆಯ ಪ್ರಮಾಣ ನಾಲ್ಕು ದಶಕಗಳಲ್ಲಿ ಎಂದೂ ಇಷ್ಟು ಕುಸಿದರಲಿಲ್ಲ. ಬ್ಯಾಂಕುಗಳಲ್ಲಿ ಮರುಪಾವತಿಯಾಗದ ಸಾಲದ ಸ್ಥಿತಿ ಎಂದೂ ಇಷ್ಟು ಹದಗೆಟ್ಟಿರಲಿಲ್ಲ. ವಿದ್ಯುತ್ ಉತ್ಪಾದನೆಯ ಪ್ರಮಾಣ ಕಳೆದ 15ವರ್ಷಗಳಲ್ಲೇ ಕನಿಷ್ಠ ಮಟ್ಟದಲ್ಲಿದೆ. ಈ ಗರಿಷ್ಠ ಕನಿಷ್ಠಗಳ ಪಟ್ಟಿ ಬೆಳೆಯುತ್ತಲೇ ಹೋಗುತ್ತದೆ. ಜೊತೆಗೆ ಅಷ್ಟೇ ಸಂಕಟವೂ ಆಗುತ್ತದೆ. ಇವೆಲ್ಲಾ ಕಳವಳಕಾರಿಯಾದ ಅಂಕಿಅಂಶಗಳು ಅನ್ನೋದು ನಿಜ. ಆದರೆ ದೇಶದ ಆರ್ಥಿಕ ಸ್ಥಿತಿಯ ಬಗ್ಗೆ ನಾವು ಅಷ್ಟೊಂದು ಆತಂಕಗೊಳ್ಳುವುದಕ್ಕೆ ಈ ಮಾಹಿತಿಗಳೇ ಕಾರಣವಲ್ಲ. ಇವೆಲ್ಲಾ ಇಂದು ನಮ್ಮ ದೇಶದ ಆರ್ಥಿಕತೆಯನ್ನು ಕಾಡುತ್ತಿರುವ ಗಂಭೀರವಾದ ರೋಗದ ಲಕ್ಷಣಗಳು ಅಷ್ಟೇ.

ಒಂದು ದೇಶದ ಸಮಾಜದ ಸ್ಥಿತಿ ಆ ದೇಶದ ಆರ್ಥಿಕ ಸ್ಥಿತಿಯನ್ನು ನಿರ್ಧರಿಸುತ್ತದೆ, ಅದನ್ನು ಪ್ರತಿಫಲಿಸುತ್ತದೆ. ಜನರ ಹಾಗೂ ಸಂಸ್ಥೆಗಳ ನಡುವಿನ ಸಾಮಾಜಿಕ ಸಂಬಂಧಗಳು, ಒಡನಾಟಗಳು ಒಟ್ಟಾರೆಯಾಗಿ ಒಂದು ದೇಶದ ಆರ್ಥಿಕತೆಯನ್ನು ನಿರ್ಧರಿಸುತ್ತವೆ. ಹೀಗೆ ಆರ್ಥಿಕತೆಯ ಪ್ರಗತಿಯನ್ನು ಬೆಳೆಸುವ, ಪೋಷಿಸುವ ಸಾಮಾಜಿಕ ಒಡನಾಟ, ಸಂಬಂಧಗಳು ನಿಂತಿರುವುದೇ ಪರಸ್ಪರ ನಂಬಿಕೆ ಹಾಗೂ ಆತ್ಮವಿಶ್ವಾಸದ ಮೇಲೆ. ಅವುಗಳೇ ಅದರ ಆಧಾರಸ್ತಂಭ. ಆದರೆ ಇಂದು ಅಂತಹ ವಿಶ್ವಾಸ ಹಾಗೂ ನಂಬಿಕೆಯನ್ನು ಆಧರಿಸಿದ ನಮ್ಮ ಸಾಮಾಜಿಕ ನೇಯ್ಗೆಯೇ ಹರಿದು ಛಿದ್ರಗೊಂಡಿದೆ.

ಕೈಗಾರಿಕೋದ್ಯಮಿಗಳು ಹೆದರಿಕೆಯಲ್ಲಿ ಬದುಕುತ್ತಿದ್ದಾರೆ

ಇಂದು ನಮ್ಮ ಸಮಾಜವನ್ನು ಆವರಿಸಿರುವ ಭಯದ ವಾತಾವರಣ ಸ್ಪಷ್ಟವಾಗಿ ಕಾಣುತ್ತಿದೆ. ಸರ್ಕಾರಿ ಅಧಿಕಾರಿಗಳ ಕಿರುಕುಳದ ಭೀತಿಯಲ್ಲಿ ನಾವು ಬದುಕುತ್ತಿದ್ದೇವೆ ಎಂದು ಹಲವು ಕೈಗಾರಿಕೋದ್ಯಮಿಗಳು ನನಗೆ ಹೇಳುತ್ತಿದ್ದಾರೆ. ಬ್ಯಾಂಕರುಗಳು ಹೊಸ ಸಾಲ ಕೊಡಲು ಹಿಂದೇಟು ಹಾಕುತ್ತಿದ್ದಾರೆ. ಪ್ರತೀಕಾರದ ಭಯ ಅವರನ್ನು ಕಾಡುತ್ತಿದೆ. ಉದ್ದಿಮೆದಾರರು ಹೊಸ ಪ್ರಾಜೆಕ್ಟುಗಳನ್ನು ಪ್ರಾರಂಭಿಸಲು ಹಿಂಜರಿಯುತ್ತಿದ್ದಾರೆ. ಯಾವುದೋ ದುರುದ್ದೇಶಕ್ಕೆ ಬಲಿಯಾಗಿ ತಮ್ಮ ಪ್ರಾಜೆಕ್ಟುಗಳು ವಿಫಲವಾಗಬಹುದು ಎಂಬ ಆತಂಕ ಅವರನ್ನು ಬಾಧಿಸುತ್ತಿದೆ. ತಾಂತ್ರಿಕ ಸ್ಟಾರ್ಟ್ ಅಪ್‌ಗಳು ಆರ್ಥಿಕ ಬೆಳವಣಿಗೆಗೆ ಹಾಗೂ ಉದ್ಯೋಗದ ಸೃಷ್ಟಿಗೆ ಪ್ರಧಾನವಾದ ನೆಲೆ. ಇಂದು ಅದೇ ನಿರಂತರ ಬೇಹುಗಾರಿಕೆಯ ಹಾಗೂ ತೀವ್ರ ಅನುಮಾನದ ನೆರಳಿನಲ್ಲಿ ಬದುಕುತ್ತಿರುವಂತೆ ಭಾಸವಾಗುತ್ತಿದೆ. ಸರ್ಕಾರ ಮತ್ತು ಇತರ ಸಂಸ್ಥೆಗಳಲ್ಲಿ ನಿಯಮಗಳನ್ನು ರೂಪಿಸಬೇಕಾದವರೇ ನಿಜ ಹೇಳುವುದಕ್ಕೆ ಹೆದರುತ್ತಿದ್ದಾರೆ. ನೀತಿಗಳನ್ನು ರೂಪಿಸುವ ಸಂದರ್ಭದಲ್ಲಿ ಪ್ರಾಮಾಣಿಕವಾಗಿ ಚರ್ಚೆಯಲ್ಲಿ ಪಾಲ್ಗೊಳ್ಳಲು ಹೆದರುತ್ತಿದ್ದಾರೆ. ಆರ್ಥಿಕ ಪ್ರಗತಿಯ ಏಜೆನ್ಸಿಗಳಾಗಿ ಕಾರ್ಯನಿರ್ವಹಿಸುತ್ತಿರುವ ಜನರಲ್ಲೇ ತೀವ್ರವಾದ ಹೆದರಿಕೆ ಹಾಗು ಅಪನಂಬಿಕೆ ನೆಲೆನಿಂತಿದೆ. ಒಂದು ಸಮಾಜದಲ್ಲಿ ವಿಶ್ವಾಸ, ನಂಬಿಕೆಗಳೇ ಇಲ್ಲದೇ ಹೋದರೆ, ಅಲ್ಲಿಯ ಆರ್ಥಿಕ ಸಂಬಂಧದ ಮೇಲೆ ದುಷ್ಪರಿಣಾಮವಾಗುತ್ತದೆ. ಆರ್ಥಿಕತೆಗೆ ಹಾನಿಯಾಗುತ್ತದೆ. ಜನ ಹಾಗು ಸಂಸ್ಥೆಗಳ ನಡುವಿನ ಸಂಬಂಧ, ಒಡನಾಟ ಹಾಳಾದರೆ ಅರ್ಥಿಕ ಚಟುವಟಿಕೆಯೂ ನಿಧಾನಗೊಳ್ಳುತ್ತದೆ. ಕೊನೆಗೆ ಆರ್ಥಿಕತೆ ಸ್ಥಗಿತಗೊಳ್ಳುತ್ತದೆ. ಜನರನ್ನು ಆವರಿಸಿಕೊಂಡಿರುವ ಭಯ, ಅಪನಂಬಿಕೆ ಮತ್ತು ವಿಶ್ವಾಸದ ಕೊರತೆಯ ಈ ದುಸ್ಥಿತಿಯೇ ಈವತ್ತು ನಾವು ನೋಡುತ್ತಿರುವ ಆರ್ಥಿಕ ಮಂದಗತಿಗೆ ಪ್ರಮುಖವಾದ ಮೂಲಭೂತ ಕಾರಣ.

ಇವುಗಳ ಜೊತೆಗೆ ಅಸಹಾಯಕತೆಯ ಸ್ಥಿತಿಯು ಸೇರಿಕೊಂಡಿದೆ. ತಮ್ಮ ಕುಂದುಕೊರತೆಗಳನ್ನು ಹೇಳಿಕೊಳ್ಳಲು ನೊಂದವರಿಗೆ ಅವಕಾಶವೇ ಇಲ್ಲ. ಸ್ವತಂತ್ರ ಸಂಘಟನೆಗಳಾದ ಮಾಧ್ಯಮಗಳು, ನ್ಯಾಯಾಂಗ, ನಿಯಂತ್ರಕ ಅಧಿಕಾರಿಗಳು ಮತ್ತು ತನಿಖಾ ಸಂಸ್ಥೆಗಳು ಸಾರ್ವಜನಿಕರ ವಿಶ್ವಾಸ ಕಳೆದುಕೊಳ್ಳುತ್ತಿವೆ. ಹಾಗಾಗಿ ತಮಗೆ ತೆರಿಗೆಗೆ ಸಂಬಂಧಿಸಿದಂತೆ ಅನಾವಶ್ಯಕವಾಗಿ ಕಿರುಕುಳವಾದಾಗ, ಅಥವಾ ಕಾನೂನು ಬಾಹಿರ ನೀತಿಗಳ ವಿರುದ್ಧ ರಕ್ಷಣೆಯೇ ಇಲ್ಲದಾಗಿದೆ. ಅಂತಹ ಸಂದರ್ಭದಲ್ಲಿ ತಮ್ಮ ಬೆಂಬಲಕ್ಕೆ ನಿಲ್ಲಬಹುದಾದ ಒಂದು ವ್ಯವಸ್ಥೆಯೇ ಉದ್ದಿಮೆದಾರರಿಗೆ ಕಾಣುತ್ತಿಲ್ಲ. ಇದರಿಂದ ಉದ್ದಿಮೆದಾರರಿಗೆ ಹೊಸ ಉದ್ದಿಮೆಯನ್ನು ಪ್ರಾರಂಭಿಸುವುದಕ್ಕಾಗಲಿ, ಉದ್ಯೋಗಗಳನ್ನು ಸೃಷ್ಟಿಸುವುದಕ್ಕೆ ರಿಸ್ಕ್ ತೆಗೆದುಕೊಳ್ಳುವ ಉತ್ಸಾಹವಾಲೀ ಇನ್ನಷ್ಟು ಕಮರಿ ಹೋಗುತ್ತದೆ. ನಮ್ಮ ಸಮಾಜವನ್ನು ಇಂದು ತೀವ್ರವಾಗಿ ವ್ಯಾಪಿಸಿಕೊಂಡಿರುವ ಗಾಢವಾದ ಅವಿಶ್ವಾಸ, ಭಯ, ನಿರಾಸೆಯ ಭಾವನೆ ಇವೆಲ್ಲಾ ಒಟ್ಟಾಗಿ ಸೇರಿಕೊಂಡು ಒಂದು ವಿಷಪೂರಿತ ಸ್ಥಿತಿಯನ್ನು ನಿರ್ಮಿಸಿವೆ. ಅದರಿಂದಾಗಿ ಇಂದು ಆರ್ಥಿಕ ಚಟುವಟಿಕೆಗಳು ಕುಂಠಿತಗೊಂಡಿವೆ. ಅದರ ಪರಿಣಾಮವಾಗಿ ಆರ್ಥಿಕ ಬೆಳವಣಿಗೆ ಕುಂಠಿತಗೊಂಡಿದೆ.

ನಮ್ಮ ಸಾಮಾಜಿಕ ರಚನೆಯು ಈ ಪ್ರಮಾಣದಲ್ಲಿ ಛಿಧ್ರವಾಗುವುದಕ್ಕೆ ಮೋದಿ ಸರ್ಕಾರದ 'ವ್ಯತಿರಿಕ್ತವಾಗಿ ಸಾಬೀತಾಗುವರೆಗೆ ಇದು ದುರುದ್ದೇಶದಿಂದ ಕೂಡಿದೆ' ಎನ್ನುವ ಆಡಳಿತ ನೀತಿ ಕೂಡ ಮೂಲಭೂತವಾಗಿ ಕಾರಣವಾಗಿದೆ. ಆರ್ಥಿಕ ಚಟುವಟಿಕೆಯಲ್ಲಿ ಪಾಲ್ಗೊಳ್ಳುವವರೆಲ್ಲಾ ಯಾವುದೋ ದುರುದ್ದೇಶದಿಂದಲೇ ಅದರಲ್ಲಿ ತೊಡಗಿಕೊಂಡಿರುತ್ತಾರೆ ಎಂದು ಭಾವಿಸಿಕೊಂಡೇ ಸರ್ಕಾರದ ನೀತಿ ರೂಪುಗೊಳ್ಳುತ್ತದೆ. ಇದಕ್ಕೆ ವ್ಯತಿರಿಕ್ತವಾದದ್ದು ಸಾಬೀತಾಗುವವರೆಗೆ ಇದೇ ಸತ್ಯ ಅಂತಲೇ ಅದು ಭಾವಿಸುತ್ತದೆ. ಪ್ರತಿಯೊಬ್ಬ ಕೈಗಾರಿಕೋದ್ಯಮಿ, ಬ್ಯಾಂಕರ್, ನಿಯಮವನ್ನು ರೂಪಿಸುವವನು, ನಿಯಂತ್ರಕ, ಉದ್ದಿಮೆದಾರ ಹಾಗೂ ಪ್ರಜೆಗೂ ಸರ್ಕಾರವನ್ನು ಮೋಸಗೊಳಿಸುವುದೇ ಉದ್ದೇಶವಾಗಿರುತ್ತದೆ ಅನ್ನುವ ಅನುಮಾನ ಸರ್ಕಾರದ್ದು. ಈ ಅನುಮಾನದಿಂದಾಗಿಯೇ ನಮ್ಮ ಸಮಾಜದಲ್ಲಿ ಇದ್ದಂತಹ ವಿಶ್ವಾಸ ಸಂಪೂರ್ಣವಾಗಿ ನಾಶವಾಗಿರುವುದು. ಇದು ನಮ್ಮ ದೇಶದ ಆರ್ಥಿಕ ಬೆಳವಣಿಗೆಯನ್ನು ಸ್ಥಗಿತಗೊಳಿಸಿದೆ. ಬ್ಯಾಂಕರುಗಳಿಗೆ ಸಾಲಕೊಡಲು ಸಾಧ್ಯವಾಗುತ್ತಿಲ್ಲ. ಉದ್ದಿಮೆದಾರರಿಗೆ ಬಂಡವಾಳ ಹೂಡಲು ಆಗುತ್ತಿಲ್ಲ ಮತ್ತು ನಿಯಮಗಳನ್ನು ರೂಪಿಸುವವರಿಗೆ ತಮ್ಮ ಕೆಲಸ ಮಾಡಲು ಆಗುತ್ತಿಲ್ಲ.

ಮೋದಿ ಸರ್ಕಾರ ಪ್ರತಿಯೊಂದನ್ನೂ, ಪ್ರತಿಯೊಬ್ಬರನ್ನೂ ಅನುಮಾನ ಹಾಗೂ ಅವಿಶ್ವಾಸದ ಕನ್ನಡಿಯಲ್ಲೇ ನೋಡುತ್ತಿರುವಂತೆ ಕಾಣುತ್ತಿದೆ. ಅದರಿಂದಾಗಿಯೇ ಹಿಂದಿನ ಸರ್ಕಾರದ ಪ್ರತಿಯೊಂದು ನೀತಿಯೂ ದುರುದ್ದೇಶದಿಂದಲೇ

ಕೂಡಿರುವಂತೆ ಅದಕ್ಕೆ ತೋರುತ್ತಿದೆ. ಅದು ನೀಡಿದ ಯಾವುದೇ ಸಾಲವೂ ಈ ಸರ್ಕಾರಕ್ಕೆ ಯೋಗ್ಯವಾಗಿ ಕಾಣುತ್ತಿಲ್ಲ. ಪ್ರತಿಯೊಂದು ಹೊಸ ಕೈಗಾರಿಕಾ ಯೋಜನೆಯ ಹಿಂದೆಯೂ ಸ್ವಹಿತಾಸಕ್ತಿಯೇ ಕಾಣುತ್ತಿದೆ. ಸರ್ಕಾರ ತನ್ನನ್ನು ಒಬ್ಬ ರಕ್ಷಕನ ಸ್ಥಾನದಲ್ಲಿಟ್ಟುಕೊಂಡು ನಗದು ಅಮಾನ್ಯೀಕರಣದಂತಹ ಸ್ವಲ್ಪವೂ ಯೋಚಿಸದ ಮತ್ತು ಆಘಾತಕಾರಿಯಾದ, ಅವಿವೇಕದ ನೈತಿಕ ಕಾವಲುಗಾರಿಕೆಯ ನೀತಿಗಳನ್ನು ಜಾರಿಗೊಳಿಸುತ್ತಾ ಹೋಗುತ್ತಿದೆ. ಪ್ರತಿಯೊಬ್ಬರನ್ನು ದುಷ್ಟರಾಗಿ ಚಿತ್ರಿಸುವ ಮತ್ತು ಪ್ರತಿಯೊಂದನ್ನು ಕೆಟ್ಟದು ವರ್ಸಸ್ ಒಳ್ಳೆಯದು ಎಂದು ವಿಂಗಡಿಸಿ ನೋಡುವ ಕ್ರಮ ಒಳ್ಳೆಯ ಆಳ್ವಿಕೆಯ ನೀತಿಯಾಗಲಾರದು. ಅದು ಆರೋಗ್ಯಕರ ಆರ್ಥಿಕ ಬೆಳವಣಿಗೆಗೆ ಒಳ್ಳೆಯ ಮಾರ್ಗವಲ್ಲ.

ಆರ್ಥಿಕ ಬೆಳವಣಿಗೆಯಲ್ಲಿ ಸಾಮಾಜಿಕ ವಿಶ್ವಾಸದ ಪಾತ್ರವನ್ನು ಆಡಂ ಸ್ಮಿತ್‌ನಿಂದ ಹಿಡಿದು ಇತ್ತೀಚಿನ ಆಧುನಿಕ ಕಾಲದ ವರ್ತನ ಅರ್ಥಶಾಸ್ತ್ರಜ್ಞರವರೆಗೆ ಎಲ್ಲರೂ ಸೊಗಸಾಗಿ ದಾಖಲಿಸಿದ್ದಾರೆ. ಸಾಮಾಜಿಕ ವ್ಯವಸ್ಥೆಯ ವಿಶ್ವಾಸದ ಚಾದರನ್ನು ಹರಿದು ಚಿಂದಿ ಮಾಡಿದ್ದೇ ಇಂದಿನ ಆರ್ಥಿಕ ದುಸ್ಥಿತಿಗೆ ಮುಖ್ಯ ಕಾರಣ. ಇಂದು ನಮ್ಮ ಆರ್ಥಿಕ ಬೆಳವಣಿಗೆ ಮತ್ತೆ ಚೇತರಿಸಿಕೊಳ್ಳಬೇಕಾದರೆ ಭೀತಿ ಮತ್ತು ಅಪನಂಬಿಕೆಯಿಂದಾಗಿ ಚಿಂದಿಯಾಗಿರುವ ಚಾದರವನ್ನು ಮತ್ತೆ ಸೇರಿಸಿ, ಹೊಲಿದು, ನೇಯ್ದು, ನಂಬಿಕೆ ಹಾಗೂ ವಿಶ್ವಾಸವನ್ನು ಮೂಡಿಸಬೇಕಾಗಿದೆ. ವ್ಯಾಪಾರಸ್ಥರಲ್ಲಿ, ಬಂಡವಾಳ ಒದಗಿಸುವವರಲ್ಲಿ ಮತ್ತು ಕಾರ್ಮಿಕರಲ್ಲಿ ಮತ್ತೆ ವಿಶ್ವಾಸ ಮೂಡಬೇಕು. ಅವರಲ್ಲಿ ಹೆದರಿಕೆ, ಆತಂಕ ಹೋಗಿ, ಮತ್ತೆ ಉತ್ಸಾಹ, ಉಲ್ಲಾಸ ಮೂಡಬೇಕು. ಇದು ಸಾಧ್ಯವಾಗಬೇಕಾದರೆ "ಅದು ಸುಳ್ಳು ಎಂದು ಸಾಬೀತಾಗುವವರೆಗೆ ಪ್ರತಿಯೊಬ್ಬರೂ ದುರುದ್ದೇಶಿಗಳೇ ಆಗಿರುತ್ತಾರೆ' ಎನ್ನುವ ಭಾವನೆ ಹೋಗಬೇಕು. ಭಾರತೀಯ ಉದ್ದಿಮೆದಾರರನ್ನು ನಂಬಬೇಕು.


ಇಂದು ಭಾರತದ ಆರ್ಥಿಕತೆ ಆತಂಕಕಾರಿ ಸ್ಥಿತಿಯಲ್ಲಿ ಬಳಲುತ್ತಿದೆ. ವರಮಾನ ಬೆಳೆಯುತ್ತಿಲ್ಲ. ಕುಟುಂಬದಲ್ಲಿನ ಬಳಕೆ ನಿಧಾನವಾಗುತ್ತಿದೆ. ತಮ್ಮ ಹಿಂದಿನ ಮಟ್ಟದ ಬಳಕೆಯನ್ನು ಕಾಪಾಡಿಕೊಳ್ಳಲು ಉಳಿತಾಯಕ್ಕೆ ಕೈಹಾಕುತ್ತಿದ್ದಾರೆ. ಜಿಡಿಪಿ ಬೆಳವಣಿಗೆಯ ಫಲವೆಲ್ಲಾ ಮೇಲ ಸ್ತರದ ಕೆಲವೇ ಅನುಕೂಲಸ್ಥರಿಗೆ ಹೋಗುತ್ತಿದೆ.

### ಸ್ಥಗಿತತೆಯ ಅಪಾಯ

ನಿಜವಾಗಿ ಆತಂಕಕಾರಿಯಾದ ಬೆಳವಣಿಗೆ ಅಂದರೆ ಇತ್ತೀಚಿನ ಚಿಲ್ಲರೆ (ರಿಟೇಲ್) ಸರಕಿನ ಹಣದುಬ್ಬರದ ಸೂಚಿ ತೀವ್ರವಾಗಿ ಏರಿದೆ. ಅದರಲ್ಲೂ ಆಹಾರಕ್ಕೆ ಸಂಬಂಧಿಸಿದ ಹಣದುಬ್ಬರದ ಸೂಚಿ ಏರುತ್ತಿರುವುದು ನಿಜಕ್ಕೂ ಆತಂಕಕಾರಿಯಾದ ಬೆಳವಣಿಗೆ. ರಿಟೇಲ್ ಹಣದುಬ್ಬರ ಬರುವ ತಿಂಗಳುಗಳಲ್ಲಿ ಇನ್ನಷ್ಟು ಏರುವ ಸಾಧ್ಯತೆಗಳಿವೆ. ನಿರಂತರವಾಗಿ ಏರುತ್ತಿರುವ ಹಣದುಬ್ಬರದ ದರ, ಬೇಡಿಕೆಯ ಸ್ಥಗಿತತೆ ಮತ್ತು ಗರಿಷ್ಠ ಮಟ್ಟದ ನಿರುದ್ಯೋಗ ಎಲ್ಲಾ ಒಟ್ಟಾರೆಯಾಗಿ ಅರ್ಥಶಾಸ್ತ್ರಜ್ಞರು ಸ್ಥಗಿತತೆ ಎಂದು ಕರೆಯುವ ಅಪಾಯಕಾರಿ ಸ್ಥಿತಿಗೆ ನಮ್ಮನ್ನು ತಳ್ಳಿಬಿಡುತ್ತದೆ. ಒಮ್ಮೆ ಆ ಸ್ಥಿತಿ ತಲುಪಿದರೆ ನಮ್ಮಂತಹ ದೊಡ್ಡ ಆರ್ಥಿಕತೆಗೆ ಚೇತರಿಸಿಕೊಳ್ಳುವುದು ತುಂಬಾ ಕಷ್ಟ. ನಾವು ಸಧ್ಯಕ್ಕೆ ಸ್ಥಗಿತತೆಯ ಅಂದರೆ ಸ್ಟಾಗ್‌ಪ್ಲೇಷನ್ ಸ್ಥಿತಿಯನ್ನು ಇನ್ನೂ ತಲುಪಿಲ್ಲ. ತಕ್ಷಣ ಕ್ರಮ ತೆಗೆದುಕೊಂಡು ಬಳಕೆಯ ವಸ್ತುಗಳ ಬೇಡಿಕೆಯನ್ನು ಸುಧಾರಿಸಬೇಕು. ಅದಕ್ಕಾಗಿ ವಿತ್ತೀಯ ಕ್ರಮಗಳನ್ನು ತೆಗೆದುಕೊಳ್ಳಬೇಕು. ಹಣಕಾಸು ಆಧಾರಿತ ನಿಯಮಗಳು ಪರಿಣಾಮಕಾರಿಯಾಗುವಂತೆ ಕಾಣುತ್ತಿಲ್ಲ.

ಭಾರತ ಈಗಿರುವ ಸೂಕ್ಷ್ಮವಾದ ಆರ್ಥಿಕ ಪರಿಸ್ಥಿತಿಯಲ್ಲಿ ಎರಡು ನೀತಿಗಳನ್ನು ಕಾರ್ಯರೂಪಕ್ಕೆ ತರಬೇಕು ಎಂದು ನನಗನ್ನಿಸುತ್ತದೆ. ವಿತ್ತೀಯ ನೀತಿಗಳನ್ನು ಅನುಸರಿಸಿ ಬೇಡಿಕೆಯನ್ನು ಹೆಚ್ಚಿಸಬೇಕು ಮತ್ತು ಎರಡನೆಯದಾಗಿ 'ಸಾಮಾಜಿಕ ನೀತಿಯ' ಮೂಲಕ ಖಾಸಗೀ ಹೂಡಿಕೆಯನ್ನು ಪ್ರೋತ್ಸಾಹಿಸಬೇಕು. ಹೂಡಿಕೆದಾರರಲ್ಲಿ ನಂಬಿಕೆ ಮತ್ತು ವಿಶ್ವಾಸ ಮೂಡಿ ಅವರು ಸಮಾಜದ ಆರ್ಥಿಕತೆಯಲ್ಲಿ ಪಾಲ್ಗೊಳ್ಳುವಂತಾದರೆ ಇದು ಸಾಧ್ಯವಾಗುತ್ತದೆ.

ಇಂದು ಭಾರತ ಮೂರು ಟ್ರಿಲಿಯನ್ ಜಾಗತಿಕ ಆರ್ಥಿಕ ಶಕ್ತಿಕೇಂದ್ರವಾಗಿದೆ. ಪ್ರಮುಖವಾಗಿ ಖಾಸಗಿ ವಾಣಿಜ್ಯಸಂಸ್ಥೆಗಳು ಈ ಆರ್ಥಿಕತೆಯ ಚಾಲಕ ಶಕ್ತಿಯಾಗಿದ್ದಾರೆ. ಮನಸ್ಸಿಗೆ ಬಂದಂತೆ ನಿಯಂತ್ರಿಸಬಹುದಾದ ಹಾಗೂ ನಿರ್ದೇಶಿಸಬಹುದಾದ ಪುಟ್ಟ ಆರ್ಥಿಕತೆ ಇದಲ್ಲ. ಅಥವಾ ಪತ್ರಿಕೆಗಳಲ್ಲಿ ವರ್ಣರಂಜಿತ ಪ್ರಮುಖ ಸುದ್ದಿಮಾಡಿ ಮತ್ತು ಮಾಧ್ಯಮಗಳಲ್ಲಿ ಗದ್ದಲಮಾಡುವ ಟೀಕೆಗಳಿಂದ ನಿರ್ವಹಿಸಿಬಿಡಬಹುದಾದ ಆರ್ಥಿಕತೆಯೂ ಅಲ್ಲ. ನಮಗೆ ರುಚಿಸದ ಅಥವಾ ಕಹಿ ಸುದ್ದಿಯನ್ನು ಹೇಳುವ ಮಂದಿಯನ್ನು ಗುಂಡಿಕ್ಕುವುದೇ ಆಗಲಿ, ಆರ್ಥಿಕ ವರದಿಗಳನ್ನು ಮತ್ತು ದತ್ತಾಂಶಗಳನ್ನು ತಡೆಹಿಡಿಯುವುದೇ ಆಗಲಿ ತೀರಾ ಬಾಲಿಶವಾದ ಕ್ರಮಗಳು. ಅವು ಬೆಳೆಯುತ್ತಿರುವ ಒಂದು ಜಾಗತಿಕ ಆರ್ಥಿಕ ಶಕ್ತಿಗೆ ಉಚಿತವಾದ ಕ್ರಮವೂ ಅಲ್ಲ. ಯಾವುದೇ ಕುತಂತ್ರ ಅಥ'ವಾ ಕುಟಿಲೋಪಾಯದಿಂದಲೂ 1.2 ಬಿಲಿಯನ್ ಜನರು ಇರುವ ಮೂರು ಟ್ರಿಲಿಯನ್ ಮಾರುಕಟ್ಟೆ ಆರ್ಥಿಕತೆಯ ಸ್ಥಿತಿಯನ್ನು ಮರೆಮಾಚುವುದಕ್ಕೆ ಸಾಧ್ಯವಿಲ್ಲ. ಅವನ್ನು ಕುರಿತ ವಿಶ್ಲೇಷಣೆಯನ್ನು ತಪ್ಪಿಸುವುದಕ್ಕೆ ಸಾಧ್ಯವಿಲ್ಲ. ಆರ್ಥಿಕ ವ್ಯವಸ್ಥೆಯಲ್ಲಿನ ಪಾಲುದಾರರಿಗೆ ಬೇಕಿರುವುದು ಸಾಮಾಜಿಕ ಮತ್ತು ಆರ್ಥಿಕ ಪ್ರೇರಣೆ. ಅವರು ಸ್ಪಂದಿಸುವುದು ಅದಕ್ಕೇ ಹೊರತು ಆಜ್ಞೆಗಳಿಗೆ, ಬಲಾತ್ಕಾರಕ್ಕೆ ಅಥವಾ ಸಾರ್ವಜನಿಕ ಸಂಬಂಧಗಳಿಗಲ್ಲ.




ಜಾಗತಿಕ ಆರ್ಥಿಕತೆಯನ್ನು ತನ್ನ ಅನುಕೂಲಕ್ಕೆ ಬಳಸಿಕೊಂಡು ಲಾಭಮಾಡಿಕೊಳ್ಳಬಹುದಾದ ವಿಶಿಷ್ಟವಾದ ಮತ್ತು ಸೊಗಸಾದ ಅವಕಾಶ ಭಾರತಕ್ಕಿದೆ. ಇಂತಹ ಅದ್ಭುತ ಗಳಿಗೆಯಲ್ಲಿ ತನ್ನ ಆರ್ಥಿಕತೆಯನ್ನು ಹೀಗೆ ಸ್ವತಃ ಘಾಸಿಗೊಳಿಸಿಕೊಳ್ಳುತ್ತಿರುವುದು ದುಃಖಕರ. ಚೀನಾದ ಆರ್ಥಿಕತೆ ಮಂದಗತಿಯಲ್ಲಿದೆ ಮತ್ತು ಅದರ ರಫ್ತು ಇಳಿಮುಖವಾಗುತ್ತಿದೆ. ಭಾರತಕ್ಕೆ ದೊಡ್ಡ ಪ್ರಮಾಣದಲ್ಲಿ ರಫ್ತಿನಲ್ಲಿ ತೊಡಗಿಕೊಳ್ಳುವುದಕ್ಕೆ ಸೊಗಸಾದ ಅವಕಾಶ ಸಿಕ್ಕಿದೆ. ಮತ್ತೆ ಸಮಾಜದಲ್ಲಿ ವಿಶ್ವಾಸ ಮತ್ತು ಆರ್ಥಿಕ ಪ್ರಗತಿಯನ್ನು ಸೃಷ್ಟಿಸಿ, ಈಗಿರುವ ಅಪನಂಬಿಕೆ, ಭಯ ಮತ್ತು ನೈರಾಶ್ಯವನ್ನು ತೊಡೆದು ಹಾಕಬೇಕು. ಆ ಮೂಲಕ ಜಾಗತಿಕ ರಫ್ತಿನಲ್ಲಿ ಸಿಂಹಪಾಲನ್ನು ತನ್ನದಾಗಿಸಿಕೊಳ್ಳಲು ಪ್ರಯತ್ನಿಸಬೇಕು. ಈಗ ಲೋಕಸಭೆಯಲ್ಲಿ ಸರ್ಕಾರಕ್ಕೆ ಸ್ಪಷ್ಟ ಬಹುಮತ ಇದೆ ಮತ್ತು ಜಾಗತಿಕ ತೈಲಬೆಲೆಗಳು ಕಡಿಮೆ ಇದೆ. ಇಂತಹ ಸುವರ್ಣ ಅವಕಾಶಗಳು ದೊರಕುವುದು ತಲೆಮಾರಿಗೊಮ್ಮೆ ಮಾತ್ರ. ಈ ಸುವರ್ಣಾವಕಾಶವನ್ನು ಬಳಸಿಕೊಳ್ಳಬೇಕು. ಭಾರತವನ್ನು ಆರ್ಥಿಕ ಬೆಳವಣಿಗೆಯ ಮುಂದಿನ ಹಂತಕ್ಕೆ ತ್ವರಿತವಾಗಿ ಕೊಂಡೊಯ್ಯುವುದಕ್ಕೆ ಬಳಸಿಕೊಳ್ಳಬೇಕು. ನಮ್ಮ ಕೋಟ್ಯಂತರ ಯುವಕ ಯುವತಿಯರಿಗೆ ಹೊಸ ನೌಕರಿಗಳು ಸೃಷ್ಟಿಯಾಗಬೇಕು. ಉದ್ಯಮಪತಿಗಳು ಮತ್ತು ಕೈಗಾರಿಕೋದ್ಯಮಿಗಳ ಬಗ್ಗೆ ಇರುವ ಆಳವಾದ ಅಪನಂಬಿಕೆಯನ್ನು ಬಿಟ್ಟು ಪ್ರಧಾನಮಂತ್ರಿ ಮೋದಿಯವರು ಸ್ವಾಭಾವಿಕ ಹುರುಪು, ಹುಮ್ಮಸ್ಸುಗಳನ್ನು ಪುನರುಜ್ಜೀವಗೊಳಿಸುವ ಮತ್ತು ನಮ್ಮ ಆರ್ಥಿಕತೆ ಚೇತರಿಸಿಕೊಂಡು ಮೇಲೇರುವುದಕ್ಕೆ ಸಹಕಾರಿಯಾಗುವಂತಹ ಪರಸ್ಪರ ನಂಬಿಕೆ ವಿಶ್ವಾಸಗಳುಳ್ಳ ಸಾಮಾಜಿಕ ವ್ಯವಸ್ಥೆಯನ್ನು ಬೆಳೆಸಬೇಕೆಂದು ನಾನು ಮನವಿಮಾಡಿಕೊಳ್ಳುತ್ತೇನೆ.

The fountainhead of India's economic malaise. Manmohan Singh

# ಭಾರತದಲ್ಲಿ ನಿರುದ್ಯೋಗ ಸಮಸ್ಯೆ– ಒಂದು ಅವಲೋಕನ

## ಟಿ ಎಸ್ ವೇಣುಗೋಪಾಲ್

ಒಂದು ದೇಶದ ನಿರುದ್ಯೋಗದ ಸ್ಥಿತಿ ಆ ದೇಶದ ಆರ್ಥಿಕತೆಯ ನೈಜ ಸ್ಥಿತಿಗೆ ಕನ್ನಡಿ ಇದ್ದ ಹಾಗೆ. ಯಾವುದೇ ದೇಶದಲ್ಲಿ ನಿರುದ್ಯೋಗ, ಅಸಮಾನತೆ, ಬಡತನ, ಹಸಿವು ವ್ಯಾಪಕವಾಗಿದ್ದರೆ ಅಲ್ಲೇನೋ ಮೂಲಭೂತ ಸಮಸ್ಯೆ ಇದೆ ಅಂತಲೇ ಅರ್ಥ. ಅವೆಲ್ಲಾ ಹೆಚ್ಚುತ್ತಾ ಹೋಗುತ್ತಿದ್ದರಂತೂ ಆ ದೇಶ ಗಂಡಾಂತರದಲ್ಲಿ ಎನ್ನುವುದು ಸ್ಪಷ್ಟ. ಇದನ್ನು ಮನಗಂಡೇ ಪ್ರತಿಯೊಬ್ಬ ಆರ್ಥಿಕತಜ್ಞ, ಚಿಂತಕ, ನಾಯಕನಿಗೂ ಅದು ಪ್ರಮುಖ ಕಾಳಜಿಯಾಗಿರುತ್ತದೆ. ಪ್ರತಿಯೊಂದು ದೇಶವೂ ತನ್ನ ದೇಶದಲ್ಲಿ ಸ್ಥಿತಿ ಹೇಗಿದೆ ಎಂದು ತಿಳಿದುಕೊಳ್ಳಲು ಉತ್ಸುಕವಾಗಿರುತ್ತದೆ. ನಿರಂತರವಾಗಿ ಸಮೀಕ್ಷೆಗಳನ್ನು, ಅಧ್ಯಯನಗಳನ್ನು ನಡೆಸುತ್ತಿರುತ್ತವೆ. ಅದಕ್ಕೆ ತಕ್ಕಂತೆ ನೀತಿ ನಿಯಮಗಳನ್ನು ರೂಪಿಸುತ್ತಿರುತ್ತವೆ ಅಥವಾ ರೂಪಿಸಬೇಕು.

ಭಾರತದಲ್ಲಿ ಕೂಡ ನಿರುದ್ಯೋಗ ಹಾಗೂ ಉದ್ಯೋಗದ ಸ್ಥಿತಿಗತಿಯನ್ನು ಅಂದಾಜು ಮಾಡಲು ರಾಷ್ಟ್ರೀಯ ಸ್ಯಾಂಪಲ್ ಸಮೀಕ್ಷೆ ಕಛೇರಿಯು (ಎನ್‌ಎಸ್‌ಎಸ್‌ಒ) ಸಮೀಕ್ಷೆ ನಡೆಸುತ್ತದೆ. ಹೀಗೆ ನಡೆಸುವ ಸಮೀಕ್ಷೆಗಳಿಗೆ ಒಂದು ಬಲವಾದ ಪರಿಕಲ್ಪನಾತ್ಮಕ ಚೌಕಟ್ಟು ಇರಬೇಕು. ಅಂತಹ ಒಂದು ಚೌಕಟ್ಟನ್ನು ರೂಪಿಸುವ ಸಲುವಾಗಿ 1970ರಲ್ಲಿ ಯೋಜನಾ ಆಯೋಗವು "ನಿರುದ್ಯೋಗದ ಅಂದಾಜಿಗಾಗಿ ಪರಿಣತರ ಸಮಿತಿ"ಯನ್ನು ನೇಮಿಸಿತ್ತು. ಅದು 'ದಂಟವಾಲ ಸಮಿತಿ' ಎಂದೇ ಪ್ರಖ್ಯಾತವಾಗಿದೆ. ಆ ಸಮಿತಿಯು ಸೂಚಿಸಿದ ಪರಿಕಲ್ಪನೆಗಳು ಹಾಗೂ ವ್ಯಾಖ್ಯೆಗಳನ್ನು ಆಧರಿಸಿಯೇ ಮೊದಲ ಪಂಚವಾರ್ಷಿಕ ಉದ್ಯೋಗ ಹಾಗೂ ನಿರುದ್ಯೋಗ ಸಮೀಕ್ಷೆಯನ್ನು (1972–73) ನಡೆಸಲಾಯಿತು. ಅಲ್ಲಿಂದೀಚೆಗೆ ಅಂತಹ ಎಂಟು ಸಮೀಕ್ಷೆಗಳು ನಡೆದಿವೆ. ಈಗ ಸರ್ಕಾರ ಪಂಚವಾರ್ಷಿಕ ಸಮೀಕ್ಷಾ ಕ್ರಮವನ್ನು ಕೈಬಿಟ್ಟಿದೆ.

ಉದ್ಯೋಗಕ್ಕೆ ಸಂಬಂಧಿಸಿದಂತೆ ಐದು ವರ್ಷಕ್ಕೊಮ್ಮೆ ಮಾಹಿತಿಯನ್ನು ಸಂಗ್ರಹಿಸಿದರೆ ಸಾಲದು ವರ್ಷಕ್ಕೊಮ್ಮೆ, ಮೂರು ತಿಂಗಳಿಗೊಮ್ಮೆ ಸಂಗ್ರಹಿಸುವುದು ಸೂಕ್ತ ಅಂತ ರಾಷ್ಟ್ರೀಯ ಸಾಂಖ್ಯಿಕ ಆಯೋಗವು (ನಾಷನಲ್ ಸ್ಟಾಟಿಸ್ಟಿಕಲ್ ಕಮಿಷನ್) ಅಭಿಪ್ರಾಯಪಟ್ಟಿತು. ಹಾಗಾಗಿ ಉದ್ಯೋಗದ ಸ್ಥಿತಿಯನ್ನು ಕುರಿತು ನಿಯತಕಾಲಿಕ ಸಮೀಕ್ಷೆಯನ್ನು (ಪಿಎಲ್‌ಎಫ್‌ಎಸ್– ಪಿರಿಯಾಡಿಕ್ ಲೇಬರ್ ಫೋರ್ಸ್ ಸರ್ವೆ) ನಡೆಸಲಾಗುತ್ತಿದೆ. ಈಗ ವಾರ್ಷಿಕವಾಗಿ, ಮೂರು ತಿಂಗಳಿಗೊಮ್ಮೆ ಅಷ್ಟೇ ಅಲ್ಲ ಸಾಪ್ತಾಹಿಕವಾಗಿಯೂ ಮಾಹಿತಿಯನ್ನು ಸಂಗ್ರಹಿಸಲಾಗುತ್ತಿದೆ.

ನಿರಂತರತೆಯನ್ನು ಕಾಪಾಡಿಕೊಳ್ಳಲು, ಪಂಚವರ್ಷೀಯ ಸಮೀಕ್ಷೆಯಲ್ಲಿ ಬಳಸಿದ ಸಾಂಖ್ಯಿಕ ಕ್ರಮವನ್ನೇ ಇಲ್ಲೂ ಬಳಸಲಾಗಿದೆ. ಅಲ್ಲಿ ಬಳಸಿರುವ ಸ್ಯಾಂಪಲ್ ಗಾತ್ರ, ಅವುಗಳ ಆಯ್ಕೆಯ ಕ್ರಮ, ಪ್ರಶ್ನಾವಳಿಗಳು, ಜನಸಂಖ್ಯೆಯನ್ನು ವಿಂಗಡಿಸಿಕೊಂಡಿರುವ ಕ್ರಮವನ್ನೇ ಇಲ್ಲೂ ಬಳಸಲಾಗಿದೆ. ಹಿಂದಿನ ಅಧ್ಯಯನಗಳೊಂದಿಗಿನ ಹೋಲಿಕೆಗೆ ಇದು ಅನಿವಾರ್ಯ. ಈ ಎಚ್ಚರಿಕೆಯನ್ನು ಈ ಸಮೀಕ್ಷೆಯಲ್ಲಿ ತೆಗೆದುಕೊಳ್ಳಲಾಗಿದೆ. ಜೊತೆಗೆ ಇಲ್ಲಿ ಬಳಸಿರುವ ಕ್ರಮ ಜಗತ್ತಿನಾದ್ಯಂತ ಪರಿಣತರು ಮಾನ್ಯ ಮಾಡಿರುವ ಕ್ರಮವೇ. ಹಾಗಾಗಿ ಇಲ್ಲಿ ಬಳಸಿರುವ ವಿಧಾನದ ಬಗ್ಗೆಯಾಗಲಿ, ಇದರ ವಿಶ್ವಾಸಾರ್ಹತೆಯ ಬಗ್ಗೆಯಾಗಲಿ ಅನುಮಾನ ಪಡುವುದಕ್ಕಾಗುವುದಿಲ್ಲ.

## ಉದ್ಯೋಗದ ವ್ಯಾಖ್ಯೆ

ಎನ್‌ಎಸ್‌ಎಸ್‌ಒ ತನ್ನ ಸಮೀಕ್ಷೆಗೆ ಹಿಂದಿನ ಒಂದು ನಿರ್ದಿಷ್ಟ ಅವಧಿಯಲ್ಲಿ ಜನರು ಎಷ್ಟು ದಿನ ಉದ್ಯೋಗದಲ್ಲಿದ್ದರು ಅನ್ನುವುದನ್ನು ಆಧರಿಸಿ ಅವರ ಉದ್ಯೋಗದ ಸ್ಥಿತಿಯನ್ನು ಅಂದರೆ, ಅವರು ಉದ್ಯೋಗಿಯೋ ಅಲ್ಲವೋ ಎಂದು ನಿರ್ಧರಿಸುತ್ತಿದೆ. ಸಮೀಕ್ಷೆಗೆ ಹಿಂದಿನ 365 ದಿನಗಳಲ್ಲಿ ಹೆಚ್ಚು ಕಾಲ ಅಂದರೆ 182 ದಿನಗಳಿಗಿಂತ ಹೆಚ್ಚು ದಿನಗಳು ಅವರು ಉದ್ಯೋಗದಲ್ಲಿದ್ದರೆ ಅದು ಅವರ ಪ್ರಧಾನ

| ವರ್ಷ | ಗ್ರಾಮೀಣ | | | | ನಗರ ಪ್ರದೇಶ | | | |
|---|---|---|---|---|---|---|---|---|
| | ಪುರುಷರು | | ಮಹಿಳೆಯರು | | ಪುರುಷರು | | ಮಹಿಳೆಯರು | |
| | ಯುಎಸ್ | ಸಿಡಬ್ಲ್ಯುಎಸ್ | ಯುಎಸ್ | ಸಿಡಬ್ಲ್ಯುಎಸ್ | ಯುಎಸ್ | ಸಿಡಬ್ಲ್ಯುಎಸ್ | ಯುಎಸ್ | ಸಿಡಬ್ಲ್ಯುಎಸ್ |
| 2017–18 | 5.8 | 8.8 | 3.8 | 7.7 | 7.1 | 8.8 | 10.8 | 12.8 |
| 2011–12 | 1.7 | 3.3 | 1.7 | 3.5 | 3.0 | 3.8 | 5.2 | 6.7 |
| 2009–10 | 1.6 | 3.2 | 1.6 | 3.7 | 2.8 | 3.6 | 5.7 | 7.2 |
| 2004–05 | 1.6 | 3.8 | 1.8 | 4.2 | 3.8 | 5.2 | 6.9 | 9.0 |
| 1999–00 | 1.7 | 3.9 | 1.0 | 3.7 | 4.5 | 5.6 | 5.7 | 7.3 |
| 1993–94 | 1.4 | 3.1 | 0.9 | 2.9 | 4.1 | 5.2 | 6.1 | 7.9 |
| 1987–88 | 1.8 | 4.2 | 2.4 | 4.4 | 5.2 | 6.6 | 6.2 | 9.2 |
| 1983 | 1.4 | 3.7 | 0.7 | 4.3 | 5.1 | 6.7 | 4.9 | 7.5 |
| 1977–78 | 1.3 | 3.6 | 2.0 | 4.1 | 5.4 | 7.1 | 12.4 | 10.9 |
| 1972–73 | 1.2 | 3.0 | 0.5 | 5.5 | 4.8 | 6.0 | 6.0 | 9.2 |

ಸ್ಥಿತಿಯಾಗುತ್ತದೆ. ಅದನ್ನು ಅವರ ಪ್ರಿನ್ಸಿಪಲ್ ಯೂಷುಯಲ್ ಸ್ಟೇಟಸ್ (ಪಿಎಸ್) ಎಂದು ಕರೆಯಲಾಗುತ್ತದೆ. ಹಾಗಿಲ್ಲದೆ ವರ್ಷದಲ್ಲಿ ಕನಿಷ್ಠ ಮೂರು ತಿಂಗಳು ಅವರು ಯಾವುದಾದರೂ ಆರ್ಥಿಕ ಚಟುವಟಿಕೆಯಲ್ಲಿ ತೊಡಗಿಕೊಂಡಿದ್ದರೆ ಅದು ಅವರ ಸಬ್ಸಿಡಿಯರಿ ಅಥವಾ ಪೂರಕಸ್ಥಿತಿ (ಎಸ್‌ಎಸ್) ಆಗುತ್ತದೆ. ಅವೆರಡನ್ನು ಒಟ್ಟಾರೆಯಾಗಿ ಸಾಮಾನ್ಯ ಸ್ಥಿತಿ ಎಂದು ಸಮೀಕ್ಷೆ ಪರಿಗಣಿಸುತ್ತದೆ. ಸಾಮಾನ್ಯವಾಗಿ ಈ ದರವನ್ನು ಒಟ್ಟಾರೆ ನಿರುದ್ಯೋಗಿಗಳ/ಉದ್ಯೋಗಿಗಳ ಸಂಖ್ಯೆಯನ್ನು ಲೆಕ್ಕ ಹಾಕಲು ಬಳಸಲಾಗುತ್ತದೆ.
ಹಾಗೆಯೇ ಸಮೀಕ್ಷೆಯಲ್ಲಿ ಬಳಸುವ ಇನ್ನೊಂದು ಪರಿಕಲ್ಪನೆ ಅಂದರೆ ಪ್ರಸ್ತುತ ಸಾಪ್ತಾಹಿಕ ಸ್ಥಿತಿ – ಕರೆಂಟ್ ವೀಕ್ಲಿ ಸ್ಟೇಟಸ್. ಸಮೀಕ್ಷೆಯ ಹಿಂದಿನ ಏಳು ದಿನಗಳಲ್ಲಿ ಕನಿಷ್ಠ ಒಂದು ಗಂಟೆಯಾದರೂ ಅವರು ಉದ್ಯೋಗದಲ್ಲಿ ತೊಡಗಿಕೊಂಡಿದ್ದರೇ ಅನ್ನುವುದನ್ನು ಆಧರಿಸಿ ಈ ಪ್ರಸ್ತುತ ಸಾಪ್ತಾಹಿಕ ಸ್ಥಿತಿಯನ್ನು ನಿರ್ಧರಿಸಲಾಗುತ್ತದೆ. ಇದನ್ನು ಸಿಡಬ್ಲ್ಯುಸಿ ಎಂದು ಸೂಚಿಸಲಾಗುತ್ತದೆ. ಹೀಗೆ ಸಮೀಕ್ಷೆ ನಡೆಸುವಾಗ ಅವರ ವಯಸ್ಸು, ಲಿಂಗ, ಆರ್ಥಿಕತೆ, ಮತ್ತು ಇತ್ತೀಚಿನ ದಿನಗಳಲ್ಲಿ ಅವರ ವಿದ್ಯಾಭ್ಯಾಸದ ಮಟ್ಟವನ್ನು ಪರಿಗಣಿಸಲಾಗುತ್ತದೆ.

## ಪಿಎಲ್‌ಎಫ್‌ಎಸ್ ವರದಿ 2017–18

2017–18ರ ಪಿಎಲ್‌ಎಫ್‌ಎಸ್ ವರದಿ ಸಿದ್ಧವಾಗಿ ಹಲವು ತಿಂಗಳುಗಳಾದ ಮೇಲೆ ಒತ್ತಡಕ್ಕೆ ಮಣಿದು ಸರ್ಕಾರ ಅದನ್ನು ಬಿಡುಗಡೆ ಮಾಡಿತು. ಚುನಾವಣೆ ಮುಗಿದು, ಅದು ಗೆದ್ದ ಮೇಲೆ ಅದನ್ನು ಬಿಡುಗಡೆ ಮಾಡಿತು. ಅದರಲ್ಲಿ ದಾಖಲಾಗಿದ್ದ ಮಾಹಿತಿ ಸರ್ಕಾರಕ್ಕೆ ಪ್ರತಿಕೂಲವಾಗಿತ್ತು ಅನ್ನುವುದು ಸರ್ಕಾರದ ಈ ನಿಲುವಿಗೆ ಕಾರಣವಾಗಿ–ತ್ತು. ಸರ್ಕಾರದ ಈ ಧೋರಣೆಯನ್ನು ವಿರೋಧಿಸಿ ಅಧ್ಯಕ್ಷರೂ ಸೇ–ರಿದಂತೆ ಇಬ್ಬರೂ ಸಮಿತಿಗೆ ರಾಜೀನಾಮೆ ನೀಡಿದರು. ಆದರೆ ಸರ್ಕಾರ ವರದಿಯನ್ನು ಬಿಡುಗಡೆ ಮಾಡುವ ವೇಳೆಗೆ ಅದರ ಮುಖ್ಯಾಂಶಗಳು ಹಲವು ಪತ್ರಿಕೆಗಳಲ್ಲಿ ವರದಿಯಾಗಿದ್ದವು. ಅದರ ಮುಖ್ಯ ಅಂಶಗಳನ್ನು ಗಮನಿಸೋಣ. ಪುರುಷರು ಮತ್ತು ಮಹಿಳೆಯರ ನಿರುದ್ಯೋಗದ ದರ ಹಿಂದಿನ ವರ್ಷಗಳಿಗೆ ಹೋಲಿಸಿದರೆ 2017–18ರಲ್ಲಿ ಹಲವು ಪಟ್ಟು ಹೆಚ್ಚಾಗಿದೆ. ಪುರುಷರಲ್ಲಿ ನಿರುದ್ಯೋಗದ ಪ್ರಮಾಣ ಶೇಕಡ 5.8ರಷ್ಟು ಮತ್ತು ಮಹಿಳೆಯರಲ್ಲಿ ಅದು 3.8ರಷ್ಟು ಹೆಚ್ಚಾಗಿದೆ. ಉದ್ಯೋಗ ಸೃಷ್ಟಿಯಾಗುವುದಿರಲಿ, ಉದ್ಯೋಗ ನಾಶವಾಗುತ್ತಿದೆ ಅನ್ನುವ ಸುದ್ದಿ ಮಿಲಿಯನ್ ಉದ್ಯೋಗ ಸೃಷ್ಟಿ ಮಾಡುತ್ತೇವೆ ಎಂದು ಘೋಷಿಸಿಕೊಂಡಿದ್ದ ಸರ್ಕಾರಕ್ಕೆ ಸಹಜವಾಗಿಯೇ ಆಘಾತಕಾರಿಯಾದ ವಿಷಯ. ಸಹಜವಾಗಿಯೇ ಸರ್ಕಾರ ಇದರ ಸಮಂಜತೆಯ ಬಗ್ಗೆ ಆಕ್ಷೇಪ ವ್ಯಕ್ತಪಡಿಸಿತು.

1 ಸರ್ಕಾರದ ಮೊದಲನೆಯ ತಕರಾರು 2017–18ರ ಅಂಕಿ ಅಂಶಗಳನ್ನು ಹಿಂದಿನ ಪಂಚವರ್ಷೀಯ ಮಾಹಿತಿಗಳೊಂದಿಗೆ ಹೋಲಿಸುವುದಕ್ಕೆ ಆಗುವುದಿಲ್ಲ ಅನ್ನುವುದು. ಇದು ಸರಿಯಾದ ವಾದವಲ್ಲ ಅನ್ನುವುದನ್ನು ನಾವು ಈಗಾಗಲೇ ಗಮನಿಸಿದ್ದೇವೆ. ಒಂದೇ ವ್ಯತ್ಯಾಸ ಅಂದರೆ ಪಿಎಲ್‌ಎಫ್‌ಎಸ್ ಸಮೀಕ್ಷೆಯಲ್ಲಿ ಹಿಂದಿನ ವರ್ಷಗಳಲ್ಲಿ ಮಾಡುವಂತೆ ಮಾಹಿತಿ ಸಂಗ್ರಹಿಸುವಾಗ ಆರ್ಥಿಕ ಸ್ಥಿತಿಯ ಬದಲು ಶಿಕ್ಷಣ ಮಟ್ಟವನ್ನು ಪರಿಗಣನೆಗೆ ತೆಗೆದುಕೊಳ್ಳಲಾಗಿದೆ. ಇದು ನಿರುದ್ಯೋಗದ ದರದ ಮೇಲೆ ಯಾವ ಪರಿಣಾಮವನ್ನು ಮಾಡುವುದಿಲ್ಲ. ಹಿಂದಿನ ವರ್ಷಗಳ ನಿರುದ್ಯೋಗಿಗಳ ವಿದ್ಯಾಭ್ಯಾಸದ ಮಟ್ಟದೊಂದಿಗೆ ಹೋಲಿಕೆ ಸಾಧ್ಯವಾಗುವುದಿಲ್ಲ. ಯಾಕೆಂದರೆ ಆಗ ಅಂತಹ ಮಾಹಿತಿಯನ್ನು ಸಂಗ್ರಹಿಸುತ್ತಿರಲಿಲ್ಲ.

2 ಹಾಗೆಯೇ ಈ ವರದಿಯಲ್ಲಿರುವ ದೇಶದ ಜನಸಂಖ್ಯೆಯ ಅಂದಾಜು ಸರಿ ಇಲ್ಲ ಅನ್ನುವುದು ಮತ್ತೊಂದು ತಕರಾರು. ಇದು ಕುಟುಂಬವನ್ನು ಘಟಕವಾಗಿ ತೆಗೆದುಕೊಂಡ ಮಾಡಿದ ಸಮೀಕ್ಷೆ. ಕುಟುಂಬದ ಗಾತ್ರ ಕಡಿಮೆಯಾದೊಡನೆ ಜನಸಂಖ್ಯೆಯ ಪ್ರಮಾಣವೂ ಕಮ್ಮಿಯಾಗುತ್ತದೆ. ಇದು ಎಲ್ಲಾ ಕುಟುಂಬವನ್ನು ಘಟಕಗಳನ್ನಾಗಿ ಮಾಡಿಕೊಂಡ ಸಮೀಕ್ಷೆಯ ಸಮಸ್ಯೆ. ಹಾಗಾಗಿ ಇಂತಹ ಸಮೀಕ್ಷೆಯನ್ನು ಜನಸಂಖ್ಯೆಯ ಲೆಕ್ಕಾಚಾರಕ್ಕೆ ಬಳಸಿಕೊಳ್ಳುವುದಕ್ಕಾಗುವುದಿಲ್ಲ ಎಂದಷ್ಟೇ ಅರ್ಥಮಾಡಿಕೊಳ್ಳಬೇಕು.
ಅದೇನೆ ಇರಲಿ, ಒಟ್ಟಾರೆ ಉದ್ಯೋಗಿಗಳ ನಿರುದ್ಯೋಗಿಗಳ ಸಂಖ್ಯೆಯನ್ನು ಲೆಕ್ಕಹಾಕುವುದಕ್ಕೆ ಎನ್‌ಎಸ್‌ಎಸ್‌ಓ ಮಾಡಿರುವ ಅಂದಾಜನ್ನೇ ಎಲ್ಲರೂ ಸಾಮಾನ್ಯವಾಗಿ ಬಳಸಿಕೊಳ್ಳುತ್ತಾರೆ. ಸರ್ಕಾರ ನೇಮಿಸಿರುವ ಸಮಿತಿ ಬಳಸಿರುವುದೂ ಎನ್‌ಎಸ್‌ಎಸ್‌ಓ ಮಾಡಿರುವ ಅಂದಾಜನ್ನೇ. ಮೊದಲಿಗೆ ನಿರುದ್ಯೋಗಕ್ಕೆ ಸಂಬಂಧಿಸಿದಂತೆ ಸಮೀಕ್ಷೆ ನೀಡಿರುವ ಮಾಹಿತಿಯನ್ನು ಗಮನಿಸೋಣ. ಇಲ್ಲಿ ಶೇಕಡವಾರು ಬೆಳವಣಿಗೆ ದರವನ್ನು ನೀಡಲಾಗಿದೆ. ಇದನ್ನು ಗಮನಿಸಿದರೆ 2017–18ರಲ್ಲಿ ದಿಢೀರನೆ ನಿರುದ್ಯೋಗದ ದರ ಹಲವು ಪಟ್ಟು ಹೆಚ್ಚಿರುವುದು ಕಾಣುತ್ತದೆ.

ಸಾಮಾನ್ಯವಾಗಿ ಧೀರ್ಘಕಾಲೀನ ನಿರುದ್ಯೋಗ ದರ ಅಷ್ಟೊಂದು ಹೆಚ್ಚಿರುವುದಿಲ್ಲ. ಅದು ಸಾಮಾನ್ಯವಾಗಿ ಎರಡಕ್ಕಿಂತ ಕಡಿಮೆ ಇರುತ್ತದೆ. ಆದರೆ 2017–18ರಲ್ಲಿ ಅದು ಶೇಕಡ 6.1ನ್ನು ದಾಟಿರುವುದು ನಿಜಕ್ಕೂ ಆತಂಕದ ವಿಷಯ. ಹಾಗಾಗಿಯೇ ಅದು ಹಲವು ಚರ್ಚೆಗಳಿಗೆ ಕಾರಣವಾಗಿದೆ.
ಉದ್ಯೋಗಿಗಳ ಪ್ರಾವಿಡೆಂಟ್ ಫಂಡ್ ಸಂಘಟನೆಯ (ಇಪಿ–ಎಫ್‌ಓ) ಅಂಕಿಅಂಶವನ್ನು ಮತ್ತು ಮುದ್ರ ಸಾಲದಿಂದ ಸೃಷ್ಟಿಯಾದ ಉದ್ಯೋಗವನ್ನು ಪರಿಗಣಿಸಬೇಕೆಂಬ ವಾದವು ಇತ್ತೀಚೆಗೆ ಕೇಳಿಬರುತ್ತಿದೆ. ಆದರೆ ಇಪಿಎಫ್‌ಓ ವ್ಯಕ್ತಿಯ ಉದ್ಯೋಗದ ಸ್ಥಿತಿಯನ್ನು ತಿಳಿಸುವುದಿಲ್ಲ. ಹಾಗೆಯೇ ಮುದ್ರ (MUDRA - Micro Units Development & Refinance Agency Ltd.) ಸಾಲವನ್ನು ತೆಗೆದುಕೊಂಡವರು ಅದನ್ನು ಉದ್ದಿಮೆಯಲ್ಲಿ ಹೂಡಿದ್ದಾರೆ ಅನ್ನುವುದನ್ನು ಒಪ್ಪಿಕೊಳ್ಳುವುದಕ್ಕೆ ಬೇಕಾದ ಮಾಹಿತಿ ನಮ್ಮಲ್ಲಿ ಇಲ್ಲ. ಇದನ್ನು ಹಲವು ಕಡೆ ಪ್ರಮುಖ ಸಂಖ್ಯಾಶಾಸ್ತ್ರ ತಜ್ಞ ಪ್ರೊಣಬ್ ಸೇನ್ ಸ್ಪಷ್ಟಪಡಿಸಿದ್ದಾರೆ. ಅದು ಸರಿ ಕೂಡ.
ಹಾಗಾಗಿ ಸಧ್ಯಕ್ಕೆ ಎನ್‌ಎಸ್‌ಎಸ್‌ಓಗಿಂತ ವಿಶ್ವಾಸಾರ್ಹವಾದ ಮಾಹಿತಿ ಉದ್ಯೋಗದ ಸ್ಥಿತಿಗತಿಗೆ ಸಂಬಂಧಿಸಿದಂತೆ ಇಲ್ಲ. ಇದರಲ್ಲಿ ನಮಗೆ ಒಟ್ಟಾರೆ ಕೆಲಸಗಾರರ, ಉದ್ಯೋಗಿಗಳ ಮತ್ತು ನಿರುದ್ಯೋಗಿಗಳ ಪ್ರಮಾಣ ಏರುತ್ತಿರುವ/ಇಳಿಯುತ್ತಿರುವ ದರ ತಿಳಿಯುತ್ತದೆ. ಒಟ್ಟಾರೆ ಜನಸಂಖ್ಯೆಗೆ ಸಂಬಂಧಿಸಿದ ಮಾಹಿತಿಯನ್ನು ಬಳಸಿಕೊಂಡು ಉದ್ಯೋಗಿಗಳ, ನಿರುದ್ಯೋಗಿಗಳ ಸಂಖ್ಯೆಯನ್ನು ಅಂದಾಜು ಮಾಡಲಾಗುತ್ತದೆ. ಅಂ–ದಾಜು ಜನಸಂಖ್ಯೆಯನ್ನು ಭಾರತದ ರಿಜಿಸ್ಟ್ರಾರ್ ಜನರಲ್ ಕಛೇ–ರಿಯು ಸಾಮಾನ್ಯವಾಗಿ ಪ್ರಕಟಿಸುತ್ತಿತ್ತು. 2016ರಲ್ಲಿ ಸರ್ಕಾರ ಅಂತಹ ಜನಸಂಖ್ಯಾ ಮಾಹಿತಿಯನ್ನು ಪ್ರಕಟಿಸಬೇಕಿತ್ತು. ಆದರೆ ಈವರೆಗೂ ರಿಜಿಸ್ಟ್ರಾರ್ ಕಛೇರಿಯಿಂದ ಅಂತಹ ಮಾಹಿತಿ ಪ್ರಕಟಗೊಂಡಿಲ್ಲ. ಅದರಿಂದ ಹಲವು ಸಂಶೋಧಕರು, ರೂಢಿಯಲ್ಲಿರುವ ಕ್ರಮವನ್ನು ಬಳಸಿಕೊಂಡು ಜನಸಂಖ್ಯೆಯ ಅಂದಾಜು ಮಾಡಿದ್ದಾರೆ. ಆ ಅಂ–ದಾಜನ್ನು ಬಳಸಿಕೊಂಡು ಒಟ್ಟಾರೆ ಉದ್ಯೋಗಿಗಳ ಸಂಖ್ಯೆಯನ್ನು ಲೆಕ್ಕ ಮಾಡಿದ್ದಾರೆ. ಹಾಗೆ ಮೂರು ಅಂದಾಜುಗಳು ನಮ್ಮ ಮುಂದಿವೆ. ಒಂದು ಭಂಡಾರಿ ಹಾಗೂ ದುಬೆ ಅವರು ಮಾಡಿರುವ ಅಧ್ಯಯನ. ಇದು ಸರ್ಕಾರ ನೇಮಿಸಿದ ಸಮಿತಿ. ಹಾಗೆಯೇ ಎರಡನೆಯದು ಅಜೀಂ ಪ್ರೇಂಜಿ ಸಂಸ್ಥೆಯಿಂದ ಮೆಹರೋತ್ರ ಮತ್ತು ಪರಿದಾ ಅವರ ಅಧ್ಯಯನ. ಮತ್ತೊಂದು ಹಿಮಾಂಶು ಅವರು ಮಾಡಿರುವ ಅಂದಾಜು. ಮೂರು ವರದಿಗಳ ಫಲಿತಾಂಶವನ್ನು ಕೆಳಕಂಡಂತೆ ಕ್ರೋಢೀಕರಿಸಬಹುದು.

| ಒಟ್ಟಾರೆ ಉದ್ಯೋಗ (ಮಿಲಿಯನ್) | 2004–05 | 2011–12 | 2017–18 |
|---|---|---|---|
| ಭಂಡಾರಿ ಮತ್ತು ದುಬೆ | 412 | 433 | 457 |
| ಮೆಹ್ರೋತ್ರ ಮತ್ತು ಪರಿದಾ | 459 | 474 | 465 |
| ಹಿಮಾಂಶು | 460 | 473 | 457 |

ಎಲ್ಲರೂ ಉದ್ಯೋಗಿಗಳ ಸಂಖ್ಯೆಯನ್ನು ಲೆಕ್ಕ ಮಾಡುವುದಕ್ಕೆ ಎನ್‌ಎಸ್‌ಎಸ್‌ಓ ಅಂದಾಜನ್ನೇ ಬಳಸಿಕೊಂಡಿದ್ದರೂ ಅವರ ಅಂದಾಜಿನಲ್ಲಿ ಸಾಕಷ್ಟು ವ್ಯತ್ಯಾಸ ಕಾಣುತ್ತಿದೆ. ಇದರಲ್ಲಿ ಕೊನೆಯ ಎರಡು ವರದಿಗಳ ಅಂದಾಜು ಸುಮಾರಾಗಿ ಒಂದೇ ರೀತಿ ಇದೆ. ಆದರೆ 2017–18ಕ್ಕೆ ಸಂಬಂಧಿಸಿದಂತೆ ಎರಡರ ನಡುವೆ ವ್ಯತ್ಯಾಸವಿದೆ. ಅದಕ್ಕೆ ಅವೆರಡೂ ಬಳಸಿರುವ ಜನಸಂಖ್ಯೆಯ ಅಂದಾಜು ಬೇರೆಯಾಗಿರುವುದು ಕಾರಣ. ಹಿಮಾಂಶು ಅವರು 2017–18ರ ಜನಸಂಖ್ಯೆಯನ್ನು 1.33 ಬಿಲಿಯನ್ ಎಂದು ಅಂದಾಜು ಮಾಡಿದ್ದಾರೆ. ಅಜೀಂ ಪ್ರೇಮ್‌ಜೀ ವಿಶ್ವವಿದ್ಯಾನಿಲಯದ ಸುಸ್ಥಿರ ಉದ್ಯೋಗ ಕೇಂದ್ರ ವತಿಯಿಂದ ಸಂತೋಷ್ ಮೆಹರೋತ್ರ ಮತ್ತು ಜಜಾತಿ ಕೆ ಪರಿದಾ ಅವರು 1.345 ಬಿಲಿಯನ್ ಎಂದು ಅಂದಾಜು ಮಾಡಿದ್ದಾರೆ. ಹಾಗಾಗಿ ಅವರ ಒಟ್ಟಾರೆ ಉದ್ಯೋಗಿಗಳ ಸಂಖ್ಯೆಯ ಅಂದಾಜಿನಲ್ಲೂ ವ್ಯತ್ಯಾಸ ಕಾಣುತ್ತಿದೆ. ಇನ್ನು ಭಂಡಾರಿ ಹಾಗೂ ದುಬೆಯವರ ಲೆಕ್ಕಾಚಾರಕ್ಕೆ ಬಂದರೆ ಅವರು 2011–12ರಿಂದ 2017–18ವರೆಗಿನ ಜನಸಂಖ್ಯೆಯ ಬೆಳವಣಿಗೆಯ ದರವನ್ನು 1.7ರಷ್ಟು ಎಂದು ಇಟ್ಟುಕೊಂಡು ಭಾರತದ ಜನಸಂಖ್ಯೆ 1.36 ಬಿಲಿಯನ್ ಅಂತ ಅಂದಾಜು ಮಾಡಿದ್ದಾರೆ. ಇದು ಯಾವುದೇ ಲೆಕ್ಕಾಚಾರದಲ್ಲೂ ಜಾಸ್ತಿಯೇ. ಜೊತೆಗೆ ಅದು ತನ್ನ ಲೆಕ್ಕಾಚಾರದಲ್ಲಿ ಸಬ್ಸಿಡಿಯರಿ ಅಂದರೆ ಪೂರಕ ಉದ್ಯೋಗದಲ್ಲಿ ತೊಡಗಿಕೊಂಡವರನ್ನು ಪರಿಗಣಿಸಿಲ್ಲ. ಹಾಗಾಗಿ ಉದ್ಯೋಗಕ್ಕೆ ಸಂಬಂಧಿಸಿದಂತೆ ಸಂಪೂರ್ಣ ಚಿತ್ರ ಸಿಗುವುದಿಲ್ಲ. ಇವೆರಡು ಅಂಶಗಳನ್ನು ಪರಿಗಣನೆಗೆ ತೆಗೆದುಕೊಂಡು ಲೆಕ್ಕ ಹಾಕಿದರೆ ಉಳಿದ ವರದಿಗಳ ಫಲಿತವೇ ಇಲ್ಲೂ ಸಿಗುತ್ತದೆ. ಮೆಹರೋತ್ರ–ಪರಿದ ಹಾಗೂ ಹಿಮಾಂಶು ವರದಿಗಳೆರಡೂ ಉದ್ಯೋಗದಲ್ಲಿ ಭಾರಿ ಕಡಿತವಾಗಿರುವುದನ್ನು ಸೂಚಿಸುತ್ತದೆ. ಸಿಎಂಐಇ ಸಂಸ್ಥೆಯ ವರದಿಯೂ ಇದನ್ನೇ ಹೇಳುತ್ತಿದೆ. ವಿವಿಧ ಅಧ್ಯಯನಗಳು ಉದ್ಯೋಗದಲ್ಲಿ ಆಗಿರುವ ನಷ್ಟವನ್ನು 6.6 ಮಿಲಿಯನ್ ಹಾಗೂ 15.5 ಮಿಲಿಯನ್ ನಡುವೆ ಅಂದಾಜು ಮಾಡಿವೆ (ಇವು ಅವರು ಮಾಡಿಕೊಂಡಿರುವ ಜನಸಂಖ್ಯೆಯ ಅಂದಾಜನ್ನು ಆಧರಿಸಿವೆ). ಇದೊಂದು ಕಳವಳಕಾರಿ ಅಂಶ.

## ನಗದು ಅಮಾನ್ಯೀಕರಣದ ಪಾತ್ರ

ಪಿಎಲ್‌ಎಫ್ ಸಮೀಕ್ಷೆಯ ಪ್ರಕಾರ 2017–18ರಲ್ಲಿ ನಿರುದ್ಯೋಗಿಗಳ ಸಂಖ್ಯೆ 2.7ಪಟ್ಟು ಹೆಚ್ಚಾಗಿದೆ. ಇದಕ್ಕೆ ಕಾರಣವೇನಿರಬಹುದು? ಅದಕ್ಕೆ ಪೂರ್ವದಲ್ಲಿ ನಡೆದ ಎರಡು ಘಟನೆಗಳ ಕಡೆ ಸ್ವಾಭಾವಿಕವಾಗಿಯೇ ನಮ್ಮ ಗಮನ ಹೋಗುತ್ತದೆ. ಒಂದು ನಗದು ಅಮಾನ್ಯೀಕರಣ, ಮತ್ತೊಂದು ಜಿಎಸ್‌ಟಿ. ನೇರವಾಗಿ ಇದೇ ಕಾರಣ ಅಂತ ಹೇಳುವುದಕ್ಕೆ ಸಾಧ್ಯವಿಲ್ಲದೇ ಹೋದರೂ ಆಗ ಅಂತಹ ಬೇರೆ ಯಾವುದೇ ಘಟನೆಗಳೂ ನಡೆದಿಲ್ಲ. ಜೊತೆಗೆ ನೋಟು ಅಮಾನ್ಯೀಕರಣ ಗ್ರಾಮೀಣ ಅರ್ಥಿಕತೆಗೆ, ಸಣ್ಣ ಹಾಗೂ ಮಧ್ಯಮ ಗಾತ್ರದ ಉದ್ದಿಮೆಗಳಿಗೆ ಹೊಡೆತಕೊಟ್ಟಿರುವುದನ್ನು ಬಹುಪಾಲು ಅಧ್ಯಯನಗಳು ತಿಳಿಸಿವೆ. ಹಾಗೆಯೇ ಜಿಎಸ್‌ಟಿಯಿಂದ ಪೆಟ್ಟು ಬಿದ್ದಿರುವುದೂ ಈ ಕ್ಷೇತ್ರಗಳಿಗೇ. ಹಾಗಾಗಿ ಬಹುಪಾಲು ಅರ್ಥಶಾಸ್ತ್ರಜ್ಞರು ಉದ್ಯೋಗ ನಾಶಕ್ಕೆ ಇವುಗಳು ಬಹುಮಟ್ಟಿಗೆ ಕಾರಣ ಎಂದು ಹೇಳುತ್ತಿದ್ದಾರೆ. ಆದರೆ ಇಡೀ ಬಿಕ್ಕಟ್ಟಿಗೆ ಇವೆರಡೇ ಕಾರಣ ಎಂದು ಆರೋಪಿಸುವುದು ಸರಿಯಲ್ಲ. ಯಾಕೆಂದರೆ ಹಲವು ವರ್ಷಗಳಿಂದ ಈ ಪ್ರವೃತ್ತಿ ನಿಧಾನವಾಗಿ ಪ್ರಕಟವಾಗುತ್ತಿತ್ತು. ಮೇಲಿನ ಎರಡೂ ಅಂಶಗಳು ಪರಿಸ್ಥಿತಿಯನ್ನು ಉಲ್ಬಣಗೊಳಿಸಿತು. ಹಾಗಾಗಿ ಸ್ವಲ್ಪ ಹಿಂದಕ್ಕೆ ಹೋಗಿ ಈ ಉದ್ಯೋಗ ನಷ್ಟದ ಪ್ರವೃತ್ತಿಯನ್ನು ಅರ್ಥಮಾಡಿಕೊಳ್ಳುವುದು ಸೂಕ್ತ. ಇದಕ್ಕೆ ಸಂಬಂಧಿಸಿದಂತೆ ಎನ್‌ಎಸ್‌ಎಸ್ ಮಾಹಿತಿಯನ್ನು ಆಧರಿಸಿ ತಯಾರಿಸಿದ ಅಂಕಿ ಅಂಶವನ್ನು ಗಮನಿಸೋಣ(ಕೆ ಪಿ ಕಣ್ಣನ್ ಮತ್ತು ಜಿ ರವೀಂದ್ರನ್, ಇಪಿಡಬ್ಲ್ಯೂ, ನವೆಂಬರ್ 9, 2019). ಇದು 15 ವರ್ಷಕ್ಕೆ ಮೀರಿದ ಉದ್ಯೋಗಕ್ಕೆ ಸೂಕ್ತವಾದ ಜನರ ಮಾಹಿತಿಯನ್ನು ನೀಡುತ್ತದೆ.

ಡಬ್ಲ್ಯುಎಪಿ–ಉದ್ಯೋಗ ವಯೋಮಾನದವರ ಜನಸಂಖ್ಯೆ 2005ರಿಂದ ಉದ್ಯೋದ ಬೆಳವಣಿಗೆಯ ದರದಲ್ಲಿ ಕಡಿಮೆಯಾಗುತ್ತಾ ಹೋಗಿದೆ. ಆದರೆ ಆಗ ಭಾರತದ ಆರ್ಥಿಕತೆ ಹಿಂದೆಂದಿಗಿಂತ ಚೆನ್ನಾಗಿಯೇ ಬೆಳೆಯುತ್ತಿತ್ತು. ಅಂದರೆ ಈ ಆವಧಿಯಲ್ಲಿ ಆರ್ಥಿಕ ಪ್ರಗತಿಯೊಂದಿಗೆ ಉದ್ಯೋಗದ ಬೆಳವಣಿಗೆ ಆಗಲಿಲ್ಲ. ಅಂದರೆ ಉದ್ಯೋಗದ ದರ ಆರ್ಥಿಕ ಪ್ರಗತಿಗೆ ಸ್ಪಂಧಿಸುತ್ತಿಲ್ಲ. ಇದನ್ನು ತಾಂತ್ರಿಕ ಪರಿಭಾಷೆಯಲ್ಲಿ ಎಂಪ್ಲಾಯ್‌ಮೆಂಟ್ ಎಲಾಸ್ಟಿಸಿಟಿ ಆಫ್ ಗ್ರೋತ್ ಕಡಿಮೆಯಾಗಿದೆ ಅನ್ನುತ್ತಾರೆ. 2011–12ರ ವೇಳೆಗೆ ಉದ್ಯೋಗದ ಬೆಳವಣಿಗೆ ದರ ಸೊನ್ನೆ ಆಗಿಬಿಟ್ಟಿತು. ಅದನ್ನು ಉದ್ಯೋಗರಹಿತ ಬೆಳವಣಿಗೆ ಎಂದು ಕರೆಯುವ ವಾಡಿಕೆ ಇದೆ. ಅಲ್ಲಿಂದ ಮುಂದಕ್ಕೆ ಅದು ಋಣಾತ್ಮಕವಾಯಿತು. ಅಂದರೆ ಈಗಿರುವ ಉದ್ಯೋಗವೂ ನಷ್ಟವಾಗತೊಡಗಿತು. ಈಗ ಆರ್ಥಿಕ ಪ್ರಗತಿಯೂ ಮಂದವಾಗುತ್ತಿದೆ. ಇದು ಆರ್ಥಿಕತೆಯ ಮೇಲೆ ಹಲವು ರೀತಿಯಲ್ಲಿ ಋಣಾತ್ಮಕ ಪರಿಣಾಮ ಬೀರುತ್ತಿದೆ.

## ಯಾರ ಮೇಲೆ ಎಷ್ಟು ಪರಿಣಾಮ?

ಮೇಲಿನ ಪಟ್ಟಿಯನ್ನು ನೋಡಿದರೆ ಒಟ್ಟಾರೆ ಉದ್ಯೋಗದಲ್ಲಿ ತೊಡಗಿಕೊಂಡಿದ್ದವರ ಸಂಖ್ಯೆ 2011–12ರಲ್ಲಿ 474.2 ಮಿಲಿಯನ್ ಇತ್ತು. ಅದು 2017–18ರಲ್ಲಿ 465.1ಕ್ಕೆ ಇಳಿದಿದೆ. ಅಂ–
ದರೆ ಈ ಆವಧಿಯಲ್ಲಿ 9.1 ಮಿಲಿಯನ್ ಉದ್ಯೋಗ ನಷ್ಟವಾಗಿದೆ. ಕೃಷಿಯಲ್ಲಿ 2011–12ರಲ್ಲಿ 231.9 ಮಿಲಿಯನ್ ಜನರು ಕೃಷಿಯಲ್ಲಿ ತೊಡಗಿಕೊಂಡಿದ್ದರು. 2017–18ರಲ್ಲಿ ಅವರ ಸಂಖ್ಯೆ 205.3 ಮಿಲಿಯನ್ನಿಗೆ ಇಳಿದಿದೆ. ಅಂದರೆ ಸುಮಾರು 27 ಮಿಲಿಯನ್ನಷ್ಟು ಕಮ್ಮಿಯಾಗಿದೆ. ಹಾಗೆಯೇ ಉತ್ಪಾದನಾ ಕ್ಷೇತ್ರದಲ್ಲೂ ಉದ್ಯೋಗಿಗಳ ಸಂಖ್ಯೆ 59.8 ಮಿಲಿಯನ್ನಿನಿಂದ 56.4 ಮಿಲಿಯನ್ನಿಗೆ ಇಳಿದಿದೆ. ಅಂದರೆ 3.5 ಮಿಲಿಯನ್ ಉದ್ಯೋಗಗಳು ಕಡಿಮೆಯಾಗಿವೆ. ಈ ಆವಧಿಯಲ್ಲಿ ಉದ್ಯೋಗ ಹೆಚ್ಚಿರುವುದು ಸೇವಾ ಕ್ಷೇತ್ರದಲ್ಲಿ ಮಾತ್ರ. ಅದು 127.3 ಮಿಲಿಯನ್ನಿಂದ 144.4 ಮಿಲಿಯನ್ನಿಗೆ ಏರಿದೆ.
ಇನ್ನು ಯುವಕರಲ್ಲಿ ಅಂದರೆ 15ರಿಂದ 29ರ ವಯೋಮಾನದವರ ಸ್ಥಿತಿಯನ್ನು ನೋಡಿದಾಗ ಒಟ್ಟಾರೆಯಾಗಿ ಉದ್ಯೋಗಿಗಳ ಸಂಖ್ಯೆ 138 ಮಿಲಿಯನ್ನಿಂದ 115.7ಕ್ಕೆ ಇಳಿದಿದೆ. ಅಂದರೆ 12.3 ಮಿಲಿಯನ್ನಷ್ಟು ಕಡಿಮೆಯಾಗಿದೆ. ಇವರಲ್ಲಿ ಕೆಲಸ ಹುಡುಕುತ್ತಿರುವವರ ಶೇಕಡವಾರು ಪ್ರಮಾಣ (ಐಈಃಖ–ಐಚಿಛಿಠಡಿ ಈಠಡಿಛಿಜ ಕಚಿಡಿಣಚಿಛಿಣಿಚಿಣ–ಣಠಟಿ ಡಿಚಿಣಜ) ಸಂಖ್ಯೆ ಯುವಕರಲ್ಲಿ ಶೇಕಡ 44.6ರಿಂದ ಶೇಕಡ 38.3ಕ್ಕೆ ಇಳಿದಿದೆ. ಇದು ಒಟ್ಟಾರೆ ಜನಸಂಖ್ಯೆಯಲ್ಲೂ ಅದು ಶೇಕಡ 39.5 ರಿಂದ 36.5ಕ್ಕೆ ಇಳಿದಿದೆ. ಅಂದರೆ ಕೆಲಸ ಹುಡುಕಿ ಸಿಗುವುದಿಲ್ಲ ಅಂದುಕೊಂಡ ಭ್ರಮನಿರಸನಗೊಳ್ಳುತ್ತಿರುವ ಪ್ರವೃತ್ತಿಯನ್ನು ಸೂಚಿಸುತ್ತದೆ

| ಕ್ಷೇತ್ರ | ಒಟ್ಟು ಸಂಖ್ಯೆ– ಮಿಲಿಯನ್ನಿನಲ್ಲಿ | | | |
|---|---|---|---|---|
| | ಒಟ್ಟು ಜನಸಂಖ್ಯೆ | | 15ರಿಂದ 29 ವರ್ಷದ ಯುವಕರು | |
| | 2011–12 | 2017–18 | 2011–12 | 2017–18 |
| ಕೃಷಿ | 231.9 | 205.3 | 60.7 | 41.8 |
| ಉತ್ಪಾದನೆ | 59.8 | 56.4 | 22.1 | 18.5 |
| ಉತ್ಪಾದನೆಯೇತರ | 55.3 | 58.9 | 19.4 | 17.8 |
| ಸೇವೆ | 127.3 | 144.4 | 35.7 | 37.6 |
| ಒಟ್ಟು ಉದ್ಯೋಗ | 474.2 | 465.1 | 138.0 | 115.7 |
| ಶ್ರಮಿಕರ ಸಂಖ್ಯೆ | 484.8 | 495.1 | 147.0 | 140.7 |
| ಶಿಕ್ಷಣದಲ್ಲಿ ತೊಡಗಿಸಿಕೊಂಡವರು | | | 99 | 127 |
| WPR (%) | 38.6 | 34.7 | 41.9 | 31.4 |
| LFPR (%) | 39.5 | 36.9 | 44.6 | 38.3 |
| UR (%) as per usual status | 2.2 | 6.1 | 6.1 | 17.8 |
| UR (%) as per weekly status | 3.0 | 8.8 | 6.8 | 21.4 |

Source: CSE Working paper

ಅನ್ನುವುದು ಹಲವು ಸಂಶೋಧಕರ ಅನಿಸಿಕೆ. ಹೀಗೆ ಕೆಲಸ ಹುಡುಕುತ್ತಿರುವವರಲ್ಲಿ ಭ್ರಮನಿರಸನಗೊಂಡವರು ಎಷ್ಟು ಪ್ರಮಾಣದಲ್ಲಿ ಇದ್ದಾರೆ ಅನ್ನುವುದು ಹೇಳುವುದಕ್ಕೆ ಕಷ್ಟವಾದರೂ ಇದು ಆತಂಕಕಾರಿ ಬೆಳವಣಿಗೆ ಅನ್ನುವುದರಲ್ಲಿ ಅನುಮಾನವಿಲ್ಲ.

ಮತ್ತೊಂದು ಕುತೂಹಲಕಾರಿ ಅಂಶವೆಂದರೆ ಈ ಅವಧಿಯಲ್ಲಿ ಶ್ರಮಿಕರ ಸಂಖ್ಯೆ ಅಂದರೆ ಕೆಲಸ ಹುಡುಕುತ್ತಿರುವವರ ಸಂಖ್ಯೆ ಕೇವಲ 10 ಮಿಲಿಯನ್ ಮಾತ್ರ ಹೆಚ್ಚಾಗಿರುವುದು. ಜೊತೆಗೆ 15ರಿಂದ 29ರ ವಯೋಮಾನದವರಲ್ಲಿ ಕೆಲಸವನ್ನು ಹುಡುಕುತ್ತಿರುವವರ ಶೇಕಡವಾರು ಪ್ರಮಾಣದಲ್ಲಿ (ಐಈಕಿಖ–ಐಚಿಛಿಠಡಿ ಈಡಿಛಿಜ ಕಚಿಡಿಣಿಛಿಥಿ–ಠಿಚಿಣಿಠಟಿ ಡಿಚಿಣಿಜ) ಕುಸಿತವನ್ನು ಕಾಣಬಹುದು. ಅದು ಒಟ್ಟಾರೆ ಜನಸಂಖ್ಯೆಯಲ್ಲಿ ಅದರ ಪ್ರಮಾಣ 39.5ರಿಂದ ಶೇಕಡ 36.9ಕ್ಕೆ ಕುಸಿದಿದೆ. ಯುವಕರಲ್ಲಿ ವಿಷಯದಲ್ಲಿ ಅದು ಶೇಕಡ 44.6ರಿಂದ ಶೇಕಡ 38.3ಕ್ಕೆ ಕುಸಿದಿದೆ. ಅದು ಮಹಿಳೆಯರ ವಿಷಯದಲ್ಲಿ ಶೇಕಡ 29ರಿಂದ 22ಕ್ಕೆ ಕುಸಿದಿದೆ. ಅಂದರೆ ಕೆಲಸ ಹುಡುಕುತ್ತಿರುವವರ ಸಂಖ್ಯೆಯಲ್ಲಿ ಗಣನೀಯವಾಗಿ ಇಳಿಮುಖವಾಗಿದೆ. ಅಂದರೆ ಅವರು ಕೆಲಸ ಸಿಗುತ್ತದೆ ಎಂಬ ಭರವಸೆಯನ್ನೇ ಕಳೆದುಕೊಂಡಿದ್ದಾರೆ. ಹಾಗಾಗಿ ಅದಕ್ಕಾಗಿ ಪ್ರಯತ್ನಿಸುತ್ತಿಲ್ಲ. ಇವರನ್ನು ವರದಿ ಭ್ರಮನಿರಸನಗೊಂಡ ಕೆಲಸಗಾರರು ಎಂದು ಕರೆಯುತ್ತದೆ. ಹಾಗಾಗಿ ಉದ್ಯೋಗಕ್ಕೆ ಸಂಬಂಧಿಸಿದಂತೆ ಎರಡು ಪ್ರವೃತ್ತಿಗಳು ಸ್ಪಷ್ಟವಾಗಿ ಕಾಣುತ್ತಿದೆ. ಒಂದು ಒಟ್ಟಾರೆ ಉದ್ಯೋಗ ನಾಶವಾಗುತ್ತಿದೆ, ಅಷ್ಟೇ ಅಲ್ಲ ಉದ್ಯೋಗ ಸಿಗುತ್ತದೆ ಅನ್ನುವ ಭರವಸೆಯೂ ಕಮ್ಮಿಯಾಗುತ್ತಿದೆ. ಇದರ ಪರಿಣಾಮ ಮಹಿಳೆಯರ ಮೇಲೆ ಹೆಚ್ಚಾಗುತ್ತಿದೆ. ಒಟ್ಟಾರೆ ಶ್ರಮಿಕರಲ್ಲಿ ಮಹಿಳೆಯರ ಸಂಖ್ಯೆ ಕಡಿಮೆಯಾಗುತ್ತಿರುವುದನ್ನು ಗಮನಿಸಬಹುದು. ಇದು ಕುಸಿಯುತ್ತಿರುವ ಆರ್ಥಿಕತೆ ಮಹಿಳೆಯರನ್ನು ಹೆಚ್ಚಾಗಿ ಬಾಧಿಸುತ್ತಿರುವುದನ್ನು ಸೂಚಿಸುತ್ತದೆ. ಹಾಗೆಯೇ ಇನ್ನೊಂದು ಗಮನಿಸಬೇಕಾದ ಅಂಶವೆಂದರೆ ಶಿಕ್ಷಣ ಪಡೆದವರಲ್ಲಿ ನಿರುದ್ಯೋಗ ದುಪ್ಪಟ್ಟು ಆಗಿರುವುದು.

ಐಎಸ್‌ಎಸ್‌ಓ ಸಮೀಕ್ಷೆ ಗಮನಿಸಿರುವ ಇನ್ನೊಂದು ಅಂಶ ಅಷ್ಟೇ ಮುಖ್ಯವಾದದ್ದು. ಕೂಲಿಯ ದರ ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿ ಸ್ಥಗಿತಗೊಂಡಿದೆ, ಇಲ್ಲ ಕಡಿಮೆಯಾಗಿದೆ. ಅಂದರೆ ಉದ್ಯೋಗಾವಕಾಶಗಳ ಜೊತೆಗೆ ಕೂಲಿಯೂ ಕಡಿಮೆಯಾಗುತ್ತಿರುವುದ–ರಿಂದ ಗ್ರಾಹಕರ ಬಳಕೆ ಶಕ್ತಿ ಹಾಗೂ ಹೂಡಿಕೆಯ ಪ್ರಮಾಣ ಕಡಿಮೆಯಾಗುತ್ತದೆ. ಗ್ರಾಹಕರ ಬಳಕೆಗೆ ಸಂಬಂಧಿಸಿದಂತೆ ಇನ್ನೂ ಬಿಡುಗಡೆಯಾಗದ ವರದಿಯೂ –ಸುದ್ದಿಯ ಪ್ರಕಾರ– ಇದನ್ನೇ ಹೇಳುತ್ತಿದೆ. ಇದು ಕಳೆದ ನಲವತ್ತು ವರ್ಷಗಳಲ್ಲಿ ಭಾರತದಲ್ಲಿ ಎಂದೂ ಆಗಿರಲಿಲ್ಲ. ಜಿಡಿಪಿಯ ಕುಸಿತ, ಉದ್ಯೋಗ ನಾಶ, ಗ್ರಾಹಕರ ಬೇಡಿಕೆಯಲ್ಲಿ ಕುಸಿತ, ಹಾಗಾಗಿ ಬಡತನ ಇವೆಲ್ಲವುಗಳು ತಡೆಯಿಲ್ಲದೆ ಏರುತ್ತಿವೆ. ಇದು ಗಂಭೀರ ಬಿಕ್ಕಟ್ಟನ್ನು ಸೂಚಿಸುತ್ತಿದೆ. ಬಹುಶಃ ಮನಮೋಹನ್ ಸಿಂಗ್ ಅಂತಹವರು ಆತಂಕಗೊಂಡಿರುವ ಆರ್ಥಿಕ ಸ್ಥಗಿತತೆಯ ಅಪಾಯದಲ್ಲಿ ನಾವು ಇದ್ದೇವೆ.

## ಮಹಿಳೆಯರ ಮೇಲೆ ನಿರುದ್ಯೋಗದ ಪರಿಣಾಮ

ಪರಿಹಾರ: ಸುಮಾರು ವರ್ಷಗಳಿಂದ ಭಾರತದ ಆರ್ಥಿಕತೆಯಲ್ಲಿ ಕುಸಿತ ಪ್ರಾರಂಭವಾಗಿದೆ. ನಗದು ಅಮಾನ್ಯೀಕರಣ, ಜಿಎಸ್‌ಟಿ ಇವೆಲ್ಲಾ ಪರಿಸ್ಥಿತಿಯನ್ನು ಇನ್ನಷ್ಟು ಹದಗೆಡಿಸಿವೆ. ಅದರಲ್ಲೂ ವಿಶೇಷವಾಗಿ ಗ್ರಾಮೀಣ ವಲಯದಲ್ಲಿ, ಹಾಗೂ ಸಣ್ಣ ಹಾಗೂ ಮಧ್ಯಮ ಉದ್ದಿಮೆಗಳಲ್ಲಿ ಇದರ ಪರಿಣಾಮ ತೀವ್ರವಾಗಿದೆ. ಇದ–ರಿಂದ ಒಟ್ಟಾರೆಯಾಗಿ ಬೇಡಿಕೆ ಕುಸಿಯುತ್ತಾ ಹೋಗುತ್ತಿದೆ. ಜಾಗತಿಕ ಮಟ್ಟದಲ್ಲೂ ಆರ್ಥಿಕತೆ ಕುಸಿಯುತ್ತಿರುವುದರಿಂದ ಬೇಡಿಕೆಯನ್ನು ರಫ್ತಿನ ಮೂಲಕ ಹೆಚ್ಚಿಸಿಕೊಳ್ಳಲೂ ಆಗುತ್ತಿಲ್ಲ.

ಸರ್ಕಾರ ಉದ್ಯೋಗ ಸೃಷ್ಟಿಸಬಲ್ಲ ಕ್ಷೇತ್ರಗಳಲ್ಲಿ ಹಣವನ್ನು ಹೂಡಬೇಕಾಗಿದೆ. ಶಿಕ್ಷಣ, ಆರೋಗ್ಯ, ಮೂಲಸೌಕರ್ಯ ತುರ್ತಾಗಿ ಸುಧಾರಿಸಬೇಕಾಗಿದೆ. ಆದರಲ್ಲಿ ಹಣ ಹೂಡುವುದರಿಂದ ಉದ್ಯೋಗ ಸೃಷ್ಟಿಯಾಗುತ್ತದೆ, ಬೇಡಿಕೆಯೂ ಹೆಚ್ಚುತ್ತದೆ. ನರೇಗಾದಂತಹ ಯೋಜನೆಗಳು ಹೆಚ್ಚು ಪರಿಣಾಮಕಾರಿಯಾಗಿ ಜಾರಿಗೊಳ್ಳಬೇಕಾಗಿವೆ. ಪ್ರಧಾನಮಂತ್ರಿ ಕಿಸಾನ್ ಯೋಜನೆಯನ್ನು ಘೋಷಿಸಲಾಯಿತು. ಆದರೆ ಅದಕ್ಕೆ ನಿಗದಿಯಾದ ಹಣವನ್ನು ಬಳಸಿಕೊಂಡೇ ಇಲ್ಲ. ಸರ್ಕಾರ ಭಾವನಾತ್ಮಕ ವಿಷಯಗಳ ಕಡೆ ಕೊಟ್ಟಷ್ಟು ಗಮನವನ್ನು

| ಆವಧಿ | ಡಬ್ಲ್ಯುಎಪಿಗೆ ಸೇರ್ಪಡೆ ಮಿಲಿಯನ್ನಿನಲ್ಲಿ | 'ಡಬ್ಲ್ಯುಎಪಿಗೆ ಸೇರ್ಪಡೆಗೊಂಡ ಶ್ರಮಿಕರ, ಉದ್ಯೋಗಸ್ಥರ, ವಿದ್ಯಾವಂತರ ಗುಂಪಿಗೆ ಸೇರ್ಪಡೆ ಶೇಕಡವಾರು | | | |
|---|---|---|---|---|---|
| ಪುರುಷರು ಮತ್ತು ಮಹಿಳೆಯರು | | ಶ್ರಮಿಕರು | ಉದ್ಯೋಗಸ್ಥರು | ವಿದ್ಯಾವಂತರು | ಶಿಕ್ಷಣ ಹಾಗೂ ಉದ್ಯೋಗದಿಂದ ಹೊರಗುಳಿದವರು |
| 1983–94 | 140.68 | 58.2 | 56.9 | 13 | 30.1 |
| 1994–2005 | 152.05 | 60.2 | 57.9 | 12.4 | 29.7 |
| 2005–12 | 137.63 | 14.5 | 14.7 | 30.3 | 55 |
| 2012–18 | 128.34 | 10.3 | –4.8 | 22.1 | 82.7 |
| ಪುರುಷರು ಮಾತ್ರ | | | | | |
| 1983–94 | 72.82 | 80.8 | 79.4 | 15.2 | 5.4 |
| 1994–2005 | 78.65 | 77.7 | 75.7 | 12.2 | 12.1 |
| 2005–12 | 65.66 | 56.3 | 55.7 | 35.5 | 8.8 |
| 2012–18 | 64.97 | 48.8 | 24.1 | 23 | 52.9 |
| ಕೇವಲ ಮಹಿಳೆಯರು | | | | | |
| 1983–94 | 67.85 | 34 | 32.8 | 10.6 | 56.6 |
| 1994–2005 | 73.4 | 41.4 | 38.8 | 12.6 | 48.6 |
| 2005–12 | 71.96 | –23.7 | –22.7 | 25.7 | 97 |
| 2012–18 | 63.36 | –29.1 | –34.4 | 21.2 | 113.2 |

ಆರ್ಥಿಕ ವಿಷಯಗಳ ಕಡೆ ಕೊಡುತ್ತಿಲ್ಲ. ಜೊತೆಗೆ ಇತ್ತೀಚೆಗೆ ಸರ್ಕಾರ ತೆಗೆದುಕೊಳ್ಳುತ್ತಿರುವ ಎಷ್ಟೋ ಕ್ರಮಗಳು ಸಮಾಜದಲ್ಲಿನ ಸಾಮರಸ್ಯಕ್ಕೆ ಧಕ್ಕೆ ತರುತ್ತಿವೆ. ಅದರ ಪರಿಣಾಮ ಆರ್ಥಿಕತೆಯ ಮೇಲೂ ಆಗುತ್ತಿದೆ ಆರ್ಥಿಕತೆಯಲ್ಲಿ ಜನರಿಗೆ ವಿಶ್ವಾಸ ಕಮ್ಮಿಯಾಗುತ್ತಿದೆ. ತೀರಾ ಗಂಭೀರವಾಗಿ ಆರ್ಥಿಕ ಸಮಸ್ಯೆಯನ್ನು ಬಗೆಹರಿಸಿಕೊಳ್ಳುವುದರ ಜೊತೆಯಲ್ಲೇ, ಜನರ ಯೋಗಕ್ಷೇಮಕ್ಕಾಗಿ ಯೋಜನೆಗಳನ್ನು ರೂಪಿಸಿಕೊಳ್ಳುತ್ತಾ, ಸಮಾಜದಲ್ಲಿ ಸಾಮರಸ್ಯವನ್ನು, ನೆಮ್ಮದಿಯನ್ನು ತರುವ ಕ್ರಮಗಳು ಜರೂರಾಗಿ ಬೇಕಾಗಿದೆ.



# ಭಾರತ ಮತ್ತು ವಿಶ್ವಾಸ ಕಳೆದುಕೊಂಡ ಆರ್ಥಿಕತೆ

## ಕೌಶಿಕ್ ಬಸು

ಸರ್ಕಾರ ತುಂಬಾ ಬಲವಾಗಿದ್ದರೆ ಅಂತಹ ದೇಶಗಳಲ್ಲಿ ಅಂತಿಮವಾಗಿ ಆರ್ಥಿಕತೆ ಬಳಲುತ್ತದೆ. ಭಾರತ ಕೂಡ ಅದೇ ಹಾದಿ ಹಿಡಿಯುವ ಅಪಾಯದಲ್ಲಿದೆ. ಈ ಮೊದಲು ಇಲ್ಲಿ ಆರ್ಥಿಕತೆ ತೃಪ್ತಿಕರವಾಗೇ ಇತ್ತು. ಜಾಗತಿಕ ಬ್ಯಾಂಕ್ ಬೇರೆ ಬೇರೆ ದೇಶಗಳಲ್ಲಿ ಉದ್ದಿಮೆ ನಡೆಸಲು ಇರುವ ವಾತಾವರಣ ಎಷ್ಟು ಅನುಕೂಲಕರವಾಗಿದೆ ಎಂಬುದನ್ನು ತೌಲನಿಕವಾಗಿ ಅಧ್ಯಯನ ಮಾಡಿ ಒಂದು ವರದಿಯನ್ನು ಪ್ರತಿ ವರ್ಷ ಪ್ರಕಟಿಸುತ್ತದೆ. ಈ ವರ್ಷವೂ ಅದು 190 ದೇಶಗಳಲ್ಲಿ ಅಂತಹ ಒಂದು ಅಧ್ಯಯನ ಮಾಡಿ ಒಂದು ವರದಿಯನ್ನು ಪ್ರಕಟಿಸಿದೆ. ಕಳೆದ ವರ್ಷ ಭಾರತ 77ನೇ ಸ್ಥಾನದಲ್ಲಿತ್ತು. ಈಗ ಅದರ ಸ್ಥಿತಿ ಸುಧಾರಿಸಿ ಅದು 63ನೇ ಸ್ಥಾನಕ್ಕೆ ಬಂದಿದೆ. ಭಾರತದ ಹಾಗೆ ಸೌದಿ ಅರೇಬಿಯಾ, ಪಾಕಿಸ್ಥಾನ ಮತ್ತು ಚೀನಾ ಮೊದಲಾದ ಹತ್ತು ದೇಶಗಳು ಈ ವರದಿಯಲ್ಲಿ ಪ್ರಗತಿಯನ್ನು ಸಾಧಿಸಿದೆ. ಆದರೆ ಭಾರತದಲ್ಲಿ ಪ್ರಮುಖ ಸೂಚಿಗಳು ಆರ್ಥಿಕತೆ ತೀವ್ರವಾಗಿ ಕುಸಿಯುತ್ತಿವೆ.

2014ರಲ್ಲಿ ಅಧಿಕಾರಕ್ಕೆ ಬಂದರೆ ಭಾರತವನ್ನು ಚೀನಾಕ್ಕೆ ಪ್ರತಿಸ್ಪರ್ಧಿಯಾಗಿ ಪ್ರಬಲವಾದ ಆರ್ಥಿಕ ಶಕ್ತಿಯನ್ನಾಗಿ ಮಾಡುತ್ತೇನೆ ಎಂಬ ಭರವಸೆಯನ್ನು ನರೇಂದ್ರ ಮೋದಿಯವರು ನೀಡಿದ್ದರು. ಆಯ್ಕೆಯೂ ಆದರು. ಈ ವರ್ಷ ಮತ್ತೆ ಚುನಾಯಿತರಾದ ಮೇಲೆ ಭಾರತವನ್ನು 2014ರವೇಳೆಗೆ 5 ಟ್ರಿಲಿಯನ್ ಡಾಲರ್ ಆರ್ಥಿಕತೆಯನ್ನಾಗಿ ಮಾಡುತ್ತೇನೆ ಎಂದು ಘೋಷಿಸಿದ್ದಾರೆ. ಅಂದರೆ ಆರ್ಥಿಕತೆಯನ್ನು ಈಗ ಇರುವುದರ ದುಪ್ಪಟ ಬೆಳೆಸುವುದಾಗಿ ತಿಳಿಸಿದ್ದಾರೆ.

ಸರ್ಕಾರದ ಅಧಿಕೃತ ಅಂಕಿಅಂಶಗಳ ಪ್ರಕಾರ ಭಾರತದ ವರಮಾನದ ಬೆಳವಣಿಗೆಯ ದರ ಈ ವರ್ಷದ ಎರಡನೆ ಪಾದದಲ್ಲಿ ಕೇವಲ ಶೇಕಡ 5ರಷ್ಟಿದೆ. ಕಳೆದ ವರ್ಷ ಅದು ಶೇಕಡ 8ರಷ್ಟಿತ್ತು. 2019ರಲ್ಲಿ ಭಾರತದ ಬೆಳವಣಿಗೆಯ ದರ ಶೇಕಡ 7.3ರಷ್ಟು ಇರುತ್ತದೆ ಎಂದು ಅಂತರರಾಷ್ಟ್ರೀಯ ಹಣಕಾಸು ನಿಧಿ ಏಪ್ರಿಲಿನಲ್ಲಿ ಅಂದಾಜು ಮಾಡಿತ್ತು. ಆದರೆ ಈಗಿನ ಪರಿಸ್ಥಿತಿಯನ್ನು ಗಮನಿಸಿ ತನ್ನ ಅಂದಾಜನ್ನು ಅದು ಶೇಕಡ 6.1ಕ್ಕೆ ಇಳಿಸಿದೆ. 2003ರಿಂದ 2011ರವರೆಗೆ ಬೆಳವಣಿಗೆ ದರ ಸುಮಾರಾಗಿ ಶೇಕಡ 8.5ರಷ್ಟಿತ್ತು. 2005ರಿಂದ 2008ರ ಅವಧಿಯಲ್ಲಿ ಭಾರತದ ಆರ್ಥಿಕತೆಯ ವಾರ್ಷಿಕ ಬೆಳವಣಿಗೆ ಶೇಕಡ 9ಕ್ಕಿಂತ ಹೆಚ್ಚಿತ್ತು. ಆದರೆ ಇತ್ತೀಚಿನ ದಿನಗಳಲ್ಲಿ ಅದು ದಿಢೀರನೆ ತೀರಾ ಕಮ್ಮಿಯಾಗಿದೆ. ಇದು ತೀರಾ ಅನಿರೀಕ್ಷಿತ, ಅಷ್ಟೇ ಕಳವಳಕಾರಿಯಾದ ಸಂಗತಿ. ವಿವರಗಳನ್ನು ಗಮಿಸಿದರೆ ಈ ಕುಸಿತ ಸ್ಪಷ್ಟವಾಗುತ್ತದೆ. ಪ್ರಯಾಣಿಕರ ಕಾರು ಮಾರಾಟ ಕೆಲ ದಿನಗಳಿಂದ ಇಳಿಯುತ್ತಿದೆ. 2018ಕ್ಕೆ ಹೋಲಿಸಿದರೆ ಏಪ್ರಿಲ್ ಮತ್ತು ಸೆಪ್ಟೆಂಬರ್ ನಡುವೆ ಅದು ಶೇಕಡ 23ರಷ್ಟು ಕುಸಿದಿದೆ. ಇದನ್ನು ಭಾರತೀಯ ಆಟೋಮೊಬೈಲ್ ಉತ್ಪಾದಕರ ಸಂಘವು ತಿಳಿಸಿದೆ. ರಫ್ತು ಹಲವು ದಿನಗಳಿಂದ ಮಂದಗೊಂಡಿದೆ. ಸ್ಟಾಂಡರ್ಡ್ ಅಂಡ್ ಪೂರ್ ಸಂಘಟನೆಯು ಭಾರತೀಯ ಹಣಕಾಸು ವಲಯದ ಹೆಚ್ಚುತ್ತಿರುವ ಅಪಾಯದ ಬಗ್ಗೆ ಎಚ್ಚರಿಸಿದೆ. ಈಗಿನ ನಿರುದ್ಯೋಗ ದರ ಕಳೆದ 45ವರ್ಷಗಳಲ್ಲೇ ಅತಿ ಹೆಚ್ಚಿನ ಮಟ್ಟವನ್ನು ತಲುಪಿದೆ.

ಆರ್ಥಿಕ ಬೆಳವಣಿಗೆ ನಿಧಾನವಾಗುತ್ತಿರುವುದರ ಜೊತೆಗೆ ಅಸಮಾನತೆಯು ಹೆಚ್ಚುತ್ತಿದೆ. ಆಕ್ಸ್‌ಫಾಮ್ ಪ್ರಕಾರ 2001ರಲ್ಲಿ ಶೇಕಡ 73ರಷ್ಟು ಸಂಪತ್ತು ಶೇಕಡ ಒಂದರಷ್ಟು ಶ್ರೀಮಂತ ಜನಕ್ಕೆ ಹೋಗುತ್ತಿತ್ತು. ಈ ಸರ್ಕಾರ ಅಧಿಕಾರಕ್ಕೆ ಬರುವ ಮೊದಲೇ ಅಸಮಾನತೆ ಹದಗೆಡುತ್ತಿತ್ತು. ಆದರೆ ಬೆಳವಣಿಗೆ ನಿಧಾನವಾಗುತ್ತಿರುವುದರಿಂದ ಮತ್ತು ನಿರುದ್ಯೋಗ ಹೆಚ್ಚುತ್ತಿರುವುದರಿಂದ ಅದರ ಪರಿಣಾಮ ಹೆಚ್ಚು ನೋವು ಉಂಟುಮಾಡುತ್ತಿದೆ.

ಕೆಲವು ಅಂದಾಜಿನ ಪ್ರಕಾರ ಆರ್ಥಿಕ ಬೆಳವಣಿಗೆ ಋಣಾತ್ಮಕವಾಗುತ್ತಿದೆ. ಪರಿಸ್ಥಿತಿ ಹೀಗಿದ್ದಾಗ ಭಾರತದಲ್ಲಿ ಉದ್ದಿಮೆ ನಡೆಸಲು ಬೇಕಾದ ವಾತಾವರಣ ಸುಧಾರಿಸುವುದಕ್ಕೆ ಹೇಗೆ ಸಾಧ್ಯ?

ಒಂದು ದೇಶದಲ್ಲಿನ ಉದ್ದಿಮ ನಡೆಸಲು ಇರುವ ಪರಿಸ್ಥಿತಿ ಎಷ್ಟು ಸಲೀಸಾಗಿದೆ ಎಂದು ನಿರ್ಧರಿಸಲು ವಿಶ್ವಬ್ಯಾಂಕ್ ಆಯಾ ದೇಶದಲ್ಲಿ ಲಿಖಿತರೂಪದಲ್ಲಿನ ಕಾನೂನನ್ನು ಗಮನಿಸುತ್ತದೆಯೇ ಹೊರತು ವಿನಃ ಆಚರಣೆಯಲ್ಲಿ ಅದು ಹೇಗೆ ಕೆಲಸ ಮಾಡುತ್ತಿದೆ ಅನ್ನುವುದನ್ನು ಪರಿಗಣಿಸುವುದಿಲ್ಲ. ವಿಶ್ವಬ್ಯಾಂಕಿನ ವರದಿಯೇ ಹೇಳುವಂತೆ "ವ್ಯವಹಾರ ನಡೆಸುವುದಕ್ಕೆ ವಾತಾವರಣ ಎಷ್ಟು ಸುಲಲಿತವಾಗಿದೆ ಎಂದು ಲೆಕ್ಕಹಾಕುವುದಕ್ಕೆ ಬಳಸುವ ಅಂಕಿಅಂಶದಲ್ಲಿ ಸುಮಾರು ಮೂರನೇ ಎರಡು ಭಾಗ ಕಾನೂನಿನ ಪಠ್ಯವನ್ನು ಆಧರಿಸಿರುತ್ತದೆ." ಅಂ–ದರೆ ಸರ್ಕಾರಗಳು ಬೇಕಾದರೆ ತಮ್ಮ ದೇಶದ ಸೂಚ್ಯಾಂಕವನ್ನು ಉತ್ತಮ ಪಡಿಸಿಕೊಳ್ಳುವುದಕ್ಕೆ ಅದಕ್ಕೆ ಬೇಕಾದ ಹಾಗೆ ನಿಯಮಗಳನ್ನು ಮಾರ್ಪಡಿಸಿಕೊಳ್ಳಬಹುದು. ಆದರೆ ಆ ಬದಲಾವಣೆಗಳು ವಾಸ್ತವದಲ್ಲಿ ಏನೂ ಪರಿಣಾಮ ಬೀರದೆಯೂ ಇರಬಹುದು.

ಆದರೆ ನಿಜವಾದ ಪ್ರಗತಿಯ ವಿಷಯದಲ್ಲಿ ಇದು ಸಾಧ್ಯವಿಲ್ಲ. ಅಲ್ಲಿ ವಾಸ್ತವದಲ್ಲಿ ಕಾನೂನು ಹೇಗೆ ಕೆಲಸ ಮಾಡುತ್ತವೆ ಅನ್ನುವುದು ಮುಖ್ಯವಾಗುತ್ತದೆ.

ಇತ್ತೀಚಿನ ದಿನಗಳಲ್ಲಿ ಇಡೀ ಸಮಾಜದಲ್ಲಿ ಒಡಕು ಹೆಚ್ಚುತ್ತಿದೆ. ಸರ್ಕಾರದ ಮೇಲಿನ ವಿಶ್ವಾಸ ಕಡಿಮೆಯಾಗುತ್ತಿದೆ. ಕೊನೆಯ ಪಕ್ಷ ಪ್ರಮುಖ ಆರ್ಥಿಕ ಅಂಶಗಳ ವಿಷಯದಲ್ಲಂತೂ ಈ ವಿಶ್ವಾಸದ ಕೊರತೆಯನ್ನು ಕಾಣಬಹುದು. ಹೂಡಿಕೆಯ ಕುಸಿತ ವಿಶ್ವಾಸದ ಕುಸಿತವನ್ನು ಪರೋಕ್ಷವಾಗಿ ಸೂಚಿಸುತ್ತದೆ. ಅದನ್ನು ಸಾಮಾನ್ಯವಾಗಿ ನಿರ್ಲಕ್ಷಿಸಲಾಗುತ್ತದೆ. ಅರ್ಥಶಾಸ್ತ್ರಜ್ಞರು "ಹೂಡಿಕೆ" ಅನ್ನುವಾಗ ರಾಷ್ಟ್ರೀಯ ಉತ್ಪನ್ನದ ಒಂದು ಭಾಗ ಮಾತ್ರವನ್ನು ಮಾತ್ರ ಪರಿಗಣನೆಗೆ ತೆಗೆದುಕೊಳ್ಳುತ್ತಾರೆ. ಅದರಲ್ಲಿ ಆಹಾರ, ಬಟ್ಟೆ, ವಸತಿ ಇತ್ಯಾದಿ ಬಳಕೆಯ ವಸ್ತುಗಳು ಸೇರುವುದಿಲ್ಲ. ಕೇವಲ ಮುಂದಿನ ಉತ್ಪಾದಕತೆಯನ್ನು

ಹೆಚ್ಚಿಸಬಲ್ಲ ಯಂತ್ರಗಳು, ಫ್ಯಾಕ್ಟರಿಗಳು ಮತ್ತು ಮೂಲಭೂತ ಸೌಕರ್ಯಗಳು ಮಾತ್ರ ಸೇರಿರುತ್ತವೆ.

ದುಡಿಯುವ ಜನ ಹೇರಳವಾಗಿ ಇರುವ ರಾಷ್ಟ್ರಗಳಲ್ಲಿ ಹೂಡಿಕೆ ಹೆಚ್ಚಿದಂತೆ ಒಟ್ಟಾರೆಯಾಗಿ ಬೆಳವಣಿಗೆಯೂ ಹೆಚ್ಚುತ್ತದೆ. ಇದನ್ನು ಆರ್ಥಿಕ ಸಿದ್ಧಾಂತಗಳೂ ಹೇಳುತ್ತವೆ, ವಾಸ್ತವ ಬದುಕಿನಲ್ಲೂ ಇದಕ್ಕೆ ಪುರಾವೆಗಳು ಸಿಗುತ್ತವೆ. ರಾಬರ್ಟ್ ಸೊಲೊ ಅವರ ಪ್ರಖ್ಯಾತ ಸಿದ್ಧಾಂತವೂ ಇದನ್ನೇ ಹೇಳುತ್ತದೆ. ಹಾಗೆಯೇ ಹಲವು ರಾಷ್ಟ್ರಗಳ ಉದಾಹರಣೆಗಳು, ಅದರಲ್ಲೂ ವಿಶೇಷವಾಗಿ 1980ರಲ್ಲಿ ಅತ್ಯಂತ ವೇಗವಾಗಿ ಬೆಳೆದ ಇಸ್ಟ್ ಏಶ್ಯನ್ ಆರ್ಥಿಕತೆಗಳು ಈ ಅಂಶವನ್ನು ಪುಷ್ಟೀಕರಿಸುತ್ತವೆ.

1947ರಲ್ಲಿ ಸ್ವಾಂತಂತ್ರ್ಯ ಬಂದ ಮೇಲೆ ಬಹು ವರ್ಷಗಳ ಕಾಲ ಇಂಡಿಯಾದಲ್ಲಿ ಹೂಡಿಕೆಯ ಪ್ರಮಾಣ ಕಡಿಮೆಯೇ ಇತ್ತು. 1970ರವರೆಗೆ ಭಾರತದ ಹೂಡಿಕೆ ಜಿಡಿಪಿಯ ಶೇಕಡ 20ನ್ನು ಮೀರಿರಲಿಲ್ಲ. 2004–05ರಲ್ಲಿ ಅದು ಮೊಟ್ಟಮೊದಲಿಗೆ ಶೇಕಡ 30ರ ಗಡಿಯನ್ನು ದಾಟಿತು. 2011–12ರಲ್ಲಿ ಶೇಕಡ 39ರಷ್ಟಾಗಿತ್ತು. 1980ರಲ್ಲಿ ಭಾರತ ಬಹುಮಟ್ಟಿಗೆ ಇಸ್ಟ್ ಏಷಿಯನ್ ಆರ್ಥಿಕತೆಯನ್ನು ಹೋಲುತ್ತಿತ್ತು. ಅವುಗಳ ಹಾಗೆಯೇ ಬೆಳೆಯಿತು. ನಂತರ ಹೂಡಿಕೆ ಇಳಿಮುಖವಾಗತೊಡಗಿತು. 2016–17ರಲ್ಲಿ ಅದು ಮತ್ತೆ ಶೇಕಡ 30ಕ್ಕೆ ಬಂತು.

ಆರ್ಥಿಕ ಪರಿಸ್ಥಿತಿ ಚೆನ್ನಾಗಿದ್ದರೆ ಅದರ ಬಗ್ಗೆ ಉದ್ದಿಮೆದಾರರಿಗೆ ಹೆಚ್ಚಿನ ವಿಶ್ವಾಸ ಹೆಚ್ಚಿರುತ್ತದೆ. ಆರ್ಥಿಕತೆ ಕುಸಿದರೆ ಅದರ ಬಗ್ಗೆ ವಿಶ್ವಾಸವೂ ಕುಸಿಯುತ್ತದೆ. ಇದು ನಿರೀಕ್ಷಿತವೇ. ಸಧ್ಯದ ಪರಿಸ್ಥಿತಿ ಹಾಗೂ ಭವಿಷ್ಯದಲ್ಲಿ ಅದು ಚೆನ್ನಾಗಿರುತ್ತದೆ ಎಂಬ ವಿಶ್ವಾಸ ಇದ್ದರೆ ಉದ್ದಿಮೆ ಹಣ ಹೂಡುತ್ತದೆ. ಇಲ್ಲದೇ ಹೋದರೆ ಬಂಡವಾಳ ಹೂಡುವುದಕ್ಕೆ ಹಿಂದೇಟು ಹಾಕುತ್ತವೆ. ಸರ್ಕಾರ ಮಾರ್ಕೆಟ್ಟಿನಲ್ಲಿ ತೀವ್ರವಾಗಿ ಹಸ್ತಕ್ಷೇಪ ಮಾಡಿದರೆ ವಿಶ್ವಾಸ ಕೆಡುತ್ತದೆ. ಉದಾಹರಣೆಗೆ 2016ರಲ್ಲಿ ಸರ್ಕಾರ ನೋಟನ್ನು ರದ್ದುಗೊಳಿಸಲು ನಿರ್ಧರಿಸಿದಾಗ ವಿಶ್ವಾಸಕ್ಕೆ ಹೊಡೆತ ಬಿತ್ತು. ಹಾಗೆಯೇ ರಾಜಕೀಯದಲ್ಲಿ ಅಥವಾ ಅಧಿಕಾರಶಾಹಿಯಲ್ಲಿ ಅಸಹನೆ ಕಂಡಬಂದಾಗಲೂ ವಿಶ್ವಾಸಕ್ಕೆ ಧಕ್ಕೆಯಾಗುತ್ತದೆ.

ಅರ್ಥಶಾಸ್ತ್ರಜ್ಞರು ಇದನ್ನು ಒಪ್ಪುವುದಕ್ಕೆ ಇಷ್ಟಪಡುವುದಿಲ್ಲ. ಆದರೆ ಒಂದು ದೇಶದ ಆರ್ಥಿಕ ಸ್ಥಿತಿ, ಆ ದೇಶದ ಆರ್ಥಿಕ ನೀತಿಯಷ್ಟೇ ಅದರ ರಾಜಕೀಯವನ್ನು ಆಧರಿಸಿರುತ್ತದೆ. ಸ್ವಾತಂತ್ರ್ಯ ಬಂದ ಪ್ರಾರಂಭದಲ್ಲಿ ಭಾರತ ರಾಜಕೀಯ ಸಂಸ್ಥೆಗಳನ್ನು ಸಂಘಟಿಸಿತು. ಪ್ರಜಾಸತ್ತೆ, ವಾಕ್ ಸ್ವಾತಂತ್ರ್ಯ, ಮುಕ್ತ ಮಾಧ್ಯಮ, ಧರ್ಮ ನಿರಪೇಕ್ಷತೆ, ಹಾಗೂ ಅಲ್ಪ ಸಂಖ್ಯಾತರ ಹಕ್ಕುಗಳ ರಕ್ಷಣೆ ಇವುಗಳಿಗೆ ಒತ್ತು ನೀಡಿತು. ಎರಡನೆಯ ಮಹಾಯುದ್ಧದ ನಂತರ ಎಲ್ಲಾ ದೇಶಗಳು ಸಾಮ್ರಾಜ್ಯಶಾಹಿಯ ಬಂಧನದಿಂದ ಸ್ವತಂತ್ರ್ಯಗೊಳ್ಳುತ್ತಿದ್ದಂತೆ ಇತರ ಕೆಲವು ಪ್ರಗತಿಪರ ನಾಯಕರು – ಉದಾಹರಣೆಗೆ ಇಂಡೋನೇಷಿಯ ಹಾಗೂ ಘಾನ ದೇಶಗಳ ನಾಯಕರು – ಪ್ರಯತ್ನಿಸಿದರು. ಆದರೆ ಅಂತಹ ಪ್ರಯತ್ನಗಳು ಯಶಸ್ವಿಯಾಗಲಿಲ್ಲ. ದಂಗೆ, ಗೊಂದಲ ಅಥವಾ ಘರ್ಷಣೆಗಳು ನಡೆದು ಒಂದಾದ ಮೇಲೆ ಒಂದು ದೇಶದಲ್ಲಿ ಪ್ರಜಾಸತ್ತೆ ನಾಶವಾಗುತ್ತಾ ಹೋಯಿತು. ಅಲ್ಲೆಲ್ಲಾ ಮಿಲಿಟರಿ ಆಡಳಿತ ಅಥವಾ ಧಾರ್ಮಿಕ ಘರ್ಷಣೆಗಳು ಪ್ರಾರಂಭವಾದವು. ಭಾರತ ತನ್ನ ಉದಾರವಾದೀ ಸಂವಿಧಾನ, ಚುನಾವಣೆ ಹಾಗೂ ಬಲವಾದ ಸುಪ್ರಿಂ ಕೋರ್ಟು ಇವುಗಳಿಂದಾಗಿ ಅದಕ್ಕೊಂದು ಅಪವಾದವಾಗಿ ಉಳಿದುಕೊಂಡಿತು.

ಸ್ವಾತಂತ್ರ್ಯ ಬಂದ ಪ್ರಾರಂಭದ ದಶಕಗಳಲ್ಲಿ ಇಂಡಿಯಾದಲ್ಲಿ ಆರ್ಥಿಕ ಬೆಳವಣಿಗೆ ನಿಧಾನವಾಗೇ ಸಾಗಿತ್ತು. ಭಾರತ ಪ್ರಾರಂಭದಲ್ಲಿ ಪ್ರಗತಿಪರ ರಾಜಕೀಯದಲ್ಲಿ ತೊಡಗಿಸಿಕೊಂಡಿತ್ತು. ಅದು ಸರಿಯಾದ ಆಯ್ಕೆಯೇ ಎನ್ನುವುದನ್ನು ಕುರಿತಂತೆ ಚರ್ಚೆ ಸಾಧ್ಯ (ಅದು ಸರಿಯಾದ ಆಯ್ಕೆ ಎಂದು ನನಗೆ ತೋರುತ್ತದೆ). ಆದರೆ ಆ ಆಯ್ಕೆಯನ್ನು ಮಾಡಿಕೊಂಡ ಮೇಲೆ ಅದರಿಂದ ದಕ್ಕಿದ ರಾಜಕೀಯ ಬಂಡವಾಳವನ್ನು, ಅದರಲ್ಲೂ ವಿಶೇಷವಾಗಿ 1990ರ ಮೊದಲ ಭಾಗದಲ್ಲಿ ಮತ್ತು 2003ರಲ್ಲಿ ಅದ್ಭುತವಾಗಿ ಯಶಸ್ಸು ಸಾಧಿಸಿದ ಮೇಲೆ ಈಗ ಕಳೆದುಕೊಳ್ಳುವುದು ಅಪರಾಧವಾಗುತ್ತದೆ. ಭಾರತದ ಆರ್ಥಿಕತೆಯ ಬುನಾದಿ ಇನ್ನೂ ಬಲವಾಗಿಯೇ ಇದೆ. ನಮ್ಮಲ್ಲಿ ಉದಾರವಾದೀ ಪ್ರವೃತ್ತಿಯು ನಾಶವಾಗಿದ್ದರಿಂದ ವಿಶ್ವಾಸ ಕುಸಿದಿದೆ. ಆರ್ಥಿಕ ಹಿಂಜರಿಕೆ ಉಂಟಾಗಿದೆ. ಭಾರತ ಮತ್ತೆ ತನ್ನ ಪ್ರಗತಿಪರ ಪರಂಪರೆಯನ್ನು ಕಂಡುಕೊಳ್ಳಬೇಕಾಗಿದೆ. ಅದನ್ನು ಆಧರಿಸಿ ನಮ್ಮ ಆರ್ಥಿಕತೆಯನ್ನು ಕಟ್ಟಬೇಕಾಗಿದೆ. ಹಾಗೆ ಮಾಡುವುದರಿಂದ ನಮ್ಮ ಆರ್ಥಿಕತೆಯನ್ನು ಮತ್ತೆ ಬೆಳೆಸಬಹುದು.

**ಕೌಶಿಕ್ ಬಸು ಅವರು ಕಾರ್ನೆಲ್ ವಿಶ್ವವಿದ್ಯಾನಿಲಯದಲ್ಲಿ ಇಂಟರ್ ನ್ಯಾಷನಲ್ ಸ್ಟಡೀಸ್ ಹಾಗು ಎಕಾನಮಿಕ್ಸ್ ಪ್ರಾಧ್ಯಾಪಕರು. 2009ರಿಂದ 2012ವರೆಗೆ ಭಾರತ ಸರ್ಕಾರದ ಪ್ರಮುಖ ಸಲಹೆಗಾರರಾಗಿದ್ದರು. 2012ರಿಂದ 2016ರವರೆಗೆ ಜಾಗತಿಕ ಬ್ಯಾಂಕಿನ ಪ್ರಮುಖ ಅರ್ಥಶಾಸ್ತ್ರಜ್ಞರಾಗಿದ್ದರು. ಇದು ನ್ಯೂಯಾರ್ಕ್ ಟೈಮ್ಸ್‌ನಲ್ಲಿ ಪ್ರಕಟವಾದ ಅವರ ಲೇಖನದ ಅನುವಾದ.**



# ಜಿಎಸ್‌ಟಿ ಪರಿಹಾರ ಪಾವತಿಯಲ್ಲಿನ ಬಿಕ್ಕಟ್ಟು


ಇಪಿಡಬ್ಲ್ಯು, ಸಂಪಾದಕೀಯ

**ಅನುವಾದ : ಶಿವಸುಂದರ್**

ಮಂದಗತಿಯಲ್ಲಿರುವ ಆರ್ಥಿಕತೆಯಲ್ಲಿ ಕಿರಿದಾಗುತ್ತಿರುವ ವಿತ್ತೀಯ ಅವಕಾಶವೇ ಜಿಎಸ್‌ಟಿ ಆದಾಯ ಪರಿಹಾರ ಪಾವತಿಯು ಎದುರಿಸುತ್ತಿರುವ ಹೊಸ ಆಪತ್ತಾಗಿದೆ.

ಯಾವುದೇ ತೆರಿಗೆ ಸುಧಾರಣಾ ಕ್ರಮಗಳೊಂದಿಗೆ ಬೆಸೆದುಕೊಂಡಿರುವ ಆದಾಯ ಗಳಿಕೆಯಲ್ಲಿನ ಅನಿಶ್ಚತೆಗಳು ಎಲ್ಲಾ ಸರ್ಕಾರಗಳಿಗೂ ಕಳವಳನ್ನುಂಟು ಮಾಡುತ್ತವೆ. ಹೀಗಾಗಿ ತೆರಿಗೆ ಸುಧಾರಣೆಯ ಬಗ್ಗೆ ವಿಶಾಲ ನೆಲೆಯ ಸರ್ವ ಸಮ್ಮತಿಯನ್ನು ರೂಢಿಸಬೇಕೆಂದರೆ ಯಾವುದಾದರೊಂದು ಬಗೆಯ ಆದಾಯ ರಕ್ಷಣೆಯ ಭರವಸೆಯ ಅಗತ್ಯವಿದ್ದೇ ಇರುತ್ತದೆ. ಹಾಗಾಗಿಯೇ, 2017ರ ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) (ರಾಜ್ಯಗಳಿಗೆ ಪರಿಹಾರ) ಕಾಯಿದೆಯಲ್ಲಿ ಜಿಎಸ್‌ಟಿ ಜಾರಿಯಾದ ಮೊದಲ ಐದು ವರ್ಷಗಳಲ್ಲಿ ರಾಜ್ಯಗಳ ಜಿಎಸ್‌ಟಿ(ಎಸ್‌ಜಿಎಸ್‌ಟಿ) ಮತ್ತು ಅಂತರರಾಜ್ಯ ಜಿಎಸ್‌ಟಿ ಗಳಿಕೆಯಲ್ಲಿ ಕೊರತೆ ಕಂಡು ಬಂದರೆ ಅವುಗಳ ರಾಜಸ್ವ ಆದಾಯ ರಕ್ಷಣೆಯ ಭರವಸೆಯನ್ನು ನೀಡುವ  ಅವಕಾಶವನ್ನು ಕಲ್ಪಿಸಿತ್ತು. ಮೇಲಾಗಿ ಈ ಆದಾಯ ರಕ್ಷಣೆಯ ಭರವಸೆಯನ್ನೂ ಆಧಾರಿಸಿಯೇ ಜಿಎಸ್‌ಟಿ ಪರಿಷತ್ತು ಆರ್ಥಿಕತೆಯ ಮೇಲೆ ಜಿಎಸ್‌ಟಿ ಹೆಚ್ಚಿನ ಪರಿಣಾಮವನ್ನು ಬೀರದಿರಲು ಹಾಗೂ ತೆರಿಗೆ ಕಟ್ಟುವುದನ್ನು ಸರಳೀಕರಿಸಲು ಬೇಕಾದ ವಿನ್ಯಾಸ, ರಚನೆ ಮತ್ತು ಆಡಳಿತಾತ್ಮಕ ನಿಯಮಗಳನ್ನು ರೂಪಿಸುವ ಪ್ರಯೋಗಗಳನ್ನು ಮಾಡುತ್ತಲಿದೆ. ಆದರೆ ಇಂದು ದೇಶದಲ್ಲಿ ಜಿಎಸ್‌ಟಿ ಸಂಗ್ರಹವೇ ಕುಸಿಯುತ್ತಿರುವಾಗ ಅದರಲ್ಲೂ, ಮುಖ್ಯವಾಗಿ, ಜಿಎಸ್‌ಟಿ ಆದಾಯ ಪರಿಹಾರದ ಅಗತ್ಯಗಳಿಗೂ ಮತ್ತು "ಜಿಎಸ್‌ಟಿ ಪರಿಹಾರ ಹೆಚ್ಚುವರಿ ತೆರಿಗೆ" ಸಂಗ್ರಹಗಳಿಗೂ ನಡುವಿನ ವ್ಯತ್ಯಾಸ ಬೆಳೆಯುತ್ತಾ, ಸರಿಯಾದ ಸಮಯದಲ್ಲಿ "ಜಿಎಸ್‌ಟಿ ಪರಿಹಾರದ ಮೊತ್ತ"ವನ್ನು ಬಿಡುಗಡೆಯ ವಿಷಯವು ಕೇಂದ್ರ ಹಾಗೂ ರಾಜ್ಯಗಳ ತಿಕ್ಕಾಟಗಳಿಗೆ ಕಾರಣವಾಗುತ್ತಿರುವಾಗ, ಈ ದೇಶದ ಆದಾಯ ಪರಿಹಾರ ವ್ಯವಸ್ಥೆಯನ್ನು ಸುಗಮಗೊಳಿಸುವುದರಲ್ಲಿ ಜಿಎಸ್‌ಟಿ ಪರಿಹಾರ ಕಾಯಿದೆಯ ಪರಿಣಾಮಕತೆ ಪ್ರಶ್ನಾರ್ಹವಾಗಿದೆ.

2015–16ರಲ್ಲಿ ರಾಜ್ಯಗಳ ಎಲ್ಲಾ ತೆರಿಗೆಗಳೂ ಎಸ್‌ಜಿಎಸ್‌ಟಿಯಲ್ಲಿ ವಿಲೀನವಾಗುವ ಮುನ್ನ ಎಷ್ಟು ಮೊತ್ತದ ತೆರಿಗೆಯನ್ನು ಸಂಗ್ರಹಿಸುತ್ತಿದ್ದವೋ ಅದರ ಶೇ.14ರಷ್ಟು ಹೆಚ್ಚುವರಿ ಮೊತ್ತವನ್ನು ಪ್ರತಿವರ್ಷ ರಾಜ್ಯಗಳ ತೆರಿಗೆ ಸಂಗ್ರಹವಾಗುತ್ತಿದ್ದವೆಂಬ ಲೆಕ್ಕದಲ್ಲಿ ರಾಜ್ಯಗಳ ಎಸ್‌ಜಿಎಸ್‌ಟಿ ಯನ್ನು ಅಂದಾಜಿಸಲಾಗಿದೆ. ಅದೇ ಸಮಯದಲ್ಲಿ 2022ರ ಜೂನ್ 30 ರ ತನಕ ಜಿಎಸ್‌ಟಿ ಪರಿಹಾರವನ್ನು ಪಾವತಿಸಲು 2017ರ ಜುಲೈ 1 ರಿಂದ ಪಾನ್ ಮಸಾಲ, ತಂಬಾಕು ಮತ್ತಿತರ ತಂಬಾಕು ಉತ್ಪನ್ನಗಳು, ನೀರು ಸೋಡಾ, ಪ್ರಯಾಣಿಕರ ವಾಹನ ಇವೇ ಇನ್ನಿತ್ಯಾದಿ ಸರಕುಗಳ ಮೇಲೆ "ಜಿಎಸ್‌ಟಿ ಪರಿಹಾರ ಹೆಚ್ಚುವರಿ ತೆರಿಗೆಯನ್ನು" ವಿಧಿಸಿ ಜಿಎಸ್‌ಟಿ ಪರಿಹಾರ ನಿಧಿಗೆ ಹೆಚ್ಚುವರಿ ಮೊತ್ತವನ್ನು ಸಂಗ್ರಹಿಸುವ ಪ್ರಯತ್ನವನ್ನು ಮಾಡುತ್ತಾ ಬರಲಾಗಿದೆ. ಆದರೂ ಜಿಎಸ್‌ಟಿ ಪರಿಹಾರ ಧನವನ್ನು ರಾಜ್ಯಗಳಿಗೆ ವಿತರಣೆ



ಮಾಡುವುದರಲ್ಲಿ ಮಾತ್ರ ನಿರಂತರವಾಗಿ ವಿಳಂಬವಾಗುತ್ತಲೇ ಬಂದಿದೆ. ಉದಾಹರಣೆಗೆ ಏಪ್ರಿಲ್ ಮತ್ತು ಮೇ ತಿಂಗಳಲ್ಲಿನೀಡಬೇಕಿದ್ದ 17,789 ಕೋಟಿ ರೂ.ಗಳ ಮೊತ್ತವು ಬಿಡುಗಡೆಯಾಗಿದ್ದು 2019ರ ಜುಲೈನಲ್ಲಿ. ಹಾಗೆಯೇ 2019ರ ಜೂನ್ ಮತ್ತು ಜುಲೈನಲ್ಲಿ ನೀಡಬೇಕಿದ್ದ 27,955 ಕೋಟಿ ರೂಗಳು ಬಿಡುಗಡೆಯಾಗಿದ್ದು ಆಗಸ್ಟ್‌ನಲ್ಲಿ. ಹಾಗೂ 2019ರ ಆಗಸ್ಟ್ ಮತ್ತು ಸೆಪ್ಟೆಂಬರ್‌ನ ಬಾಕಿಯಾಗಿದ್ದ 35,298 ಕೋಟಿ ರೂ.ಗಳು ಬಿಡುಗಡೆಯಾಗಿದ್ದು ಡಿಸೆಂಬರ್ ಮಧ್ಯದಲ್ಲಿ.

ಜಿಎಸ್‌ಟಿ ಪರಿಹಾರ ಪಾವತಿಯಲ್ಲಿ ವಿಳಂಬವಾಗುತ್ತಿರುವುದು ಹೊಸದೇನೂ ಅಲ್ಲವಾದರೂ ಜಿಎಸ್‌ಟಿ ಪರಿಹಾರ ಪಾವತಿ ಸಂಬಂಧಿಸಿದಂತೆ ಹಾಲಿ ಉದ್ಭವವಾಗಿರುವ ಬಿಕ್ಕಟ್ಟಿನ ಹಿಂದಿನ ಕಾರಣಗಳು ವಿಶೇಷವಾಗಿವೆ. ಮೊದಲಿಗೆ ಎಸ್‌ಜಿಎಸ್‌ಟಿ ಸಂಗ್ರಹದಲ್ಲಿ ಕಂಡುಬಂದಿರುವ ಕುಸಿತ ಮತ್ತು ಭಾರತದ ಆರ್ಥಿಕತೆಯ ಒಟ್ಟಾರೆ ಇಳಿಮುಖತೆಯ ಕಾರಣದಿಂದಾಗಿ ಒಟ್ಟಾರೆ ಜಿಎಸ್‌ಟಿ ಸಂಗ್ರಹದಲ್ಲೇ ಇಳಿಕೆಯಾಗಿ ಉದ್ಭವಿಸಿರುವ ಆದಾಯ ಅನಿಶ್ಚತೆಯೇ ಹಾಲಿ ವಿಳಂಬಕ್ಕೆ ಕಾರಣವೆಂದು ಹೇಳಲಾಗುತ್ತಿದೆ. ಜಿಡಿಪಿಯ ದರದಲ್ಲಿ ಏರಿಕೆ ಕಂಡು ತೆರಿಗೆ ಸಂಗ್ರಹದ ಸಾಧ್ಯತೆಯು ಹೆಚ್ಚಾಗದೆ ಜಿಎಸ್‌ಟಿ ಪರಿಹಾರ ಪಾವತಿಯಲ್ಲಿ ವಿಳಂಬವು ಮುಂದುವರೆಯುವುದಲ್ಲದೆ ಬರುವ ದಿನಗಳಲ್ಲಿ ಕೇಂದ್ರ ಮತ್ತು ರಾಜ್ಯಗಳ ನಡುವೆ ಘರ್ಷಣೆಯೂ ಹೆಚ್ಚಾಗಲಿದೆ. ಎರಡನೆಯದಾಗಿ ಮೊದಲ ಕಾರಣವನ್ನು ಮತ್ತಷ್ಟು ಬಿಗಡಾಯಿಸುವ ಸಂಗತಿಯೇನೆಂದರೆ ಒಂದೊಮ್ಮೆ ಜಿಎಸ್‌ಟಿ ಪರಿಹಾರ ಹೆಚ್ಚುವರಿ ತೆರಿಗೆ ಕುಸಿದಲ್ಲಿ ಅನುಸರಿಸಬೇಕಾದ ವಿಧಾನಗಳ ಬಗ್ಗೆ ಜಿಎಸ್‌ಟಿ ಕಾಯಿದೆಯು ಯಾವುದೇ ಮಾರ್ಗದರ್ಶನವನ್ನು ನೀಡುವುದಿಲ್ಲ. ಕಾಯದೆಯ ವ್ಯಾಪ್ತಿಯಲ್ಲಿ ಜಿಎಸ್‌ಟಿ ವ್ಯವಸ್ಥೆಗೆ ಪರಿವರ್ತನೆಗೊಳ್ಳುತ್ತಿರುವ ಅವಧಿಯಲ್ಲಿ ರಾಜ್ಯಗಳಿಗೆ ಜಿಎಸ್‌ಟಿ ಪರಿಹಾರವನ್ನು ಪಾವತಿ ಮಾಡುವುದು ಸಂಪೂರ್ಣವಾಗಿ ಕೇಂದ್ರದ ಜವಾಬ್ದಾರಿಯಾಗಿದೆ. ಆದರೆ ಆರ್ಥಿಕತೆಯು ಇಳಿಮುಖಗೊಂಡಿರುವ ಈ ಸಂದರ್ಭದಲ್ಲಿ ಜಿಎಸ್‌ಟಿ ಪರಿಹಾರವನ್ನು ಪಾವತಿಸಲು ಹೆಚ್ಚುವರಿ ತೆರಿಗೆಯನ್ನು ಸಂಗ್ರಹಿಸುವುದು ಭಾರತದ ಸಾರ್ವಜನಿಕ ಹಣಕಾಸು ನಿರ್ವಹಣೆಗೆ ಸವಾಲಾಗಿ ಪರಿಣಮಿಸಲಿದೆ.

ಬಿಹಾರಿನಂತಹ ಕೆಲವು ರಾಜ್ಯಗಳನ್ನು ಹೊರತುಪಡಿಸಿದರೆ ಬಹುಪಾಲು ರಾಜ್ಯಗಳಿಗೆ ಎಸ್‌ಜಿಎಸ್‌ಟಿ ಯಡಿ ವಿಲೀನವಾದ ತೆರಿಗೆ ಬಾಬತ್ತುಗಳಲ್ಲಿ ಶೇ.14ರಷ್ಟು ಅಭಿವೃದ್ಧಿಯನ್ನು ಸಾಧಿಸುವ ಸಾಮರ್ಥ್ಯವಿಲ್ಲ. ಆದ್ದ–ರಿಂದಲೇ ಆದಾಯ ರಕ್ಷಣೆಯ ಭರವಸೆಯು ಜಿಎಸ್‌ಟಿ ವ್ಯವಸ್ಥೆಯೊಡನೆ ಹೊಂದಿಕೊಂಡು ಹೋಗುವಂತಹ ವಿತ್ತೀಯ ಅವಕಾಶವನ್ನು ದೊರಕಿಸುತ್ತದೆ. ಈ ಕಾರಣಗಳಿಗಾಗಿಯೇ, ಜಿಎಸ್‌ಟಿ ಆದಾಯ ಪರಿಹಾರ ವ್ಯವಸ್ಥೆಯನ್ನು ಇನ್ನೂ ಮೂರು ವರ್ಷಗಳ ಕಾಲ ಅಂದರೆ 2024–25ರವರೆಗೆ ವಿಸ್ತ–ರಿಸಬೇಕೆಂದು ಹಲವಾರು ರಾಜ್ಯಗಳು 15ನೇ ಹಣಕಾಸು ಅಯೋಗದ ಮೊರೆ ಹೋಗಿದ್ದಾರೆ. ಜಿಎಸ್‌ಟಿ ಪರಿಹಾರ ಅವಧಿಯನ್ನು ವಿಸ್ತರಿಸುವ ಅಧಿಕಾರವು ನಾಮಮಾತ್ರಕ್ಕೆ ಜಿಎಸ್‌ಟಿ ಪರಿಷತ್ತಿಗಿದೆಯಾದರೂ, ಅಂತಿಮ ತೀರ್ಮಾನವನ್ನು ಮಾತ್ರ ಕೇಂದ್ರ ಸರ್ಕಾರವೇ ತೆಗೆದುಕೊಳ್ಳಬೇಕಿರುತ್ತದೆ. ಆದರೆ ಒಟ್ಟಾರೆ ಜಿಎಸ್‌ಟಿ ಸಂಗ್ರಹವೇ ಕುಸಿದಿರುವಾಗ ಈ ಕೂಡಲೇ ಜಿಎಸ್‌ಟಿ ಪರಿಹಾರ ಹೆಚ್ಚುವರಿ ತೆರಿಗೆಯನ್ನು ಈ ಸದ್ಯಕ್ಕೆ ಹಿಂತೆಗೆದುಕೊಳ್ಳುವ ಯಾವ ಸೂಚನೆಯೂ ಇಲ್ಲ. ಆದರೆ ಒಂದು ವೇಳೆ ಜಿಎಸ್‌ಟಿ ಪರಿಹಾರದ ಅವಧಿಯನ್ನು ಹೆಚ್ಚಿಸಿದರೂ, ತೆರಿಗೆ ಸಂಗ್ರಹ ಸಾಧ್ಯತೆ ಹೆಚ್ಚಾಗದೆ ಅಥವಾ ಒಟ್ಟಾರೆ ಜಿಡಿಪಿ ಅಭಿವೃದ್ಧಿಯಲ್ಲಿ ಹೆಚ್ಚಳವಾಗದೆ, ಈಗ ನಿಗದಿಯಾಗಿರುವ ಶೇ.14ರ ತೆರಿಗೆ ಹೆಚ್ಚಳದ ದರದಲ್ಲಿ ಪರಿಹಾರವನ್ನು ಕೊಡುವಷ್ಟು ವಿತ್ತೀಯ ಸಾಮರ್ಥ್ಯವನ್ನು ಕೇಂದ್ರ ಸರ್ಕಾರವು ಹೊಂದಿದೆಯೇ?

ಹಾಲಿ ಪರಿಸ್ಥಿತಿಯು ಭಾರತದ ವಿತ್ತೀಯ ಒಕ್ಕೂಟ ರಚನೆಗೆ ಎದುರಾಗುತ್ತಿರುವ ಬಿಕ್ಕಟ್ಟಿನ ಮುನ್ಸೂಚನೆಯೇ? ಆ ಬಗೆಯ ಯಾವುದೇ ತೀರ್ಮಾನಗಳಿಗೆ ಬರಲು ಇನ್ನೂ ಸಮಯ ಬೇಕು. ಆದರೆ ಜಿಎಸ್‌ಟಿ ವ್ಯವಸ್ಥೆಗೆ ಸ್ಥಿತ್ಯಂತರಗೊಳ್ಳುತ್ತಿರುವ ಈ ಹೊತ್ತಿನಲ್ಲಿ ಆದಾಯ ರಕ್ಷಣೆಗೆ ನಿಗದಿಯಾಗಿರುವ ತೆರಿಗೆ ಸಂಗ್ರಹ ಹೆಚ್ಚಳದ ದರವನ್ನು ಏಕಪಕ್ಷೀಯವಾಗಿ ಕಡಿತ ಮಾಡುವುದು ವಿತ್ತೀಯ ಒಕ್ಕೂಟ ವ್ಯವಸ್ಥೆಯ ಮೇಲಿನ ವಿಶ್ವಾಸವನ್ನು ಕಡಿಮೆ ಮಾಡುವ ಸಂಭವವನ್ನು ನಿರಾಕರಿಸಲಾಗುವುದಿಲ್ಲ. ತೆರಿಗೆ ನಷ್ಟಕ್ಕೆ ಸೂಕ್ತವಾದ ಪರಿಹಾರ ವ್ಯವಸ್ಥೆ ಇಲ್ಲವಾದಾಗ ಪರಿಹಾರದ ಅವಧಿಯ ನಂತರ ರಾಜ್ಯಗಳು ಜಿಎಸ್‌ಟಿ ವ್ಯವಸ್ಥೆಯೊಳಗೆ ಮುಂದುವರೆಯಲು ಬೇಕಾದ ಬಂಧವೇ ಇಲ್ಲವಾಗುತ್ತದೆ. ಅದೇ ಸಮಯದಲ್ಲಿ ಪರಿಹಾರ ವ್ಯವಸ್ಥೆಯು ನಿರಂತರವಾಗಿ ಮುಂದುವರೆಯುವುದೂ ಸಾಧ್ಯವಿಲ್ಲವೆಂಬುದನ್ನು ರಾಜ್ಯಗಳು ಅರ್ಥಮಾಡಿಕೊಂಡು ಬರಲಿರುವ ಪರಿಹಾರ ಮೊತ್ತವನ್ನು ಆಧರಿಸಿ ತಮ್ಮ ವೆಚ್ಚದ ಯೋಜನೆಯನ್ನು ರೂಪಿಸುವುದನ್ನೂ ಸಹ ಬಿಡಬೇಕಿರುತ್ತದೆ. ಹೀಗಾಗಿ ರಾಜ್ಯಗಳು ತಮ್ಮದೇ ಆದ ತೆರಿಗೆ ಹಾಗೂ ತೆರಿಗೆಯೇತರ ಆದಾಯ ಮೂಲವನ್ನು ಹೆಚ್ಚಿಸಿಕೊಳ್ಳಬೇಕಿರುತ್ತದೆ ಅಥವಾ ತಮ್ಮ ಅನುತ್ಪಾದಕ ವೆಚ್ಚಗಳ ಮೇಲೆ ನಿಯಂತ್ರಣವನ್ನು ಸಾಧಿಸಿ ವಿತ್ತೀಯ ಧೃಢೀಕರಣದ ಹಾದಿಯನ್ನು ಹಿಡಿಯಬೇಕಿರುತ್ತದೆ. ಹೀಗಾಗಿ ಪರಿಹಾರದ ಅವಧಿಯಾದ ನಂತರದಲ್ಲಿ ಎದುರಾಗಬಹುದಾದ ಯಾವುದೇ ವಿತ್ತೀಯ ಆಘಾತವನ್ನು ಎದುರಿಸಲು ಬೇಕಾದ ತಯಾರಿಯನ್ನು ಈಗಿನಿಂದಲೇ ಮಾಡಿಕೊಳ್ಳುವುದಕ್ಕೆ ರಾಜ್ಯಗಳು ಈ ಅವಧಿಯನ್ನು ಬಳಸಿಕೊಳ್ಳಬಹುದು.